ಶನಿವಾರ, ಸೆಪ್ಟೆಂಬರ್ 18, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಭರಣ
ಬೆಂಗಳೂರಿನ ಚಿತ್ರಕಲಾ ಪರಿಷತ್ ಆವರಣದಲ್ಲಿ ಆಯೋಜಿಸಿರುವ 'ಬೆಂಗಳೂರು ಆರ್ಟ್ಸ್ ಮತ್ತು ಕ್ರಾಫ್ಟ್ಸ್ ಮೇಳ'ವನ್ನು ನಟ ಚಂದನಾ ರಾಘವೇಂದ್ರ ಅವರು ಶುಕ್ರವಾರ ಉದ್ಘಾಟಿಸಿ, ಆಭರಣಗಳನ್ನು ವೀಕ್ಷಿಸಿದರು



ಶನಿವಾರ, ಸೆಪ್ಟೆಂಬರ್ 18, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 260 | ಪುಟ 26
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಮದುವೆ ಎಂದರೆ ಹಿಂದೇಟು ಹಾಕುವ ಮಿಲೇನಿಯಲ್ ಯುಗದ ಹುಡುಗಿಯರು 'ನೋ ಮ್ಯಾರೇಜ್ ಟ್ರೆಂಡ್'ಗೆ ಸೈ ಎನ್ನುತ್ತಿದ್ದಾರೆ

ಚರ್ಚೆ
ಪೆಗಾಸಸ್ ಬೇಹುಗಾರಿಕೆ ಪ್ರಕರಣ: ಮಾಹಿತಿ ಬಹಿರಂಗಪಡಿಸದಿರುವ ಕೇಂದ್ರದ ಕ್ರಮ ಸರಿಯೇ? 7

ಎಸ್‌ಎಡಿಯಿಂದ ಕರಾಳ ದಿನ 3B

ತಾಲಿಬಾನ್‌ಗೆ ಮಾನ್ಯತೆ: ತಳ್ಳಿಹಾಕಿದ ಪ್ರಧಾನಿ 10

ಸೆನ್ಸೆಕ್ಸ್	ನಿಫ್ಟಿ	₹/$
59,015 ▼	17,585 ▼	73.48 ▲

ಒಳ ಪುಟಗಳು

ಕೇರಳ ಹೈಕೋರ್ಟ್‌ಗೆ ವಿವರ ನೀಡಲಿರುವ ಕೇಂದ್ರ ಸರ್ಕಾರ

ಪೆಟ್ರೋಲ್, ಡೀಸೆಲ್: ಇಲ್ಲ ಜಿಎಸ್‌ಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಟ್ರೋಲ್, ಡೀಸೆಲ್ ಹಾಗೂ ಇತರ ಪೆಟ್ರೋಲಿಯಂ ಉತ್ಪನ್ನಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರಲು ಸಮಯ ಪಕ್ವವಾಗಿಲ್ಲ ಎಂದು ಜಿಎಸ್‌ಟಿ ಮಂಡಳಿ ಶುಕ್ರವಾರ ಅಭಿಪ್ರಾಯಪಟ್ಟಿದೆ.



ನಿರ್ಮಲಾ ಸೀತಾರಾಮನ್

'ಪೆಟ್ರೋಲ್ ಹಾಗೂ ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ವಿಚಾರವು ಕೇರಳ ಹೈಕೋರ್ಟ್ ನೀಡಿದ್ದ ಸೂಚನೆಯ ಕಾರಣದಿಂದಾಗಿ ಮಾತ್ರ ಚರ್ಚೆಗೆ ಬಂದಿತು. ಆದರೆ, ಇವುಗಳನ್ನು ಈ ವ್ಯವಸ್ಥೆಯ ಅಡಿಯಲ್ಲಿ ತರಲು ಕಾಲ ಪಕ್ವವಾಗಿಲ್ಲ ಎಂಬ ಅನಿಸಿಕೆಯು ಮಂಡಳಿಯ ಸಭೆಯಲ್ಲಿ ವ್ಯಕ್ತವಾಯಿತು' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಲಖನೌನಲ್ಲಿ ಈ ಸಭೆ ನಡೆಯಿತು. 2019ರ ಡಿಸೆಂಬರ್ ನಂತರ ಸಭೆಯು ಭೌತಿಕವಾಗಿ ನಡೆದಿರುವುದು ಇದೇ ಮೊದಲು. ಕೋವಿಡ್ ಕಾರಣದಿಂದಾಗಿ ಸಭೆಗಳು ವರ್ಚುವಲ್ ಆಗಿ ನಡೆದಿದ್ದವು.

ಪೆಟ್ರೋಲಿಯಂ ಉತ್ಪನ್ನಗಳನ್ನು ಈ ಸಂದರ್ಭದಲ್ಲಿ ಜಿಎಸ್‌ಟಿ ವ್ಯಾಪ್ತಿಗೆ ತರುವುದಕ್ಕೆ ತಮ್ಮ ಸಮ್ಮತಿ ಇಲ್ಲ ಎಂದು ಹಲವು ರಾಜ್ಯಗಳು ಹೇಳಿದವು. ಈ ವಿಚಾರವನ್ನು ಕೇಂದ್ರ ಸರ್ಕಾರವು ಕೇರಳ ಹೈಕೋರ್ಟ್‌ಗೆ ತಿಳಿಸಲಿದೆ ಎಂದು ನಿರ್ಮಲಾ ಅವರು ವಿವರಿಸಿದರು. ರಿಟ್ ಅರ್ಜಿಯೊಂದರ ವಿಚಾರಣೆ ನಡೆಸಿದ್ದ ಕೇರಳ ಹೈಕೋರ್ಟ್, ಪೆಟ್ರೋಲ್ ಮತ್ತು ಡೀಸೆಲ್‌ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಬಗ್ಗೆ ತೀರ್ಮಾನ ಕೈಗೊಳ್ಳುವಂತೆ ಜೂನ್‌ನಲ್ಲಿ ಜಿಎಸ್‌ಟಿ ಮಂಡಳಿಗೆ ಸೂಚಿಸಿತ್ತು.

ಪೆಟ್ರೋಲ್ ಹಾಗೂ ಡೀಸೆಲ್‌ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ, ಇವುಗಳ ಮೇಲೆ ವಿಧಿಸಲಾಗುತ್ತಿರುವ ತೆರಿಗೆ ತಗ್ಗುತ್ತದೆ. ಪರಿಣಾಮವಾಗಿ, ಇವುಗಳ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ಗಣನೀಯವಾಗಿ ಇಳಿಕೆ ಆಗುತ್ತದೆ. ಆದರೆ, ಹೀಗೆ ಮಾಡುವುದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವರಮಾನಕ್ಕೆ ಪೆಟ್ಟು ಬೀಳುತ್ತದೆ.

ಆಹಾರ ವಸ್ತುಗಳನ್ನು ರೆಸ್ಟಾರೆಂಟ್, ಹೋಟೆಲ್‌ಗಳಿಂದ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಸ್ವಿಗ್ಗಿ, ಜೊಮ್ಯಾಟೊದಂತಹ ಕಂಪನಿಗಳು ಶೇಕಡ 5ರಷ್ಟು ಜಿಎಸ್‌ಟಿ ಪಾವತಿಸಬೇಕು ಎಂಬ ತೀರ್ಮಾನವನ್ನು ಮಂಡಳಿ ಕೈಗೊಂಡಿದೆ. ಈ ಪ್ರಮಾಣದ ತೆರಿಗೆಯನ್ನು ಆಹಾರ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸುವ ಸಂದರ್ಭದಲ್ಲಿ ವಸೂಲು ಮಾಡಬೇಕಿದೆ. ಇದುವರೆಗೆ ತೆರಿಗೆಯನ್ನು ರೆಸ್ಟಾರೆಂಟ್‌ಗಳು ಪಾವತಿಸುತ್ತಿದ್ದವು.

ಜಿಎಸ್‌ಟಿ ಪರಿಹಾರ ಸೆಸ್‌ಅನ್ನು 2026ರ ಮಾರ್ಚ್‌ವರೆಗೆ ವಿಸ್ತರಿಸಲು ಮಂಡಳಿ ತೀರ್ಮಾನಿಸಿದೆ. ಇದು 2022ರ ಜುಲೈಗೆ ಅಂತ್ಯಗೊಳ್ಳಬೇಕಿತ್ತು.

ಪ್ರಮುಖ ತೀರ್ಮಾನಗಳು



- ಕೋವಿಡ್ ಚಿಕಿತ್ಸೆಯಲ್ಲಿ ಬಳಸುವ ಕೆಲವು ಔಷಧಗಳಿಗೆ ಜಿಎಸ್‌ಟಿ ದರದಲ್ಲಿ ವಿನಾಯಿತಿ ಡಿಸೆಂಬರ್ 31ರವರೆಗೆ ಮುಂದುವರಿಕೆ. ಆದರೆ, ಕೆಲವು ವೈದ್ಯಕೀಯ ಉಪಕರಣಗಳಿಗೆ ನೀಡಿದ್ದ ವಿನಾಯಿತಿಯು ಸೆಪ್ಟೆಂಬರ್ 30ಕ್ಕೆ ಕೊನೆಗೊಳ್ಳಲಿದೆ.
- ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುವ ಔಷಧಗಳ ಮೇಲಿನ ತೆರಿಗೆ ಶೇ 12ರಿಂದ ಶೇ 5ಕ್ಕೆ ಇಳಿಕೆ.
- ಸ್ನಾಯು ಕ್ಷೀಣತೆ ಚಿಕಿತ್ಸೆಯಲ್ಲಿ ಬಳಸುವ ಕೆಲವು ಔಷಧಗಳಿಗೆ (Zolgensma, Viltepso) ಜಿಎಸ್‌ಟಿಯಿಂದ ವಿನಾಯಿತಿ.
- ಡೀಸೆಲ್ ಜೊತೆ ಬೆರೆಸಲು ಬಳಸುವ ಜೈವಿಕ-ಡೀಸೆಲ್ ಮೇಲಿನ ತೆರಿಗೆ ಶೇ 12ರಷ್ಟು ಇದ್ದಿದ್ದು ಶೇ 5ಕ್ಕೆ ಇಳಿಕೆ.
- ಸರಕು ಸಾಗಣೆ ವಾಹನಕ್ಕೆ ರಾಷ್ಟ್ರೀಯ ಪರವಾನಗಿ ಶುಲ್ಕಕ್ಕೆ ಜಿಎಸ್‌ಟಿ ವಿನಾಯಿತಿ.
- ಎಲ್ಲ ಬಗೆಯ ಪೆನ್‌ಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕರ್ನಾಟಕ ಹೈಕೋರ್ಟ್‌ಗೆ ಅವಸ್ಥಿ ಸಿಜೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಎಂಟು ಹೈಕೋರ್ಟ್‌ಗಳಿಗೆ ಮುಖ್ಯ ನ್ಯಾಯಮೂರ್ತಿಗಳ (ಸಿಜೆ) ನೇಮಕ ಮತ್ತು ಐದು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ವರ್ಗಾವಣೆಗೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ಹಿರಿಯ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲು ಶಿಫಾರಸು ಮಾಡಲಾಗಿದೆ.



ಅವಸ್ಥಿ



ಸತೀಶ್ ಚಂದ್ರ



ಅರವಿಂದ ಕುಮಾರ್

ತ್ರಿಪುರಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಕಿಲ್ ಖುರೇಷಿ ಅವರನ್ನು ರಾಜಸ್ಥಾನದ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಶಿಫಾರಸು ಮಾಡಲಾಗಿದೆ. ಖುರೇಷಿ ಅವರು ಮೊದಲು ಗುಜರಾತ್ ಹೈಕೋರ್ಟ್‌ನಲ್ಲಿ ಇದ್ದರು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಅವರಿಗೆ ಬಡ್ತಿ ನೀಡುವ ವಿಚಾರದಲ್ಲಿ ಕೊಲಿಜಿಯಂ ಸದಸ್ಯರಲ್ಲಿ ಸಹಮತ ಮೂಡಿರಲಿಲ್ಲ. ಹಾಗಾಗಿಯೇ, ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ನೀಡುವ ಪ್ರಕ್ರಿಯೆಯು ನ್ಯಾಯಮೂರ್ತಿ ಆರ್. ಎಫ್. ನರಿಮನ್ ಅವರು ಆಗಸ್ಟ್ 12ರಂದು ನಿವೃತ್ತಿಯಾಗುವ ತನಕ ಸ್ಥಗಿತಗೊಂಡಿತ್ತು.

ಕರ್ನಾಟಕ ಹೈಕೋರ್ಟ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಅವರಿಗೆ ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಬಡ್ತಿ ನೀಡಲು ಶಿಫಾರಸು ಮಾಡಲಾಗಿದೆ. ಕರ್ನಾಟಕ ಹೈಕೋರ್ಟ್‌ನಲ್ಲಿದ್ದ ನ್ಯಾಯಮೂರ್ತಿ ಅರವಿಂದ ಕುಮಾರ್ ಅವರಿಗೆ ಗುಜರಾತ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಮತ್ತು ಕರ್ನಾಟಕ ಹೈಕೋರ್ಟ್‌ನಲ್ಲಿ ಈ ಹಿಂದೆ ಇದ್ದ ಆರ್.ವಿ.ಮಳಿಮಠ ಅವರಿಗೆ ಮಧ್ಯ ಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಬಡ್ತಿ ಕೊಡಲು ಶಿಫಾರಸು ಮಾಡಲಾಗಿದೆ.

10ನೇ ಪುಟ ನೋಡಿ

ಹೋರಾಟದ ಬದುಕಿಗೆ 75 ವಸಂತ: 19 ರಂದು ಕವಿಗೋಷ್ಠಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೇಖಕಿ ಬಿ.ಟಿ.ಲಲಿತಾ ನಾಯಕ್ ಅವರ ಹೋರಾಟದ ಬದುಕಿಗೆ 75 ವಸಂತಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಬಂಜಾರ ಸಾಹಿತಿ ಮತ್ತು ಕಲಾವಿದರ ವೇದಿಕೆ ಹಾಗೂ ಬಿ.ಟಿ. ಲಲಿತಾ ನಾಯಕ್ ಅಭಿಮಾನಿಗಳು ಮತ್ತು ಹಿತೈಷಿಗಳ ಬಳಗವು ಇದೇ 19ರಂದು ಕವಿಗೋಷ್ಠಿ ಆಯೋಜಿಸಿದೆ.

'ಸಂಜಯನಗರದ ರಾಜಮಹಲ್ ವಿಲಾಸ್ ಎರಡನೇ ಹಂತದ ಕಲ್ಪನಾ ಚಾವ್ಲಾ ರಸ್ತೆಯಲ್ಲಿರುವ ಶಾಸ್ತ್ರಿ ಮೆಮೋರಿಯಲ್ ಹಾಲ್‌ನಲ್ಲಿ ಬೆಳಿಗ್ಗೆ 11.30ರಿಂದ ಮಧ್ಯಾಹ್ನ 2.30ರವರೆಗೆ ಕಾರ್ಯಕ್ರಮ ನಡೆಯಲಿದೆ. ಲೇಖಕ ಎಸ್.ಜಿ.ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ಬೇರೆಡೆ ಸ್ಥಳಾಂತರಕ್ಕೆ ಹೆಬ್ಬಾಳ ಕ್ಷೇಮಾಭಿವೃದ್ಧಿ ಸಂಘ ಒತ್ತಾಯ

ಸೌಕರ್ಯ ಇಲ್ಲದ ಉಪನೋಂದಣಾಧಿಕಾರಿ ಕಚೇರಿ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ವಾಹನ ನಿಲುಗಡೆಗೆ ಜಾಗವಿಲ್ಲ, ಕುಡಿಯುವ ನೀರಿನ ಸೌಕರ್ಯ ಇಲ್ಲ, ಶೌಚಾಲಯ ಇಲ್ಲ, ಸಾರಿಗೆ ಸಂಪರ್ಕವಂತೂ ಇಲ್ಲವೇ ಇಲ್ಲ...

ಇದು ಚೋಳನಾಯಕನಹಳ್ಳಿಯಲ್ಲಿನ ಹೆಬ್ಬಾಳ ಉಪನೋಂದಣಾಧಿಕಾರಿ ಕಚೇರಿಯ ಚಿತ್ರಣ. ಇಲ್ಲಿನ ಬಾಡಿಗೆ ಕಟ್ಟಡವೊಂದರಲ್ಲಿ ಈ ಕಚೇರಿ ಇದೆ. ಆಸ್ತಿ ನೋಂದಣಿ, ವಿವಾಹ ನೋಂದಣಿಗಾಗಿ ನಿತ್ಯ ಈ ಕಚೇರಿಗೆ ನೂರಾರು ಜನರು ಬರುತ್ತಾರೆ. ರಸ್ತೆ ಬದಿಯಲ್ಲಿರುವ ಕಚೇರಿ ಬಳಿ ವಾಹನ ನಿಲುಗಡೆಗೆ ಜಾಗವೇ ಇಲ್ಲ.

ಸರ್ವರ್ ಸಮಸ್ಯೆ ಹಾಗೂ ದಾಖಲೆಗಳ ಸಂಗ್ರಹ ವಿಳಂಬದಿಂದಾಗಿ ಆಸ್ತಿ ನೋಂದಣಿ ಪ್ರಕ್ರಿಯೆ ದಿನಗಟ್ಟಲೆ ಹಿಡಿಯುತ್ತದೆ. ಬೆಳಿಗ್ಗೆ ಕಚೇರಿಗೆ ಬಂದರೆ ಆಸ್ತಿ ನೋಂದಣಿ ಕಾರ್ಯ ಮುಗಿಸುವಷ್ಟರಲ್ಲಿ ಸಂಜೆಯೇ ಆಗುತ್ತದೆ. ಬೆಳಿಗ್ಗೆಯಿಂದ ಸಂಜೆ ತನಕ ಕಾಯಬೇಕಾದ ನಾಗರಿಕರಿಗೆ ವಾಹನ ನಿಲುಗಡೆಗೆ ನಿಗದಿತ ಜಾಗವೇ ಇಲ್ಲ. ರಸ್ತೆ ಬದಿಯಲ್ಲಿ ನಿಲ್ಲಿಸುವುದರಿಂದ ಮೊದಲೇ ಕಿರಿದಾದ ರಸ್ತೆಯಲ್ಲಿ ಬೇರೆ ವಾಹನ ಮತ್ತು ಪಾದಚಾರಿಗಳ ಸಂಚಾರಕ್ಕೆ ತೊಡಕಾಗುತ್ತಿದೆ. ರಸ್ತೆ ಬದಿಯಲ್ಲೂ ಕೆಲವೇ ವಾಹನಗಳ ನಿಲುಗಡೆಗೆ ಅವಕಾಶ ಇರುವುದರಿಂದ ದ್ವಿಚಕ್ರ ವಾಹನ ಮತ್ತು ಕಾರುಗಳಲ್ಲಿ ಕಚೇರಿಗೆ ಬರುವ ಜನ ಪರದಾಡಬೇಕಾಗಿದೆ.


ಉಪನೋಂದಣಾಧಿಕಾರಿ ಕಚೇರಿ ಎದುರಿನ ಚಿತ್ರಣ

'ಕಚೇರಿ ಇರುವ ರಸ್ತೆಗೆ ಬಿಎಂಟಿಸಿ ಬಸ್ ಬರುವುದಿಲ್ಲ. ಬಸ್‌ನಲ್ಲಿ ಬರುವ ನಾಗರಿಕರು ಎರಡು ಕಿಲೋ ಮೀಟರ್ ದೂರದಲ್ಲೇ ಇಳಿದು ನಡೆದುಕೊಂಡೇ ಕಚೇರಿಗೆ ಬರಬೇಕಾದ ಸ್ಥಿತಿ ಇದೆ. ಜನರಿಗೆ ಮೂಲಭೂತವಾಗಿ ಬೇಕಾಗಿರುವ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಕರ್ಯ ಕಚೇರಿಯಲ್ಲಿ ಇಲ್ಲ. ಇರುವ ಶೌಚಾಲಯವು ನಿರ್ವಹಣೆ ಇಲ್ಲದೆ ಹಾಳಾಗಿ ಕಸ ಸುರಿಯುವ ಜಾಗವಾಗಿ ಮಾರ್ಪಟ್ಟಿದೆ. ಪಕ್ಕದಲ್ಲೇ ಹೋಟೆಲ್ ಮತ್ತು ಗುಜರಿ ಅಂಗಡಿಗಳಿದ್ದು, ಅಲ್ಲಿನ ಕಸ ಕೂಡ ಈ ಕಚೇರಿ ಆವರಣ ಸೇರುತ್ತಿದೆ' ಎನ್ನುತ್ತಾರೆ ಸ್ಥಳೀಯರು.

'ಎರಡನೇ ಮಹಡಿಯಲ್ಲಿರುವ ಈ ಕಟ್ಟಡಕ್ಕೆ ಲಿಫ್ಟ್ ಇದ್ದರೂ ಆಗಾಗ ಕೆಟ್ಟು ನಿಲ್ಲುತ್ತದೆ. ಆಸ್ತಿಯೊಂದರ ನೋಂದಣಿಗೆ ಕುಟುಂಬದ 31 ಸದಸ್ಯರೊಂದಿಗೆ ಬಂದಿದ್ದೆವು. ಅನಾರೋಗ್ಯದಿಂದ ಬಳಲುತ್ತಿರುವ ತಾಯಿಯನ್ನು ಎರಡನೇ ಮಹಡಿಗೆ ಕರೆದೊಯ್ಯಲು ಸಾಧ್ಯವೇ ಆಗಲಿಲ್ಲ. ಬ್ಯಾಟರಾಯನಪುರದ ಉಪನೋಂದಣಾಧಿಕಾರಿ ಕಚೇರಿಗೆ ಕರೆದೊಯ್ದು ಆಸ್ತಿ ನೋಂದಣಿ ಮಾಡಿಸಲಾಯಿತು. ಕಿಷ್ಕಿಂಧೆಯಂತಹ ಈ ಸ್ಥಳದಲ್ಲಿ ಕಚೇರಿ ನಡೆಸುವ ಬದಲು ಬೇರೆಡೆಗೆ ಸ್ಥಳಾಂತರ ಮಾಡುವುದು ಸೂಕ್ತ' ಎಂದು ಹೆಬ್ಬಾಳದ ನಂದೀಶ್ ಹೇಳಿದರು.

'ಕೋವಿಡ್ ಸಂದರ್ಭದಲ್ಲಿ ಯಾವುದೇ ನಿಯಮ ಪಾಲಿಸದ ಈ ಕಚೇರಿಗೆ ಹೋಗುವುದೆಂದರೆ ಭಯವಾಗುತ್ತದೆ. ಅತ್ಯಂತ ಕೆಟ್ಟ ಸ್ಥಿತಿಯಲ್ಲಿರುವ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರಿಸಬೇಕು' ಎಂದು ಆರ್.ಟಿ.ನಗರದ ರಾಘವೇಂದ್ರ ಒತ್ತಾಯಿಸಿದರು.

'ಆರ್.ಟಿ. ನಗರಕ್ಕೆ ಕಚೇರಿ ಸ್ಥಳಾಂತರಿಸಲು ನೋಂದಣಿ ಮತ್ತು ಮುದ್ರಾಂಕ ಆಯುಕ್ತರು ಆದೇಶಿಸಿದ್ದಾರೆ. ಕೆಲವರು ಇದಕ್ಕೆ ಅಡ್ಡಗಾಲು ಹಾಕುತ್ತಿದ್ದಾರೆ. ಕಂದಾಯ ಸಚಿವರು ಅದಕ್ಕೆ ಕಿವಿಗೊಡದೆ ಕಚೇರಿ ಸ್ಥಳಾಂತರ ಮಾಡಬೇಕು. ಆ ಮೂಲಕ ನಾಗರಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು' ಎಂದು ಹೆಬ್ಬಾಳ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ಮೂಲಸೌಕರ್ಯ ಸಮಸ್ಯೆ ಕುರಿತು ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಉಪನೋಂದಣಾಧಿಕಾರಿ ಕೆ.ಆರ್.ನಾಗರಾಜ್ ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ.

'ಪ್ರಜಾವಾಣಿ' ಅಭಿಯಾನಕ್ಕೆ ಬಿಎಂಆರ್‌ಸಿಎಲ್ ಸ್ಪಂದನೆ

ಮೆಟ್ರೊ: ಇಂದಿನಿಂದ ರಾತ್ರಿ 10ರವರೆಗೆ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೆಟ್ರೊ ರೈಲು ಸಂಚಾರ ಸಮಯ ವಿಸ್ತರಿಸಬೇಕು ಎಂದು ಒತ್ತಾಯಿಸಿ 'ಪ್ರಜಾವಾಣಿ' ನಡೆಸಿದ ಅಭಿಯಾನಕ್ಕೆ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಮನ್ನಣೆ ನೀಡಿದೆ.

ಶನಿವಾರದಿಂದ (ಸೆ.18) ಮೆಟ್ರೊ ರೈಲುಗಳು ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೆ ಸಂಚರಿಸಲಿವೆ.

ಬೈಯಪ್ಪನಹಳ್ಳಿ, ಕೆಂಗೇರಿ, ನಾಗಸಂದ್ರ ಮತ್ತು ರೇಷ್ಮೆ ಸಂಸ್ಥೆ ಮೆಟ್ರೊ ನಿಲ್ದಾಣಗಳಿಂದ ರಾತ್ರಿ 9.30ಕ್ಕೆ ಕೊನೆಯ ರೈಲು ಹೊರಡಲಿದೆ.

ವಾರದ ದಿನಗಳಲ್ಲಿ ದಟ್ಟಣೆಯ ಅವಧಿಯಲ್ಲಿ 5 ನಿಮಿಷಗಳ ಅಂತರದಲ್ಲಿ, ಪ್ರಯಾಣಿಕರ ದಟ್ಟಣೆ ಇರದ ಸಂದರ್ಭದಲ್ಲಿ ಪ್ರತಿ 10 ನಿಮಿಷಕ್ಕೊಂದು ರೈಲು ಸಂಚರಿಸಲಿದೆ.


ಮೆಟ್ರೊ ರೈಲು

ರೇಷ್ಮೆ ಸಂಸ್ಥೆ ಮತ್ತು ಕೆಂಗೇರಿ ನಿಲ್ದಾಣಗಳಿಂದ ದಿನವಿಡೀ ಪ್ರತಿ 10 ನಿಮಿಷಕ್ಕೆ ಒಂದು ರೈಲು ಸೇವೆ ಲಭ್ಯವಿರುತ್ತದೆ ಎಂದು ನಿಗಮ ಹೇಳಿದೆ.

ಶನಿವಾರ, ಭಾನುವಾರ ಮತ್ತು ಸಾಮಾನ್ಯ ರಜಾ ದಿನಗಳಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಅವಲಂಬಿಸಿ ಕಾರ್ಯಾಚರಣೆಯಲ್ಲಿ ರೈಲುಗಳ ನಡುವಿನ ಅಂತರ ನಿಗದಿ ಪಡಿಸಲಾಗುವುದು ಎಂದೂ ಬಿಎಂಆರ್‌ಸಿಎಲ್ ತಿಳಿಸಿದೆ.

ಈ ಮೊದಲು, ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ಮಾತ್ರ ಸೇವೆ ಲಭ್ಯವಿತ್ತು. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿತ್ತು. ಮೆಟ್ರೊ ಸೇವೆಯ ಸಮಯ ಕಡಿತಗೊಳಿಸಿದ್ದರಿಂದ ಪ್ರಯಾಣಿಕರಿಗೆ ಆಗುವ ಸಮಸ್ಯೆಗಳ ಕುರಿತು 'ಪ್ರಜಾವಾಣಿ'ಯಲ್ಲಿ ಸೆ.12ರಿಂದ ಸತತ ಆರು ದಿನ ವರದಿಗಳನ್ನು ಪ್ರಕಟಿಸಲಾಗಿತ್ತು.

ಬಸ್ ಮತ್ತು ರೈಲು ಸಂಚಾರವಿದ್ದರೂ ಮೆಟ್ರೊ ರೈಲು ಸೇವೆಯ ಅವಧಿಯನ್ನು ಮಾತ್ರ ಕಡಿತಗೊಳಿಸಿದ್ದರಿಂದ ಪ್ರಯಾಣಿಕರು ತೊಂದರೆಗೀಡಾಗಿದ್ದರು. ಶಾಲಾ–ಕಾಲೇಜು, ಸರ್ಕಾರಿ–ಖಾಸಗಿ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿದ್ದರೂ ಮೆಟ್ರೊ ರೈಲು ಸಂಚಾರಕ್ಕೆ ಮಾತ್ರ ರಾತ್ರಿ ಕರ್ಫ್ಯೂ 'ನೆಪ' ಹೇಳಲಾಗಿತ್ತು. ಸಾರ್ವಜನಿಕ ಸಾರಿಗೆಗಳಲ್ಲಿ ಸಮನ್ವಯತೆ ಇರಬೇಕು ಎಂದು ಪ್ರಯಾಣಿಕರು ಆಗ್ರಹಿಸಿದ್ದರು.

ಸಚಿವರು, ಸಂಸದರು, ಶಾಸಕರು ಮತ್ತು ಸಾರ್ವಜನಿಕರು ಮೆಟ್ರೊ ರೈಲು ಸೇವೆ ವಿಸ್ತರಿಸಬೇಕು ಎಂದು ಒತ್ತಾಯಿಸಿದ್ದರು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ ಅವರನ್ನು ಸಂಸದ ಪಿ.ಸಿ. ಮೋಹನ್ ಭೇಟಿ ಮಾಡಿ, ಮೆಟ್ರೊ ರೈಲು ಸಂಚಾರ ಸಮಯ ವಿಸ್ತರಿಸುವಂತೆ ಮನವಿ ಸಲ್ಲಿಸಿದ್ದರು.

'ಜನರ ಬೇಡಿಕೆಗೆ ಮೆಟ್ರೊ ನಿಗಮ ಸ್ಪಂದಿಸಿದೆ. ನಿಗಮಕ್ಕೆ ಧನ್ಯವಾದಗಳು' ಎಂದು ಮೋಹನ್ ತಿಳಿಸಿದ್ದಾರೆ.

21ರಂದು ಪ್ರತಿಭಟನೆ

ಬೆಂಗಳೂರು: 'ನೇರ ವೇತನಕ್ಕೆ ಒಳಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಇದೇ 21ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತೇವೆ' ಎಂದು ಕರ್ನಾಟಕ ರಾಜ್ಯ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಎಂ.ಬಿ.ನಾಗಣ್ಣಗೌಡ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಇಲ್ಲಿ ಮಾತನಾಡಿದ ಅವರು 'ಕೋವಿಡ್ ನಡುವೆಯೂ ನೌಕರರು ಜೀವದ ಹಂಗು ತೊರೆದು ಕೆಲಸ ಮಾಡಿದ್ದಾರೆ. ಅವರಿಗೆ ಕನಿಷ್ಠ ವೇತನ ನೀಡಲಾಗುತ್ತಿದ್ದು, ಇದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಅಧಿಕಾರಿಗಳು ವಿಪರೀತ ಕಿರುಕುಳ ನೀಡುತ್ತಿದ್ದಾರೆ. ಅದನ್ನು ಸಹಿಸಿಕೊಂಡೇ ಕೆಲಸ ಮಾಡಬೇಕಾದ ಪರಿಸ್ಥಿತಿ ಇದೆ. ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದು ನಮ್ಮ ಉದ್ದೇಶ. ಹೀಗಾಗಿ ಪ್ರತಿಭಟನೆಯ ಹಾದಿ ಹಿಡಿದಿದ್ದೇವೆ' ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಅಧಿಕಾರ ವಿಕೇಂದ್ರೀಕರಣ

ಜಂಟಿ ನಿರ್ದೇಶಕರ ಹುದ್ದೆಗಳ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರ ಹುದ್ದೆಗಳ ಕಾರ್ಯಸ್ಥಾನವನ್ನು ಬೆಂಗಳೂರು, ಕಲಬುರ್ಗಿ, ಬೆಳಗಾವಿ ಮತ್ತು ಮೈಸೂರು ಕಂದಾಯ ವಲಯಗಳಿಗೆ ಸ್ಥಳಾಂತರ ಮಾಡಿ ಆದೇಶ ಹೊರಡಿಸಲಾಗಿದೆ.

ಸಾರ್ವಜನಿಕರು ತಮ್ಮ ಕೆಲಸಗಳಿಗಾಗಿ ಕೇಂದ್ರ ಕಚೇರಿಗೆ ಬರುವ ಅನಿವಾರ್ಯತೆಯನ್ನು ತಪ್ಪಿಸಿ ಆಯಾ ವಲಯವಾರು ಜಂಟಿ ನಿರ್ದೇಶಕರ ಬಳಿಯೇ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂಬ ಕಾರಣದಿಂದ ಬೆಂಗಳೂರು, ಕಲಬುರ್ಗಿ, ಬೆಳಗಾವಿ ಮತ್ತು ಮೈಸೂರು ವಲಯಗಳಲ್ಲಿ ವಲಯವಾರು ಜಂಟಿ ನಿರ್ದೇಶಕರನ್ನು ನೇಮಕ ಮಾಡುವುದು ಸೂಕ್ತ ಎಂಬ ಅಭಿಪ್ರಾಯ ಬಂದಿತ್ತು. ಈ ಕಾರಣದಿಂದ ಕ್ರಮ ತೆಗೆದುಕೊಂಡಿರುವುದಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ತಿಳಿಸಿದ್ದಾರೆ.


ವಿ.ಸುನೀಲ್ ಕುಮಾರ್

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮಾಚರಣೆಗೆ ವ್ಯಾಪಕ ಸಿದ್ಧತೆ ಮಾಡಿಕೊಳ್ಳಬೇಕಾಗಿರುವ ಕಾರಣ ಸೆಪ್ಟೆಂಬರ್ ಒಳಗೆ ಎಲ್ಲಾ ಜಂಟಿ ನಿರ್ದೇಶಕರು ತಮಗೆ ಸೂಚಿಸಿದ ವಲಯ ಕಚೇರಿಗಳಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕು ಮತ್ತು ನೂರು ದಿನಗಳ ಕಾರ್ಯ ಯೋಜನೆ ಸಿದ್ಧಪಡಿಸಬೇಕು ಎಂದು ಅವರು ಆದೇಶದಲ್ಲಿ ಸೂಚಿಸಿದ್ದಾರೆ.

ಎಲ್ಲೆಲ್ಲಿ ಯಾವ ಹುದ್ದೆಗಳು :

- ಕೇಂದ್ರ ಕಚೇರಿಯಲ್ಲಿದ್ದ (ಸುವರ್ಣ ಕರ್ನಾಟಕ) ಜಂಟಿ ನಿರ್ದೇಶಕರ ಹುದ್ದೆ ಮುಂದುವರೆಯುತ್ತದೆ (ಬೆಂಗಳೂರು)
- ಧಾರವಾಡ ರಂಗಾಯಣದ ಆಡಳಿತಾಧಿಕಾರಿ ಹುದ್ದೆಯನ್ನು ಕೇಂದ್ರ ಕಚೇರಿ ಜಂಟಿ ನಿರ್ದೇಶಕರ ಹುದ್ದೆಗೆ ಸ್ಥಳಾಂತರಿಸಲಾಗಿದೆ (ಬೆಂಗಳೂರು)
- ಜಂಟಿ ನಿರ್ದೇಶಕ (ಸಾಮಾನ್ಯ) ಹುದ್ದೆಯನ್ನು ಬೆಂಗಳೂರು ವಿಭಾಗ ಜಂಟಿ ನಿರ್ದೇಶಕರನ್ನಾಗಿ ಸ್ಥಳಾಂತರಿಸಲಾಗಿದೆ(ಬೆಂಗಳೂರು ವಿಭಾಗ)
- ಕೇಂದ್ರ ಕಚೇರಿಯ ಜಂಟಿ ನಿರ್ದೇಶಕ (ಆಡಳಿತ) ಹುದ್ದೆಯನ್ನು ಮೈಸೂರು ವಿಭಾಗದ ಜಂಟಿ ನಿರ್ದೇಶಕರ ಹುದ್ದೆಗೆ ಸ್ಥಳಾಂತರಿಸಲಾಗಿದೆ(ಮೈಸೂರು ವಿಭಾಗ)
- ಕೇಂದ್ರ ಕಚೇರಿಯ ಜಂಟಿ ನಿರ್ದೇಶಕ (ಕಾರ್ಯಕ್ರಮ) ಹುದ್ದೆಯನ್ನು ಕಲಬುರ್ಗಿ ವಲಯದ ಜಂಟಿ ನಿರ್ದೇಶಕರನ್ನಾಗಿ ವರ್ಗಾಯಿಸಲಾಗಿದೆ (ಕಲಬುರ್ಗಿ ವಿಭಾಗ)
- ಶಿವಮೊಗ್ಗ ರಂಗಾಯಣದ ಜಂಟಿ ನಿರ್ದೇಶಕರ ಹುದ್ದೆಯನ್ನು ಬೆಳಗಾವಿ ವಿಭಾಗದ ಜಂಟಿ ನಿರ್ದೇಶಕರ ಹುದ್ದೆಗೆ ಸ್ಥಳಾಂತರಿಸಲಾಗಿದೆ(ಬೆಳಗಾವಿ ವಿಭಾಗ)
- ರಿಜಿಸ್ಟ್ರಾರ್ ಸಂಗೀತ ನೃತ್ಯ ಅಕಾಡೆಮಿ ಹುದ್ದೆಯನ್ನು ಶಿವಮೊಗ್ಗ ರಂಗಾಯಣ ಆಡಳಿತಾಧಿಕಾರಿಯ ಹುದ್ದೆಗೆ ಸ್ಥಳಾಂತರಿಸಲಾಗಿದೆ (ಶಿವಮೊಗ್ಗ)
- ಕೇಂದ್ರ ಕಚೇರಿಯ ಸಹಾಯ ನಿರ್ದೇಶಕ(ಸುವರ್ಣ ಕರ್ನಾಟಕ) ಹುದ್ದೆಯನ್ನು ರಿಜಿಸ್ಟ್ರಾರ್ ಸಂಗೀತ ನೃತ್ಯ ಅಕಾಡೆಮಿಗೆ ಸ್ಥಳಾಂತರ(ರಿಜಿಸ್ಟ್ರಾರ್ ಸಂಗೀತ ನೃತ್ಯ ಅಕಾಡೆಮಿ)
- ಧಾರವಾಡ ರಂಗಾಯಣ ಆಡಳಿತಾಧಿಕಾರಿ ಹುದ್ದೆಗೆ ರಿಜಿಸ್ಟ್ರಾರ್ ಕರ್ನಾಟಕ ಲಲಿತಕಲಾ ಅಕಾಡೆಮಿ ಹುದ್ದೆಯನ್ನು ಸ್ಥಳಾಂತರಿಸಲಾಗಿದೆ(- ಧಾರವಾಡ ರಂಗಾಯಣ)
- ರಿಜಿಸ್ಟ್ರಾರ್ ಕರ್ನಾಟಕ ಲಲಿತಕಲಾ ಅಕಾಡೆಮಿ ಹುದ್ದೆಗೆ ಕೇಂದ್ರ ಕಚೇರಿಯ ಸಹಾಯಕ ನಿರ್ದೇಶಕರು (ಕಾರ್ಯಕ್ರಮ) ಹುದ್ದೆಯನ್ನು ಸ್ಥಳಾಂತರಿಸಲಾಗಿದೆ (ಬೆಂಗಳೂರು)

ಕನ್ನಡ ಭವನದಲ್ಲಿ ಸಚಿವರ ಕಚೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರ ಕುಂದು ಕೊರತೆಗಳನ್ನು ವಿಚಾರಿಸಲು ಕನ್ನಡ ಮತ್ತು ಸಂಸ್ಕೃತಿ ಸಚಿವ ಬಿ. ಸುನೀಲ್‌ಕುಮಾರ್ ತಿಂಗಳಲ್ಲಿ ಒಂದು ದಿನ ಕನ್ನಡ ಭವನದಲ್ಲಿ ಲಭ್ಯವಾಗಲಿದ್ದಾರೆ.

ಕನ್ನಡ ಭವನದ ಮೊದಲ ಮಹಡಿಯಲ್ಲಿ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, 'ಇನ್ನು ಮುಂದೆ ನಿಯಮಿತ ದಿನಗಳಲ್ಲಿ ಕಲಾವಿದರು ನನ್ನನ್ನು ಇಲ್ಲಿ ಭೇಟಿಯಾಗಬಹುದು' ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ರಂಗಪ್ಪ, ಲಲಿತಕಲಾ ಅಕಾಡೆಮಿ ಅಧ್ಯಕ್ಷ ಮಹೇಂದ್ರ ಇದ್ದರು.

ರಮೇಶ ಜಾರಕಿಹೊಳಿ ವಿರುದ್ಧದ ಸಿ.ಡಿ ಪ್ರಕರಣ

ಎಸ್‌ಐಟಿ ಕೋರಿಕೆ ಪರಿಗಣನೆ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ಸಿಡಿ ಪ್ರಕರಣದ ಅಂತಿಮ ವರದಿ ಸಲ್ಲಿಸಲು ಷರತ್ತುಬದ್ಧ ಅನುಮತಿ ನೀಡಬೇಕು ಎಂಬ ಕೋರಿಕೆ ಪರಿಗಣಿಸಲಾಗುವುದು ಹೈಕೋರ್ಟ್ ಶುಕ್ರವಾರ ಹೇಳಿದೆ.

'ವಿಶೇಷ ತನಿಖಾ ತಂಡ(ಎಸ್‌ಐಟಿ) ಈಗಾಗಲೇ ತನಿಖೆ ಪೂರ್ಣಗೊಳಿಸಿದ್ದು, ಸಂಬಂಧಿಸಿದ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಅನುಮತಿ ನೀಡಬೇಕು' ಎಂದು ಅಡ್ವೋಕೇಟ್ ಜನರಲ್ (ಎ.ಜಿ) ಪ್ರಭುಲಿಂಗ ಕೆ. ನಾವಡಗಿ ಕೋರಿದರು.

ನ್ಯಾಯಾಲಯದ ಅನುಮತಿ ಇಲ್ಲದೆ ವರದಿ ಸಲ್ಲಿಸಬಾರದು ಎಂದು ಈ ಹಿಂದಿನ ಆದೇಶದಲ್ಲಿ ಪೀಠ ತಿಳಿಸಿತ್ತು.



ಸಂತ್ರಸ್ತೆ ಪರ ಹಾಜರಾಗಿದ್ದ ವಕೀಲೆ ಇಂದಿರಾ ಜೈಸಿಂಗ್ ಅವರು ಎ.ಜಿ ಮನವಿಗೆ ಆಕ್ಷೇಪ ವ್ಯಕ್ತಪಡಿಸಿದರು. 'ಎಸ್‌ಐಟಿ ರಚನೆಯ ಸಿಂಧುತ್ವವನ್ನೇ ಸಂತ್ರಸ್ತೆ ಪ್ರಶ್ನಿಸಿದ್ದಾರೆ. ರಮೇಶ ಜಾರಕಿಹೊಳಿ ಮನವಿ ಮತ್ತು ಗೃಹ ಸಚಿವರ ಪತ್ರ ಆಧರಿಸಿ ಬೆಂಗಳೂರು ಪೊಲೀಸ್ ಕಮಿಷನರ್ ಅವರು ಎಸ್‌ಐಟಿ ರಚಿಸಿ ಆದೇಶಿಸಿದ್ದಾರೆ. ಸಿಆರ್‌ಪಿಸಿಯಲ್ಲಿ ಇದಕ್ಕೆ ಅವಕಾಶ ಇಲ್ಲ' ಎಂದು ವಾದಿಸಿದರು.

ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ, 'ಎ.ಜಿ ಸಲ್ಲಿಸಿರುವ ಕೋರಿಕೆಯನ್ನು ಪರಿಗಣಿಸಲಾಗುವುದು' ಎಂದು ತಿಳಿಸಿತು.

ವಿಚಾರಣೆಯನ್ನು ಸೆ.27ಕ್ಕೆ ಮುಂದೂಡಿತು.

2021ರ ಮಾರ್ಚ್ 10ರಂದು ಗೃಹ ಸಚಿವರು ಬರೆದಿದ್ದ ಪತ್ರ ಆಧರಿಸಿ 11ರಂದು ಎಸ್‌ಐಟಿ ರಚಿಸಿ ಪೊಲೀಸ್ ಕಮಿಷನರ್ ಆದೇಶ ಹೊರಡಿಸಿದ್ದರು.


ಈ ಪ್ರಕರಣದ ತನಿಖೆಯನ್ನು ಬೇರೆ ಸಂಸ್ಥೆಯಿಂದ ನಡೆಸಬೇಕು. ಎಸ್‌ಐಟಿ ನ್ಯಾಯಸಮ್ಮತ ತನಿಖೆ ನಡೆಸಿಲ್ಲ ಎಂಬುದು ಸಂತ್ರಸ್ತೆಯ ಆಕ್ಷೇಪ.

ಬ್ಲಾಕ್‌ಚೈನ್, ಕೃತಕ ಬುದ್ಧಿಮತ್ತೆ: ತಜ್ಞರಿಂದ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಚಾರ್ಯ ಬೆಂಗಳೂರು ಬಿ ಸ್ಕೂಲ್, ಬ್ಲಾಕ್‌ಚೈನ್ ತಂತ್ರಜ್ಞಾನ ಮತ್ತು ಸೇವಾ ವಲಯದಲ್ಲಿ ಕೃತಕ ಬುದ್ಧಿಮತ್ತೆ ಬಗ್ಗೆ 'ಎಐಸಿಟಿಇ ಅಟಲ್' ಆನ್‌ಲೈನ್ ಎಫ್‌ಡಿಪಿ ಕಾರ್ಯಕ್ರಮವನ್ನು ಸೋಮವಾರದಿಂದ ಶುಕ್ರವಾರದವರೆಗೆ ನಡೆಸಲಿದೆ.

ಐಐಎಂ, ಐಐಟಿ, ಐಎಸ್‌ಎಂ–ಇಂಡಿಯಾ ಹಾಗೂ ಇತರ ಮುಂಚೂಣಿ ಸಂಸ್ಥೆಗಳು, ಉದ್ಯಮದ ತಜ್ಞರು ಉಪನ್ಯಾಸ ನೀಡಲಿದ್ದಾರೆ. ಆಸಕ್ತರು https://aicte-india.org/atalacademy/login ವೆಬ್ ಕೊಂಡಿ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.



ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶುಲ್ಕ ಪಾವತಿಸಬೇಕಿಲ್ಲ. ಕಾರ್ಯಕ್ರಮದಲ್ಲಿ ಪಾಲ್ಗೊಂಡವರಿಗೆ 'ಎಐಸಿಟಿಇ ಅಟಲ್' ಕಡೆಯಿಂದ ಪ್ರಮಾಣಪತ್ರ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಡಾ.ಸಿ. ಸೆಂಗೊಟ್ಟುವೇಲು (dr.sengottuvelu@acharyabbs.ac.in) ಅವರನ್ನು ಸಂಪರ್ಕಿಸಬಹುದು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣಾ ಕಾರ್ಯಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧೆಡೆ ಇದೇ 18ರ ಸಂಜೆ 4ರಿಂದ 19ರ ರಾತ್ರಿ 8ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ತಿಗಳರ ಪಾಳ್ಯ, ವಿನಾಯಕನಗರ, ರಾಘವೇಂದ್ರ ನಗರ, ರಾಘವೇಂದ್ರ ಕೈಗಾರಿಕಾ ಪ್ರದೇಶ, ಬಾಲಾಜಿನಗರ, ಕರಿವೋಬನಹಳ್ಳಿ, ಇಂದಿರಾನಗರ, ಬ್ಲೂಜಾಯ್ ಬಡಾವಣೆ, ಗಂಗೊಂಡನಹಳ್ಳಿ ಮುಖ್ಯರಸ್ತೆ, ತಿಪ್ಪೇನಹಳ್ಳಿ ಸರ್ಕಾರಿ ಆಸ್ಪತ್ರೆ, ಅನ್ನಪೂರ್ಣೇಶ್ವರಿ ಬಡಾವಣೆ, ಎಸ್‌ಎಲ್‌ವಿ ಕೈಗಾರಿಕಾ ಪ್ರದೇಶ, ನಂದಗೋಕುಲ ಕೈಗಾರಿಕಾ ಪ್ರದೇಶ, ಚೇತನ್ ವೃತ್ತ, ಸಪ್ತಗಿರಿ ಬಡಾವಣೆ, ವೇಣುಗೋಪಾಲ ನಗರ, ದೊಡ್ಡ ಬಿದರಕಲ್ಲು, ಸುವರ್ಣ ನಗರ, ಮಾರಣ್ಣ ಬಡಾವಣೆ, ತಿಪ್ಪೇನಹಳ್ಳಿ, ಅಂದಾನಪ್ಪ ಬಡಾವಣೆ, ಮುನೇಶ್ವರ ಬಡಾವಣೆ ಮತ್ತು ಸುತ್ತ–ಮುತ್ತಲಿನ ಪ್ರದೇಶ.

18– ಬೆಳಿಗ್ಗೆ 10ರಿಂದ ಸಂಜೆ 5: ಎಸ್‌ಎಲ್‌ವಿ ಬಡಾವಣೆ, ವಿಶ್ವ ವಿದ್ಯಾಲಯ ಗೇಟ್, ಮಂಜುಳ ಎನ್‌ಕ್ಲೇವ್, ಅನ್ನಪೂರ್ಣೇಶ್ವರಿ ಬಡಾವಣೆ, ಸರ್ ಎಂ.ವಿ.ಬಡಾವಣೆ 9ನೇ ಹಂತ, ಆರ್‌ಎಚ್‌ಸಿಎಸ್ ಬಡಾವಣೆ, ನರಸೀಪುರ, ಬೆಣಚಕಲ್ಲುಪಾಳ್ಯ, ಮುದ್ದಿನ ಪಾಳ್ಯ, ಈರಣ್ಣ ಪಾಳ್ಯ, ಗೌರಮ್ಮ ಬಡಾವಣೆ, ಕಾಮಾಕ್ಷಿಪಾಳ್ಯ ಕೈಗಾರಿಕಾ ಪ್ರದೇಶ, ಕೆ.ಸಿ.ಜಿ ಎಸ್ಟೇಟ್, ಪೇಟೆ ಚಿನ್ನಪ್ಪ ಕೈಗಾರಿಕಾ ಪ್ರದೇಶ ಮತ್ತು ಸುತ್ತ–ಮುತ್ತ. ಗ್ರೀನ್ ಮೆಡೋಸ್ ಬಡಾವಣೆ, ನೂತನ್ ಬಡಾವಣೆ, ಹರಪ್ಪನಹಳ್ಳಿ, ಕೊಪ್ಪ, ಐಶ್ವರ್ಯ ಬಡಾವಣೆ, ಜಿಗಣಿ ಜೋಡಿ ರಸ್ತೆ, ಬಸ್ ಡಿಪೊ, ಮಹಾಂತ ಲಿಂಗಾಪುರ, ಕಲ್ಲುಬಾಳು ರಸ್ತೆ, ಹಾರಗದ್ದೆ, ಜಿಗಣಿ ಕೆಐಎಡಿಬಿ ಕೈಗಾರಿಕಾ ಪ್ರದೇಶ, ಸುತ್ತ–ಮುತ್ತಲಿನ ಪ್ರದೇಶಗಳು.

ನಗರದಲ್ಲಿ ಇಂದು

ಕರ್ನಾಟಕ ಇ–ಮೊಬಿಲಿಟಿ ಕಾರ್ಯಾಗಾರ: ಉದ್ಘಾಟನೆ– ಸುನಿಲ್ ಕುಮಾರ್, ಉಪಸ್ಥಿತಿ: ರಾಜೇಂದ್ರ ಚೋಳನ್, ಆಯೋಜನೆ: ಬೆಸ್ಕಾಂ, ಸ್ಥಳ: ಜೆ.ಡಬ್ಲ್ಯು ಮ್ಯಾರಿಯಟ್, ಬೆಳಿಗ್ಗೆ 10

ಹಳೆ ವಿದ್ಯಾರ್ಥಿಗಳ ವಾರ್ಷಿಕ ಸಮಾರಂಭ 2020–21: ಉದ್ಘಾಟನೆ: ಎಸ್.ಎನ್. ಬಾಲಚಂದ್ರ, ಮುಖ್ಯ ಅತಿಥಿಗಳು: ಶ್ರೀನಾಥ್ ಎಂ. ಜೋಶಿ, ರವೀಂದ್ರ ಭಟ್ಟ, ಅಧ್ಯಕ್ಷತೆ: ಎಂ. ವೆಂಕಟರಮಣ ರೆಡ್ಡಿ, ಆಯೋಜನೆ: ಎಚ್.ಎಸ್. ಆರ್. ಬಡಾವಣೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ನೇಹ ಹಳೆ ವಿದ್ಯಾರ್ಥಿಗಳ ಸಂಘ, ಐಕ್ಯೂಎಸಿ, ಸ್ಥಳ: ಸಭಾಂಗಣ, ಎಚ್.ಎಸ್.ಆರ್. ಬಡಾವಣೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳಿಗ್ಗೆ 10.30

ವಿಶ್ವ ಓಝೋನ್ ದಿನ: ಉದ್ಘಾಟನೆ: ಕೆ.ಆರ್. ವೇಣುಗೋಪಾಲ್, ಉಪನ್ಯಾಸ: ಟಿ.ಆರ್. ಸುಬ್ರಹ್ಮಣ್ಯ, ಆಯೋಜನೆ ಹಾಗೂ ಸ್ಥಳ: ಪರಿಸರ ವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ದಲಿತ ಉದ್ದಿಮೆದಾರರ ಸಂವಾದ: ಉದ್ಘಾಟನೆ: ಎ. ನಾರಾಯಣಸ್ವಾಮಿ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಅತಿಥಿ: ಬಿ. ಶ್ರೀರಾಮುಲು, ಕೋಟ ಶ್ರೀನಿವಾಸ ಪೂಜಾರಿ, ಆಯೋಜನೆ: ಕರ್ನಾಟಕ ದಲಿತ ಉದ್ದಿಮೆದಾರರ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 11

'ತೇಜಸ್ವಿ ಜೀವಲೋಕ–9, ಕುರಿಂಜಿ ಲೋಕ' ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮ: ಆಯೋಜನೆ: ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ, ಕರ್ನಾಟಕ ಚಿತ್ರಕಲಾ ಪರಿಷತ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗೂ ಪೀಣ್ಯ ಕೈಗಾರಿಕಾ ಸಂಘ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ, ಬೆಳಿಗ್ಗೆ 11

ನ್ಯಾ. ಮೋಹನ್ ಎಂ. ಶಾಂತನಗೌಡರ್ ಪುಣ್ಯಸ್ಮರಣೆ: ನ್ಯಾ.ಎನ್.ವಿ. ರಮಣ, ಸಾಕ್ಷ್ಯಚಿತ್ರ ಬಿಡುಗಡೆ: ಬಸವರಾಜ ಬೊಮ್ಮಾಯಿ, ಮಾತನಾಡುವವರು: ನ್ಯಾ. ಅಬ್ದುಲ್ ನಜೀರ್, ನ್ಯಾ.ಎ.ಎಸ್. ಬೋಪಣ್ಣ, ಆಯೋಜನೆ: ರಾಜ್ಯ ವಕೀಲರ ಪರಿಷತ್ತು, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

'ನಮ್ಮ ದೇಹದ ವಿಜ್ಞಾನ' ಕೃತಿ ಬಿಡುಗಡೆ: ಡಾ.ಸಿ.ಎನ್. ಮಂಜುನಾಥ್, ಮುಖ್ಯ ಅತಿಥಿ: ಡಾ. ಪ್ರತಿಮಾ ಮೂರ್ತಿ, ಆಯೋಜನೆ: ನವಕರ್ನಾಟಕ, ಬುಕ್ ಬ್ರಹ್ಮ, ಮಧ್ಯಾಹ್ನ 3.30 (ಆನ್‌ಲೈನ್ ಕಾರ್ಯಕ್ರಮ)

ಗೀತ ಗಾಯನ: ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ ವಿಶ್ವಮಾತೆಗೆ ಗೀತ ನಮನ: ಗಾಯನ– ಇಂಚರ ಪ್ರವೀಣ್, ಸಹ ಗಾಯನ: ಚಂದನ ಕೆ.ಎಸ್., ಸಂಜನಾ ಎಚ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ ನಗರ ಜಿಲ್ಲೆ, ಸ್ಥಳ: ಚಿತ್ರಕೂಟ ಶಾಲಾ ಸಭಾಂಗಣ, ಸಂಜೆ 4

ಮನೆಯಂಗಳದಲ್ಲಿ ಮಾತುಕತೆ–216: ತಿಂಗಳ ಅತಿಥಿ: ಡಾ.ಬಿ.ವಿ. ರಾಜಾರಾಮ್, ಉಪಸ್ಥಿತಿ: ಎಸ್. ರಂಗಪ್ಪ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

'ಜಿನಾಕು ಪ್ರಶಸ್ತಿ' ಪ್ರದಾನ ಸಮಾರಂಭ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಬಿ. ಎಲ್. ಶಂಕರ್, ಪ್ರಶಸ್ತಿ ಪ್ರದಾನ: ವಿ. ಸೋಮಣ್ಣ, ಮುಖ್ಯ ಅತಿಥಿಗಳು: ಶಂಕರ ಎಂ. ಬಿದರಿ, ಟಿ.ಎ. ಶರವಣ, 'ಜಿನಾಕು ಪ್ರಶಸ್ತಿ' ಪುರಸ್ಕೃತರು: ತಾರಾ ಅನೂರಾಧ, ಬಾನಂದೂರು ಕೆಂಪಯ್ಯ, ಪ್ರೊ. ಜಿ. ಅಬ್ದುಲ್ ಬಷೀರ್, ಶಿವರಾಮೇಗೌಡ, ವೈ.ಜಿ. ಅಶೋಕ್, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಸಂಜೆ 4

ಮೋದಿ ಜನ್ಮ ದಿನ: 'ಮೋದಿ ಬ್ರಾಂಡ್' ಬಳಸಿಕೊಂಡು ಪಕ್ಷಕ್ಕೆ ಮತ್ತೆ ಹೊಳಪು ನೀಡಲು ಬಿಜೆಪಿ ನಿರ್ಧಾರ

ಒಂದೇ ದಿನ 2.26 ಕೋಟಿ ಡೋಸ್ ಲಸಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ನಿರ್ವಹಣೆ ಹಾಗೂ ಕುಸಿಯುತ್ತಿರುವ ಆರ್ಥಿಕತೆಗೆ ಸಂಬಂಧಿಸಿ ವ್ಯಾಪಕ ಟೀಕೆಗೆ ಈಡಾಗಿರುವ ಬಿಜೆಪಿ ಸರ್ಕಾರವು, ಇದೀಗ ತನ್ನ ಟ್ರಂಪ್ ಕಾರ್ಡ್ ಎನಿಸಿರುವ ಪ್ರಧಾನಿ ನರೇಂದ್ರ ಮೋದಿ ಜನ್ಮದಿನವನ್ನೇ ಅವಕಾಶವನ್ನಾಗಿ ಪರಿವರ್ತಿಸಿಕೊಂಡಿದೆ.

ಉತ್ತರಪ್ರದೇಶ, ಪಂಜಾಬ್, ಉತ್ತರಾಖಂಡ, ಗೋವಾ ಹಾಗೂ ಮಣಿಪುರ ರಾಜ್ಯಗಳಲ್ಲಿ ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಡೆಯಲಿದೆ. ಆದರೆ, ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರ ಪ್ರತಿಭಟನೆ ತೀವ್ರಗೊಂಡಿದ್ದು, ಈ ಹೊತ್ತಿನಲ್ಲಿ 'ಮೋದಿ ಬ್ರಾಂಡ್' ಬಳಸಿಕೊಂಡು ಪಕ್ಷಕ್ಕೆ ಮತ್ತೆ ಹೊಳಪು ನೀಡಲು ಬಿಜೆಪಿ ನಿರ್ಧರಿಸಿದೆ.

2014, 2019ರ ಚುನಾವಣೆಯಲ್ಲಿ ತಮ್ಮ ವೈಯಕ್ತಿಕ ವರ್ಚಸ್ಸಿನಿಂದಲೇ ಪಕ್ಷದ ಗೆಲುವಿಗೆ ಮೋದಿ ಕಾರಣರಾಗಿದ್ದರು. ಅವರದೇ ಹೆಸರಿನಲ್ಲಿಯೇ ಹಲವು ರಾಜ್ಯಗಳಲ್ಲಿಯೂ ಅಧಿಕಾರ ಹಿಡಿಯಲು ಬಿಜೆಪಿಗೆ ಸಾಧ್ಯವಾಗಿತ್ತು. ಆದರೆ, ಪಶ್ಚಿಮ ಬಂಗಾಳ, ಜಾರ್ಖಂಡ್, ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಅನುಭವಿಸಿದ ಹಿನ್ನಡೆ ಹಾಗೂ ಬಿಹಾರದಲ್ಲಿ ಪ್ರಯಾಸದಿಂದ ಗೆಲ್ಲಬೇಕಾಗಿ ಬಂದಿದ್ದು ಮೋದಿ ಪ್ರಭಾವಳಿ ಕಡಿಮೆಯಾಗಿದ್ದರ ಸೂಚನೆ ನೀಡಿದ್ದವು.

2024ರಲ್ಲಿಯೂ ಬಿಜೆಪಿಯು ಕೇಂದ್ರದಲ್ಲಿ ಅಧಿಕಾರದಲ್ಲಿ ಇರಬೇಕಾದರೆ, ಮುಂಬರಲಿರುವ ರಾಜ್ಯಗಳಲ್ಲಿನ ಚುನಾವಣೆಗಳು ಮಹತ್ವದ್ದಾಗಿವೆ. ಹೀಗಾಗಿ, ಜನ್ಮದಿನ ಆಚರಣೆಯ ನೆಪದಲ್ಲಿ ಮತ್ತೆ 'ಮೋದಿ ಬ್ರಾಂಡ್' ಅನ್ನು ಮುನ್ನೆಲೆಗೆ ತರುವ ಪ್ರಯತ್ನ ನಡೆದಿದೆ ಎನ್ನಲಾಗಿದೆ.

ಬಿಜೆಪಿ ಕಾರ್ಯಕರ್ತರು ಕೋವಿಡ್–19 ಲಸಿಕೆ ಹಾಕಿಸಿಕೊಳ್ಳುವಂತೆ ಜನರ ಮನವೊಲಿಸುವ ಮೂಲಕ ಶುಕ್ರವಾರ ಲಸಿಕಾ ಅಭಿಯಾನದಲ್ಲಿ ಪಾಲ್ಗೊಂಡರು.

ಬಿಜೆಪಿಯ ಯುವ ಘಟಕವಾದ ಭಾರತೀಯ ಜನತಾ ಯುವ ಮೋರ್ಚಾ, 'ನವ ಭಾರತ ಮೇಳ' ಹೆಸರಿನಲ್ಲಿ ರಕ್ತದಾನ ಶಿಬಿರ, ದೇವಾಲಯ, ಕೆರೆ–ಕಟ್ಟೆ ಹಾಗೂ ನದಿಗಳ ಸ್ವಚ್ಛತೆಯಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬಿಜೆಪಿ ಅಧಿಕಾರದಲ್ಲಿರುವ ವಿವಿಧ ರಾಜ್ಯ ಸರ್ಕಾರಗಳು ಶುಕ್ರವಾರದಂದು ಮೆಗಾ ಲಸಿಕಾ ಅಭಿಯಾನ ನಡೆಸಿವೆ. ಅದರ ಪರಿಣಾಮವಾಗಿ, ದೇಶದಾದ್ಯಂತ ಸಂಜೆ ಏಳೂವರೆ ಹೊತ್ತಿಗೆ 2.26 ಕೋಟಿ ಡೋಸ್ ಲಸಿಕೆ ನೀಡಲಾಗಿದೆ.

'ಇಂದು, ಪ್ರತಿ ಸೆಕೆಂಡಿಗೆ 527 ಡೋಸ್ ಲಸಿಕೆ ನೀಡಲಾಗಿದೆ...' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಹೇಳಿದ್ದಾರೆ.

ನಿರುದ್ಯೋಗ ದಿನಾಚರಣೆ

ಮೋದಿ ಅವರ 71ನೇ ಜನ್ಮದಿನದ ನಿಮಿತ್ತ ಬಿಜೆಪಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಸಂಭ್ರಮಾಚರಣೆ ನಡೆಸಿದರೆ, ಈ ದಿನವನ್ನು ಇಂಡಿಯನ್ ಯೂತ್ ಕಾಂಗ್ರೆಸ್ (ಐಯುಸಿ) ಸದಸ್ಯರು 'ರಾಷ್ಟ್ರೀಯ ನಿರುದ್ಯೋಗ ದಿನ' ಎಂದು ಆಚರಿಸಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,42,950 ಒಟ್ಟು ಸೋಂಕಿತರು (12,42,640 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,456	12,19,417	16,076

ದಿನದ ಏರಿಕೆ

ಹೊಸ ಪ್ರಕರಣ	310
ಗುಣಮುಖ	276
ಸಾವು	06

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

27.80 ಲಕ್ಷ ಡೋಸ್ ಲಸಿಕೆ ವಿತರಣೆ

ಬೆಂಗಳೂರು: ದೇಶದಾದ್ಯಂತ ಶುಕ್ರವಾರ ಹಮ್ಮಿಕೊಳ್ಳಲಾದ ಬೃಹತ್ ಕೋವಿಡ್ ಲಸಿಕಾ ಮೇಳದಲ್ಲಿ ರಾಜ್ಯವು ಅಗ್ರಸ್ಥಾನ ಪಡೆದಿದ್ದು, 27.80 ಲಕ್ಷ ಡೋಸ್‌ಗಳಷ್ಟು (ರಾತ್ರಿ 9.30ರ ವೇಳೆಗೆ) ಲಸಿಕೆಯನ್ನು ವಿತರಿಸಲಾಗಿದೆ.

ಈ ಹಿಂದೆ ಒಂದು ದಿನದಲ್ಲಿ ಗರಿಷ್ಠ 12 ಲಕ್ಷ ಡೋಸ್‌ಗಳನ್ನು ನೀಡಲಾಗಿತ್ತು. ಇಲ್ಲಿನ ಬೌರಿಂಗ್ ಆಸ್ಪತ್ರೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಲಸಿಕಾ ಮೇಳಕ್ಕೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಚಾಲನೆ ನೀಡಿದರು.

ಒಟ್ಟು 31.75 ಲಕ್ಷ ಡೋಸ್‌ಗಳನ್ನು ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿತ್ತು. 11,648 ಸರ್ಕಾರಿ ಕೇಂದ್ರಗಳು ಹಾಗೂ 415 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ವಿತರಿಸಲಾಗಿದೆ. ಕೆಲವು ಖಾಸಗಿ ಆಸ್ಪತ್ರೆಗಳಲ್ಲಿಯೂ ಉಚಿತವಾಗಿ ಲಸಿಕೆ ನೀಡಲಾಯಿತು. ಒಟ್ಟಾರೆ ಗುರಿಯಲ್ಲಿ ಶೇ 88ರಷ್ಟು ಸಾಧನೆ ಸಾಕಾರವಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 4.04 ಲಕ್ಷ ಡೋಸ್‌ಗಳನ್ನು ವಿತರಿಸಲಾಗಿದೆ. ಬೆಂಗಳೂರು ನಗರ, ಶಿವಮೊಗ್ಗ, ಧಾರವಾಡ, ರಾಮನಗರ, ಹಾಸನ, ದಾವಣಗೆರೆ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ತುಮಕೂರು, ಹಾವೇರಿ ಹಾಗೂ ಬಾಗಲಕೋಟೆ ಜಿಲ್ಲೆ ಶೇ 100ರ ಗುರಿ ದಾಟಿದೆ. 25 ಜಿಲ್ಲೆಗಳು ಶೇ 75ಕ್ಕಿಂತ ಅಧಿಕ ಗುರಿ ಸಾಧಿಸಿವೆ. ಕಲಬುರ್ಗಿ ಹಿಂದೆ ಬಿದ್ದಿದ್ದು, ಶೇ 50 ರಷ್ಟೂ ಗುರಿ ಸಾಧ್ಯವಾಗಲಿಲ್ಲ.

5.12 ಕೋಟಿ ಡೋಸ್ ವಿತರಣೆ: ಈವರೆಗೆ ನೀಡಲಾದ ಲಸಿಕೆಯ ಒಟ್ಟು ಡೋಸ್‌ಗಳ ಸಂಖ್ಯೆ 5.12 ಕೋಟಿ ದಾಟಿದೆ. 3.70 ಕೋಟಿ ಮಂದಿ ಈವರೆಗೆ ಮೊದಲ ಡೋಸ್ ಹಾಗೂ 1.41 ಕೋಟಿ ಮಂದಿ 2ನೇ ಡೋಸ್ ಪಡೆದುಕೊಂಡಿದ್ದಾರೆ.

18ರಿಂದ 44 ವರ್ಷದವರಲ್ಲಿ 1.95 ಕೋಟಿ ಮಂದಿ ಮೊದಲ ಡೋಸ್ ಹಾಗೂ 40.94 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.51 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 83.37 ಲಕ್ಷ ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.63 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.38 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 6.31 ಲಕ್ಷ ಮಂದಿ ಹಾಗೂ 6.26 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆಯನ್ನು ಹಾಕಿಸಿಕೊಂಡಿದ್ದಾರೆ.

ಉತ್ತಮ ಸಾಧನೆ ಮಾಡಿದ ಅಗ್ರ 5 ಜಿಲ್ಲೆಗಳು

ಜಿಲ್ಲೆ	ಗುರಿ	ವಿತರಣೆ	ಸಾಧನೆ (ಶೇ)
ಬೆಂಗಳೂರು ನಗರ	50,000	70,282	141
ಶಿವಮೊಗ್ಗ	80,000	1,05,400	132
ಧಾರವಾಡ	85,000	1,07,799	127
ರಾಮನಗರ	50,000	61,633	123
ಹಾಸನ	80,000	95,627	120




ಈಶ ಫೌಂಡೇಶನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿದರು. 'ನಮ್ಮ ನಂದಿ' ಹಾಗೂ 'ಹಸಿರು ಬೆಂಗಳೂರು' ಯೋಜನೆಯಡಿ ದೊಡ್ಡ ಪ್ರಮಾಣದಲ್ಲಿ ಸಸಿ ನೆಡುವ ಕಾರ್ಯಕ್ರಮದ ಬಗ್ಗೆ ಮುಖ್ಯಮಂತ್ರಿ ಜತೆ ಮಾತುಕತೆ ನಡೆಸಿದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಇದ್ದರು

ಕೋವಿಡ್: 29.66 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,003 ಮಂದಿ ಕೋವಿಡ್ ಪೀಡಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.66 ಲಕ್ಷ ದಾಟಿದೆ.



ಒಂದು ದಿನದ ಅವಧಿಯಲ್ಲಿ 1.48 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.67 ರಷ್ಟು ವರದಿಯಾಗಿದೆ. 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಹಾವೇರಿ, ಕೊಪ್ಪಳ ಹಾಗೂ ವಿಜಯಪುರದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 124, ಕೊಡಗಿನಲ್ಲಿ 96 ಹಾಗೂ ಮೈಸೂರಿನಲ್ಲಿ 47 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 310, ಉಡುಪಿಯಲ್ಲಿ 94 ಹಾಗೂ ತುಮಕೂರಿನಲ್ಲಿ 61 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 18 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 10 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 6, ಬೆಳಗಾವಿಯಲ್ಲಿ 3 ಹಾಗೂ ದಕ್ಷಿಣ ಕನ್ನಡದಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ಉತ್ತರ ಕನ್ನಡ ಸೇರಿದಂತೆ 7 ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.79 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,573ಕ್ಕೆ ತಲುಪಿದೆ.

ಕೋವಿಡ್ ಲಸಿಕಾ ಅಭಿಯಾನ: ಶೇ 90ರಷ್ಟು ಗುರಿ ಸಾಧನೆ

ನಗರಗಳಲ್ಲಿ ಬೆಂಗಳೂರಿಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಬೃಹತ್ ಕೋವಿಡ್ ಲಸಿಕಾ ಅಭಿಯಾನ ಯಶಸ್ವಿಯಾಗಿದ್ದು, ರಾತ್ರಿ 9.30ರ ವೇಳೆಗೆ, ನಿಗದಿತ ಗುರಿಯಲ್ಲಿ ಶೇ 90ಕ್ಕಿಂತಲೂ ಹೆಚ್ಚು ಜನರಿಗೆ ಲಸಿಕೆ ಹಾಕಲಾಯಿತು.

ಆ ಮೂಲಕ ದೇಶದ ಮಹಾನಗರಗಳಲ್ಲಿ ಅತಿ ಹೆಚ್ಚು ಲಸಿಕೆ ವಿತರಿಸಿದ ನಗರ ಎಂಬ ಶ್ರೇಯಕ್ಕೂ ಬೆಂಗಳೂರು ಪಾತ್ರವಾಯಿತು.

ಐದು ಲಕ್ಷ ಜನರಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿತ್ತು. 2,187 ಲಸಿಕಾ ಕೇಂದ್ರಗಳಲ್ಲಿ ರಾತ್ರಿ 9ರ ವೇಳೆಗೆ 4.06 ಲಕ್ಷ ಜನರಿಗೆ ಲಸಿಕೆ ಹಾಕಲಾಯಿತು. ಕಳೆದ ಸಾಲಿನಲ್ಲಿ ಸಾಧಿಸಿದ ಪ್ರಗತಿಗಿಂತ 2.5 ಪಟ್ಟು ಹೆಚ್ಚು ಪ್ರಗತಿ ಸಾಧಿಸಿದಂತಾಗಿದೆ.

ದಕ್ಷಿಣ ವಲಯದಲ್ಲಿ ಅತಿ ಹೆಚ್ಚು ಅಂದರೆ, 84,280 ಹಾಗೂ ಪಶ್ಚಿಮ ವಲಯದಲ್ಲಿ 75,873 ಮಂದಿ ಲಸಿಕೆ ಪಡೆದರು. ಗುರಿ ತಲುಪಲು ಶನಿವಾರವೂ ಅಭಿಯಾನ ಮುಂದುವರಿಸಲಾಗುವುದು ಎಂದು ಬಿಬಿಎಂಪಿ ಹೇಳಿದೆ. ಮೊದಲನೇ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯದವರು ಲಸಿಕಾ ಸ್ಥಳಗಳಿಗೆ ಭೇಟಿ ನೀಡಿ ಲಸಿಕೆ ಪಡೆದುಕೊಳ್ಳಬಹುದು.


ನಗರದಲ್ಲಿ ವ್ಯವಸ್ಥೆ ಮಾಡಿರುವ ಲಸಿಕಾ ಕೇಂದ್ರಗಳ ಮಾಹಿತಿ ಪಡೆಯಲು https://bit.ly/cvcdetails ವೆಬ್ ಲಿಂಕ್ ಗೆ ಭೇಟಿ ನೀಡಬಹುದು ಅಥವಾ ಸಹಾಯವಾಣಿ ಸಂಖ್ಯೆ '1533'ಗೆ ಸಂಪರ್ಕಿಸಬಹುದು ಎಂದು ಬಿಬಿಎಂಪಿ ಹೇಳಿದೆ.

ಶುಕ್ರವಾರ ಸಂಜೆ 7ರ ವೇಳೆಗೆ ವಿತರಿಸಲಾದ ಲಸಿಕೆ

ಬಿಬಿಎಂಪಿ	3,82,410
ಅಲಹಾಬಾದ್	2,03,475
ಮುಂಬೈ	1,59,046
ನವದೆಹಲಿ	1,52,230
ಪುಣೆ	1,42,161
ಕೋಲ್ಕತ್ತ	30,367
ಹೈದರಾಬಾದ್	27,221
ಚೆನ್ನೈ	22,620

ಲಸಿಕಾ ಅಭಿಯಾನ: ವಾರ್ಡ್‌ವಾರು ವಿವರ

ವಲಯ	ಕೇಂದ್ರ	ಲಸಿಕೆ ಪಡೆದವರು
ದಕ್ಷಿಣ	547	84,280
ಪಶ್ಚಿಮ	414	75,873
ಪೂರ್ವ	548	68,536
ಬೊಮ್ಮನಹಳ್ಳಿ	224	50,372
ಮಹದೇವಪುರ	124	44,226
ಆರ್.ಆರ್. ನಗರ	156	35,224
ದಾಸರಹಳ್ಳಿ	91	25,518
ಯಲಹಂಕ	83	22,837
ಒಟ್ಟು	2,187	4,06,866



ಮೋದಿ ಜನ್ಮದಿನ: ನಗರದ ವಿವಿಧೆಡೆ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು 71ನೇ ವಸಂತಕ್ಕೆ ಕಾಲಿಟ್ಟಿದ್ದು, ಅವರ ಜನ್ಮದಿನವನ್ನು ನಗರದ ವಿವಿಧೆಡೆ ಸಂಭ್ರಮದಿಂದ ಶುಕ್ರವಾರ ಆಚರಿಸಲಾಯಿತು.

ಮಹಿಳೆಯರು, ಮಕ್ಕಳು ಹಾಗೂ ವೃದ್ಧರಿಗೆ ಕೆಲವರು ಸಿಹಿ ಹಂಚಿ ಖುಷಿಪಟ್ಟರು. ಸಚಿವರು ವಿವಿಧ ಸೇವಾ ಕಾರ್ಯಗಳಿಗೆ ಚಾಲನೆ ನೀಡಿ ಮೋದಿ ಅವರ ಜನ್ಮದಿನದ ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ಜಯಕಿರಣ ಫೌಂಡೇಷನ್‌ನ ಸಂಸ್ಥಾಪಕ ಕೆ.ಕಿರಣ್‌ಕುಮಾರ್ ನೇತೃತ್ವದಲ್ಲಿ ಕೆಂಗೇರಿಯ ಗುರುಕುಲ ವಿದ್ಯಾಪೀಠದಲ್ಲಿ 70 ಮಕ್ಕಳು ಹಾಗೂ ವೃದ್ಧರಿಗೆ ಆಹಾರ ವಿತರಿಸಲಾಯಿತು.

ಬೆಂಗಳೂರು ದಕ್ಷಿಣ ಜಿಲ್ಲೆಯ ಜಯನಗರ ಮಂಡಲ ಬಿಜೆಪಿ ಘಟಕದ ವತಿಯಿಂದ 'ಸೇವೆ ಮತ್ತು ಸಮರ್ಪಣೆ' ಕುರಿತು ಅಂಚೆ ಚೀಟಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ಅವರು ಇದಕ್ಕೆ ಚಾಲನೆ ನೀಡಿದರು.

ರಾಜ್ಯ ಯುವ ಮೋರ್ಚಾ ಅಧ್ಯಕ್ಷ ಸಂದೀಪ್ ನೇತೃತ್ವದಲ್ಲಿ ನಡೆದ ಸಮಾರಂಭದಲ್ಲಿ ಮೋದಿ ಅವರ ಜೀವನ–ಸಾಧನೆಯನ್ನು ಬಿಂಬಿಸುವ ಡಿಜಿಟಲ್ ಎಲ್‌ಇಡಿ ಪ್ರಚಾರ ವಾಹನಕ್ಕೆ ಚಾಲನೆ ನೀಡಲಾಯಿತು. ಮೋದಿ ಅವರ 20 ವರ್ಷಗಳ ರಾಜಕೀಯ ಪಯಣ, ಸಾಮಾಜಿಕ ಬದುಕಿನ ಚಿತ್ರಣಗಳನ್ನು ಕಟ್ಟಿಕೊಟ್ಟು ಅದನ್ನು ಜನರಿಗೆ ತಲುಪಿಸುವ, ಅವರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶ.

ಲಸಿಕಾ ಅಭಿಯಾನ: ಮೋದಿ ಜನ್ಮದಿನದ ಪ್ರಯುಕ್ತ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶಾಸಕ ಉದಯ ಗರುಡಾಚಾರ್ ಇದಕ್ಕೆ ಚಾಲನೆ ನೀಡಿದರು. ಜೊತೆಗೆ ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಮುಖಗವಸು ಮತ್ತು ಸ್ಯಾನಿಟೈಸರ್ ವಿತರಿಸಿ ಕೋವಿಡ್ ಕುರಿತು ಜಾಗೃತಿ ಮೂಡಿಸಲಾಯಿತು.





ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಸಿಹಿ ಹಂಚಿದರು (ಎಡ ಚಿತ್ರ) ಮಹದೇವಪುರ ಕ್ಷೇತ್ರದಲ್ಲಿ ಶಾಸಕ ಅರವಿಂದ ಲಿಂಬಾವಳಿ ಅವರು ಮಕ್ಕಳಿಗೆ ನೋಟ್ ಪುಸ್ತಕ ವಿತರಿಸಿದರು. ಮುಖಂಡರಾದ ಮನೋಹರರೆಡ್ಡಿ, ನಟರಾಜ್, ಪುಷ್ಪಾ ಮಂಜುನಾಥ್, ವೆಂಕಟಸ್ವಾಮಿ ರೆಡ್ಡಿ, ನಲ್ಲೂರಹಳ್ಳಿ ಚಂದ್ರಶೇಖರ್, ಪಿಳ್ಳಪ್ಪ, ಮಿಥುನ್ ರೆಡ್ಡಿ ಇದ್ದರು

ಮಲ್ಲೇಶ್ವರದಲ್ಲಿ ದಿನದ 24 ಗಂಟೆ ಲಸಿಕೆ

ಮೋದಿ ಜನ್ಮದಿನದ ಅಂಗವಾಗಿ ಮಲ್ಲೇಶ್ವರದಲ್ಲಿ ಏಕಕಾಲಕ್ಕೆ 54 ಕಡೆ ಕೋವಿಡ್ ಲಸಿಕೆ ನೀಡುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ದಿನದ 24 ಗಂಟೆ ಲಸಿಕೆ ನೀಡುವ ಸಲುವಾಗಿ ಕೋದಂಡರಾಮಪುರದ ಕಬಡ್ಡಿ ಮೈದಾನದಲ್ಲಿ ಆರಂಭಿಸಿರುವ ಲಸಿಕಾ ಕೇಂದ್ರವನ್ನೂ ಉದ್ಘಾಟಿಸಲಾಯಿತು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಟ್ಯಾಬ್ ಹಾಗೂ ಚಟುವಟಿಕೆ ಆಧಾರಿತ ಪಠ್ಯ ಪುಸ್ತಕ ವಿತರಿಸಿದರು. ಸ್ಮಾರ್ಟ್ ಬೋರ್ಡ್ ಉದ್ಘಾಟಿಸಿದ ಅವರು ಪ್ರೇರಣಾ ಆ್ಯಪ್ ಬಿಡುಗಡೆ ಮಾಡಿದರು.

'ಲಸಿಕಾ ವಾಹನ ವ್ಯವಸ್ಥೆ'

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಬಿಎಂಪಿ ಸಹಯೋಗದೊಂದಿಗೆ ಕೋವಿಡ್ ಲಸಿಕಾ ಮೇಳ ಹಮ್ಮಿಕೊಳ್ಳಲಾಗಿತ್ತು. ಒಟ್ಟು 70 ಸ್ಥಳಗಳಲ್ಲಿ ಜನರಿಗೆ ಲಸಿಕೆಯನ್ನು ಉಚಿತವಾಗಿ ನೀಡಲಾಯಿತು.

ವೃದ್ಧರು ಮತ್ತು ಅನಾರೋಗ್ಯ ಪೀಡಿತರ ಅನುಕೂಲಕ್ಕಾಗಿ 3 ಲಸಿಕಾ ವಾಹನಗಳ ವ್ಯವಸ್ಥೆ ಮಾಡಲಾಗಿದ್ದು ಇದಕ್ಕೂ ಚಾಲನೆ ನೀಡಲಾಯಿತು.

ರಾಜ್ಯದ ಕೋವಿಡ್ ಅಂಕಿ–ಅಂಶ

29,66,194	ಒಟ್ಟು ಪ್ರಕರಣಗಳು
15,960	ಸಕ್ರಿಯ ಪ್ರಕರಣಗಳು
29,12,633	ಗುಣಮುಖರಾದವರು
37,573	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,003
ಗುಣಮುಖ	1,199
ಸಾವು	18

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

₹ 20ಕ್ಕೆ ಜಗಳ; ಚಿಂದಿ ಆಯುವವನ ಕೊಲೆ

ಅಪರಾಧ ಸುದ್ದಿ

ಬೆಂಗಳೂರು: ₹ 20 ವಿಚಾರಕ್ಕಾಗಿ ನಡೆದ ಜಗಳದಲ್ಲಿ ಸಂಜಯ್ ಅಲಿಯಾಸ್ ನೇಪಾಳಿ (30) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ದೀಪಕ್, ಹೇಮಂತ್ ಹಾಗೂ ಮಾದೇಶ್ ಬಂಧಿತರು. ಮೂವರು ಸೇರಿಕೊಂಡು ಸೆ. 13ರಂದು ರಾತ್ರಿ ಬೊಮ್ಮನಹಳ್ಳಿ 1ನೇ ಅಡ್ಡರಸ್ತೆಯಲ್ಲಿ ಸಂಜಯ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದರು. 48 ಗಂಟೆಗಳಲ್ಲಿ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿತ್ತು. ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮೃತ ಸಂಜಯ್ ಹಾಗೂ ಮೂವರು ಆರೋಪಿಗಳು ಸ್ನೇಹಿತರು. ಚಿಂದಿ ಆಯುವ ಕೆಲಸ ಮಾಡುತ್ತಿದ್ದರು. ನಿತ್ಯವೂ ಒಟ್ಟಿಗೆ ಮದ್ಯ ಕುಡಿಯುತ್ತಿದ್ದರು. ಊಟ ಮಾಡುತ್ತಿದ್ದರು.'

'ಕೆಲ ದಿನಗಳ ಹಿಂದಷ್ಟೇ ಸ್ನೇಹಿತರೆಲ್ಲರೂ ಊಟಕ್ಕೆ ಹೋಟೆಲ್‌ಗೆ ಹೋಗಿದ್ದರು. ಸಂಜಯ್ ಬಳಿ ಹಣವಿರಲಿಲ್ಲ. ಹೀಗಾಗಿ, ದೀಪಕ್ ಬಳಿ ₹ 20 ಪಡೆದಿದ್ದರು. ಹಲವು ದಿನ ಕಳೆದರೂ ₹ 20 ವಾಪಸು ಕೊಟ್ಟಿರಲಿಲ್ಲ. ಇದೇ ವಿಚಾರವಾಗಿ ಅವರಿಬ್ಬರ ನಡುವೆ ವೈಷಮ್ಯ ಬೆಳೆದಿತ್ತು.'

'ಸೆ. 13ರಂದು ರಾತ್ರಿ ದೀಪಕ್, ತನ್ನ ₹ 20 ನೀಡುವಂತೆ ಸಂಜಯ್ ಅವರನ್ನು ಕೇಳಿದ್ದ. ಹಣವಿಲ್ಲವೆಂದು ಅವರು ಹೇಳಿದ್ದರು. ಅಷ್ಟಕ್ಕೆ ಮಾತಿನ ಚಕಮಕಿ ನಡೆದು, ಗಲಾಟೆ ಶುರುವಾಗಿತ್ತು. ದೀಪಕ್ ಹಾಗೂ ಆತನ ಸ್ನೇಹಿತರು, ಸಂಜಯ್ ಮೇಲೆ ಹಲ್ಲೆ ಮಾಡಿ ಕೊಂದಿದ್ದರು' ಎಂದೂ ಅಧಿಕಾರಿ ವಿವರಿಸಿದರು.

ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆ: 'ಕೊಲೆ ದೃಶ್ಯ ಸಮೀಪದ ಮದ್ಯದಂಗಡಿ ಎದುರಿನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಮದ್ಯದಂಗಡಿ ವ್ಯವಸ್ಥಾಪಕರು ನೀಡಿದ್ದ ಸುಳಿವು ಆಧರಿಸಿ, ಚಿಂದಿ ಆಯುತ್ತಿದ್ದವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗಲೇ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

ಕೋಲಾರ: 17 ದಿನದಲ್ಲೇ 231 ಮಕ್ಕಳು ಆಸ್ಪತ್ರೆಗೆ ದಾಖಲು

ಕೋಲಾರ: ಜಿಲ್ಲೆಯ ಮಕ್ಕಳಲ್ಲಿ ವೈರಾಣು ಜ್ವರ ಕಾಣಿಸಿಕೊಂಡಿದ್ದು, ಪೋಷಕರಿಗೆ ಕೋವಿಡ್ ಮೂರನೇ ಅಲೆಯ ಆತಂಕ ಎದುರಾಗಿದೆ.

2 ತಿಂಗಳಿಂದ 3 ವರ್ಷದೊಳಗಿನ ಮಕ್ಕಳಲ್ಲಿ ಜ್ವರ, ಕಫ, ಕೆಮ್ಮು, ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಆಸ್ಪತ್ರೆಗೆ ದಾಖಲಾಗುತ್ತಿರುವ ಮಕ್ಕಳ ಸಂಖ್ಯೆ ದಿಢೀರ್ ಏರಿಕೆಯಾಗಿದೆ. ಮುಖ್ಯವಾಗಿ ಪಕ್ಕದ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು, ಕೋಲಾರ ಜಿಲ್ಲೆಯ ಮುಳಬಾಗಿಲು ಮತ್ತು ಮಾಲೂರು ತಾಲ್ಲೂಕಿನ ಮಕ್ಕಳು ಜ್ವರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ.

ಆಗಸ್ಟ್ ತಿಂಗಳಲ್ಲಿ 284 ಮಕ್ಕಳು ಅನಾರೋಗ್ಯದ ಕಾರಣಕ್ಕೆ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಗೆ ಒಳ ರೋಗಿಗಳಾಗಿ ದಾಖಲಾಗಿದ್ದರು. ಸೆಪ್ಟೆಂಬರ್ ತಿಂಗಳ 17 ದಿನದಲ್ಲೇ 231 ಮಕ್ಕಳು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮತ್ತೊಂದೆಡೆ ಆಸ್ಪತ್ರೆಯಲ್ಲಿ ನಿತ್ಯ ಸುಮಾರು 100 ಮಕ್ಕಳು ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದು ಮನೆಗೆ ಮರಳುತ್ತಿದ್ದಾರೆ.

ಮಕ್ಕಳನ್ನು ಕಾಡಲಾರಂಭಿಸಿದ ವೈರಾಣು ಜ್ವರ

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಹಾಸಿಗೆಗಳು ಭರ್ತಿ • ವಾತಾವರಣದ ಬದಲಾವಣೆಯಿಂದ ಅನಾರೋಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾತಾವರಣದಲ್ಲಿ ಉಂಟಾದ ಬದಲಾವಣೆಯಿಂದ ನಗರದ ಮಕ್ಕಳನ್ನು ವೈರಾಣು ಜ್ವರ ಕಾಡಲಾರಂಭಿಸಿದೆ.

ಬಿಸಿಲು, ಮೋಡ ಕವಿದ ವಾತಾವರಣ ಹಾಗೂ ತುಂತುರು ಮಳೆಯಿಂದಾಗಿ ಕಳೆದೊಂದು ವಾರದಿಂದ ಮಕ್ಕಳಲ್ಲಿ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಕೆ.ಸಿ. ಜನರಲ್ ಆಸ್ಪತ್ರೆಯ ಮಕ್ಕಳ ವಾರ್ಡ್‌ನ 30 ಹಾಸಿಗೆಗಳಲ್ಲಿ 26 ಹಾಸಿಗೆಗಳು ಭರ್ತಿಯಾಗಿವೆ. ಆರು ಮಕ್ಕಳಿಗೆ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗುತ್ತಿದೆ. ಕೆಲ ಮಕ್ಕಳಲ್ಲಿ ಉಸಿರಾಟ ಸಂಬಂಧಿ ಸೋಂಕು ಕಾಣಿಸಿಕೊಂಡಿದ್ದು, ವೈದ್ಯಕೀಯ ಆಮ್ಲಜನಕದ ಸಂಪರ್ಕ ಒದಗಿಸಲಾಗಿದೆ. ಕೆಲ ಮಕ್ಕಳು ಡೆಂಗಿ ಜ್ವರವನ್ನು ಎದುರಿಸುತ್ತಿದ್ದಾರೆ.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಬಿ.ಆರ್. ವೆಂಕಟೇಶಯ್ಯ, 'ವಿವಿಧ ಜ್ವರಗಳ ಚಿಕಿತ್ಸೆಗೆ ಆಸ್ಪತ್ರೆಗೆ ಬರುವ ಮಕ್ಕಳ ಸಂಖ್ಯೆ ವಾರದಿಂದ ಹೆಚ್ಚುತ್ತಿದೆ. ವಾತಾವರಣದಲ್ಲಿನ ಬದಲಾವಣೆಯೇ ಇದಕ್ಕೆ ಮುಖ್ಯ ಕಾರಣ. ಎಲ್ಲ ಮಕ್ಕಳಿಗೂ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದ್ದು, ಕೊರೊನಾ ಸೋಂಕಿತರಾಗಿಲ್ಲ ಎನ್ನುವುದು ದೃಢಪಟ್ಟಿದೆ' ಎಂದರು.

'ನ್ಯುಮೋನಿಯಾ, ಡೆಂಗಿ ಸೇರಿದಂತೆ ವಿವಿಧ ವೈರಾಣು ಜ್ವರಗಳು ದಾಖಲಾದ ಮಕ್ಕಳಲ್ಲಿ ಕಾಣಿಸಿಕೊಂಡಿವೆ' ಎಂದು ಹೇಳಿದರು.

ಮಕ್ಕಳ ತಜ್ಞ ಡಾ. ರಘುನಂದನ್ ಬಿ.ಜಿ, 'ಪ್ರತಿ ವರ್ಷ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ವೈರಾಣು ಜ್ವರಗಳು ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇದರಿಂದಾಗಿ ಈ ಅವಧಿಯಲ್ಲಿ ಬಹುತೇಕ ಹಾಸಿಗೆಗಳು ಭರ್ತಿಯಾಗುತ್ತವೆ. ಈ ಬಾರಿ ಜ್ವರದ ತೀವ್ರತೆ ಹೆಚ್ಚಾಗಿ ಕಾಡಿದ್ದು, ಕೆಲ ಮಕ್ಕಳಿಗೆ ಆಮ್ಲಜನಕದ ಅಗತ್ಯವಿದೆ' ಎಂದು ವಿವರಿಸಿದರು.

ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಒಂದು ತಿಂಗಳಿಂದ ರೋಗಿಗಳ ಸಂಖ್ಯೆ ಹೆಚ್ಚಿದೆ. ಕೋವಿಡೇತರ ಎಲ್ಲ 460 ಹಾಸಿಗೆಗಳೂ ಭರ್ತಿಯಾಗಿದ್ದು, ಅರ್ಧದಷ್ಟು ರೋಗಿಗಳು ಉಸಿರಾಟ ಸಂಬಂಧಿ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.



ವೈರಾಣು ಜ್ವರದಿಂದ ಬಳಲುತ್ತಿರುವ ಮಕ್ಕಳಿಗೆ ನಗರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿರುವುದು – ಪ್ರಜಾವಾಣಿ ಚಿತ್ರ

ವೈದ್ಯರು ಸೂಚಿಸಿದ ಮುನ್ನೆಚ್ಚರಿಕೆ ಕ್ರಮಗಳು

- ತಾಜಾ ಹಾಗೂ ಪೌಷ್ಟಿಕ ಆಹಾರ ಸೇವಿಸಬೇಕು
- ನೀರಿನ ಶುದ್ಧತೆ ಬಗ್ಗೆ ಗಮನಹರಿಸಬೇಕು
- ಕಾಯಿಸಿ ಆರಿಸಿದ ನೀರನ್ನೇ ಕುಡಿಯುವುದು ಉತ್ತಮ
- ಊಟ–ತಿಂಡಿಗೆ ಮುನ್ನ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಿ
- ತೆರೆದಿಟ್ಟ ತಿನಿಸು ಮತ್ತು ಕತ್ತರಿಸಿಟ್ಟಿರುವ ಹಣ್ಣುಗಳ ಸೇವನೆ ಅಪಾಯ
- ರಸ್ತೆ ಬದಿಯಲ್ಲಿನ ಕ್ಯಾಂಟೀನ್‌ಗಳಲ್ಲಿ ಆಹಾರ ಸೇವಿಸುವ ಮುನ್ನ ಅಲ್ಲಿನ ಸ್ವಚ್ಛತೆ ಪರಿಶೀಲಿಸಿಕೊಳ್ಳಿ
- ಮನೆಯ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ

ಜ್ವರದ ಲಕ್ಷಣಗಳು

- ತೀವ್ರ ಆಯಾಸ, ದಣಿವು
- ಮೈ ಕೈ ನೋವು
- ತಲೆನೋವು
- ನೆಗಡಿ, ಜ್ವರ
- ಕೆಮ್ಮು
- ಮೂಗು ಕಟ್ಟುವುದು
- ಕಣ್ಣುಗಳಲ್ಲಿ ಅಸ್ವಸ್ಥತೆ
- ಗಂಟಲು ಉರಿ

ಸ್ನೇಹಿತೆಗಾಗಿ ಮಾಡಿದ್ದ ಸಾಲ ತೀರಿಸಲು ಅಪಹರಣ ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತೆಗಾಗಿ ಮಾಡಿದ್ದ ₹ 5 ಲಕ್ಷ ಸಾಲ ತೀರಿಸಲು ಅಪಹರಣ ನಾಟಕವಾಡಿ ತನ್ನ ತಂದೆಯಿಂದಲೇ ಹಣ ಪಡೆಯಲು ಸಂಚು ರೂಪಿಸಿದ್ದ ಮುಕ್ತೂಮ್ ಸಾಬ್ (20) ಎಂಬಾತನನ್ನು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಠಾಣೆ ವ್ಯಾಪ್ತಿಯ ಜೆ.ಸಿ.ನಗರದ 20ನೇ ಅಡ್ಡರಸ್ತೆ ನಿವಾಸಿಯಾಗಿದ್ದ ಮುಕ್ತೂಮ್, ಗುತ್ತಿಗೆದಾರ ಗನಿಸಾಬ್ ಎಂಬುವರ ಮಗ. ತಂದೆ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡಾಗ ಮಗ ಸಿಕ್ಕಿಬಿದ್ದ. ಆತನೇ ಅಪಹರಣ ನಾಟಕವಾಡಿದ್ದನ್ನು ಒಪ್ಪಿಕೊಂಡ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯಶವಂತಪುರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮುಕ್ತೂಮ್, ತನ್ನ ಕಾಲೇಜು ಸ್ನೇಹಿತೆಯೊಬ್ಬಳ ಜೊತೆ ಸಲುಗೆ ಇಟ್ಟುಕೊಂಡಿದ್ದ. ತಾನು ಸಂಕಷ್ಟದಲ್ಲಿರುವುದಾಗಿ ಆಕೆ ಹೇಳಿದ್ದಳು. ಅದೇ ಕಾರಣಕ್ಕೆ ಮುಕ್ತೂಮ್, ವ್ಯಕ್ತಿಯೊಬ್ಬರ ಬಳಿ ಬಡ್ಡಿಗೆ ₹ 5 ಲಕ್ಷ ಸಾಲ ಪಡೆದು ಸ್ನೇಹಿತೆಗೆ ಕೊಟ್ಟಿದ್ದ.'

'ಹಲವು ತಿಂಗಳಾದರೂ ಮುಕ್ತೂಮ್ ಸಾಲ ತೀರಿಸಿರಲಿಲ್ಲ. ಸಾಲ ಕೊಟ್ಟವರು ಎಚ್ಚರಿಕೆ ನೀಡಿದ್ದರು. ಸಾಲ ತೀರಿಸಲು ಹಣ ಹೊಂದಿಸಬೇಕೆಂದು ತೀರ್ಮಾನಿಸಿದ್ದ ಆತ, ತಂದೆಯನ್ನೇ ಬೆದರಿಸಿ ಹಣ ಪಡೆಯಲು ಅಪಹರಣ ನಾಟಕವಾಡಲು ಮುಂದಾಗಿದ್ದ' ಎಂದೂ ಮೂಲಗಳು ತಿಳಿಸಿವೆ.

'ಸೆ.19ರಂದು ಮಧ್ಯಾಹ್ನ ಮುಕ್ತೂಮ್ ಮನೆಯಿಂದ ನಾಪತ್ತೆಯಾಗಿದ್ದ. ಮರುದಿನ ತಂದೆಯ ವಾಟ್ಸ್‌ಆ್ಯಪ್‌ಗೆ ಸಂದೇಶ ಕಳುಹಿಸಿದ್ದ ಮಗ, 'ನನ್ನನ್ನು ನಾಲ್ಕು ಜನ ಅಪಹರಣ ಮಾಡಿದ್ದಾರೆ. ₹5 ಲಕ್ಷ ಕೊಟ್ಟರೆ ಬಿಡುವುದಾಗಿ ಹೇಳುತ್ತಿದ್ದಾರೆ. ಹಣ ಕೊಟ್ಟು ನನ್ನನ್ನು ಬಿಡಿಸಿಕೊಂಡು ಹೋಗಿ' ಎಂದಿದ್ದ. ಆಡಿಯೊ ಸಂದೇಶವನ್ನೂ ಹಲವು ಬಾರಿ ಕಳುಹಿಸಿದ್ದ. ಗಾಬರಿಗೊಂಡ ತಂದೆ ಗನಿಸಾಬ್ ಠಾಣೆಗೆ ದೂರು ನೀಡಿದ್ದರು.'

'ಮುಕ್ತೂಮ್ ಮೊಬೈಲ್ ಸುಳಿವು ಆಧರಿಸಿ ತನಿಖೆ ಆರಂಭಿಸಲಾಗಿತ್ತು. ತಿರುಪತಿಯ ಹೋಟೆಲೊಂದರ ಕೊಠಡಿಯಲ್ಲಿ ಆತ ಇರುವ ಮಾಹಿತಿ ಸಿಕ್ಕಿತ್ತು. ಸ್ಥಳಕ್ಕೆ ಹೋದ ವಿಶೇಷ ತಂಡ, ಆತನನ್ನು ಹಿಡಿದುಕೊಂಡು ನಗರಕ್ಕೆ ಬಂದಿದೆ' ಎಂದೂ ಮೂಲಗಳು ಹೇಳಿವೆ.

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯಲ್ಲಿ ಸಿ.ಎಂ ಬೊಮ್ಮಾಯಿ ಹೇಳಿಕೆ

‘ನಂಜುಂಡಪ್ಪ ವರದಿ ಪರಿಷ್ಕರಣೆ’

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ‘ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯ ಮಾನದಂಡದಂತೆ ರಾಜ್ಯದ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಈಗ ಹಣ ವಿನಿಯೋಗಿಸಲಾಗುತ್ತಿದೆ. ನೀತಿ ಆಯೋಗ, ವಿಶ್ವಸಂಸ್ಥೆಯ ವರದಿ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕ ಆಧಾರವಾಗಿಟ್ಟುಕೊಂಡು ನಂಜುಂಡಪ್ಪ ವರದಿ ಪರಿಷ್ಕರಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ಇಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ನಂಜುಂಡಪ್ಪ ವರದಿ ಸಿದ್ಧಪಡಿಸಿದಾಗ ಇದ್ದ ಪರಿಸ್ಥಿತಿಗೂ ಈಗಿನ ಸ್ಥಿತಿಗೂ ಸಾಕಷ್ಟು ವ್ಯತ್ಯಾಸವಿದೆ. ಮುಂದಿನ ಐದು ವರ್ಷಗಳ ಅಭಿವೃದ್ಧಿಗೆ ಹೊಸ ಮಾನದಂಡ ನಿಗದಿಪಡಿಸಲಾಗುವುದು’ ಎಂದರು. ಆದರೆ, ಈ ವರದಿ ಪರಿಷ್ಕರಣೆಗೆ ಹೊಸ ಉನ್ನತಾಧಿಕಾರ ಸಮಿತಿ ರಚಿಸಲಾಗುತ್ತದೆಯೇ ಎಂಬುದರ ಬಗ್ಗೆ ಮಾಹಿತಿ ನೀಡಲಿಲ್ಲ.

ಕೆಕೆಆರ್‌ಡಿಬಿಗೆ ₹3 ಸಾವಿರ ಕೋಟಿ ಅನುದಾನದ ಭರವಸೆ

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಉದ್ದೇಶಕ್ಕೆಂದೇ ಸ್ಥಾಪನೆಯಾಗಿರುವ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಗೆ ಈಗ ನೀಡಿರುವ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಿದರೆ ಮುಂದಿನ ಬಜೆಟ್‌ನಲ್ಲಿ ಅನುದಾನವನ್ನು ₹ 1,500 ಕೋಟಿಯಿಂದ ₹ 3 ಸಾವಿರ ಕೋಟಿಗೆ ಹೆಚ್ಚಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

‘ರಾಜ್ಯ ಸರ್ಕಾರ ಇಲ್ಲಿಯವರೆಗೆ ₹ 8 ಸಾವಿರ ಕೋಟಿಗೂ ಅಧಿಕ ಮೊತ್ತವನ್ನು ‘ಕೆಕೆಆರ್‌ಡಿಬಿ’ಗೆ ಬಿಡುಗಡೆ ಮಾಡಿದೆ. ಅದರಲ್ಲಿ ₹ 6 ಸಾವಿರ ಕೋಟಿ ಖರ್ಚಾಗಿದೆ. ಇನ್ನೂ 13 ಸಾವಿರ ಕಾಮಗಾರಿಗಳು ಪೂರ್ಣಗೊಳ್ಳಬೇಕಿದ್ದು, ಉಳಿದ ₹ 2 ಸಾವಿರ ಕೋಟಿಯನ್ನು ಬರುವ ಮಾರ್ಚ್‌ನೊಳಗೆ ಖರ್ಚು ಮಾಡಬೇಕು. ಅಂದಾಗ ಮಾತ್ರ ಹೆಚ್ಚುವರಿ ₹ 1,500 ಕೋಟಿಯನ್ನು ಮುಂದಿನ ಬಜೆಟ್‌ನಲ್ಲಿ ನೀಡುತ್ತೇನೆ’ ಎಂದು ಷರತ್ತು ವಿಧಿಸಿದರು.


‘371 (ಜೆ) ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಚನೆಯಾದ ಕೋಶವನ್ನು ಬೆಂಗಳೂರಿನಿಂದ ಕಲಬುರ್ಗಿಗೆ ಸ್ಥಳಾಂತರಿಸಲಾಗುವುದು. ಇದರಿಂದಾಗಿ ಈ ಭಾಗದಲ್ಲಿ ಖಾಲಿ ಇರುವ ‘ಎ’, ‘ಬಿ’, ‘ಸಿ’ ಮತ್ತು ‘ಡಿ’ ಶ್ರೇಣಿಯ ಹುದ್ದೆಗಳ ನೇಮಕಾತಿಯ ಮೇಲ್ವಿಚಾರಣೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗುತ್ತದೆ. ಈಗ ಮಂಜೂರಾಗಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಮೊದಲ ಆದ್ಯತೆ ನೀಡುತ್ತೇವೆ. ‘ಕೆಕೆಆರ್‌ಡಿಬಿ’ಗೂ ಸಿಬ್ಬಂದಿ ನೇಮಿಸಬೇಕು ಎಂಬ ಬೇಡಿಕೆ ಇದೆ. ಇದೂ ಸೇರಿದಂತೆ ಹೊಸ ಹುದ್ದೆಗಳ ಭರ್ತಿಗೆ ನಂತರ ಕ್ರಮ ಕೈಗೊಳ್ಳುತ್ತೇವೆ’ ಎಂದರು.

‘ನಾನು ಯಾವುದೇ ಹೊಸ ಘೋಷಣೆಗಳನ್ನು ಹೊರಡಿಸುವುದಿಲ್ಲ. ಈಗಾಗಲೇ ಇರುವ ಯೋಜನೆಗಳನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಗಮನ ಹರಿಸುತ್ತೇನೆ’ ಎಂದರು.

‘ಕಲ್ಯಾಣ ಕರ್ನಾಟಕದ ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳ ಮಕ್ಕಳಲ್ಲಿ ಅಪೌಷ್ಟಿಕತೆಯ ಪ್ರಮಾಣ ಹೆಚ್ಚಿದೆ. ಹೀಗಾಗಿ ಈ ಜಿಲ್ಲೆಗಳನ್ನು ಕೇಂದ್ರ ಸರ್ಕಾರ ಮಹತ್ವಾಕಾಂಕ್ಷಿ ಜಿಲ್ಲೆಗಳು ಎಂದು ಗುರುತಿಸಿದೆ. ಈ ಜಿಲ್ಲೆಗಳೂ ಸೇರಿದಂತೆ ಈ ಪ್ರದೇಶದಲ್ಲಿ ಶಿಕ್ಷಣ, ಆರೋಗ್ಯ, ಅಪೌಷ್ಟಿಕತೆ ನಿವಾರಣೆ ಹಾಗೂ ಸ್ವಯಂ ಉದ್ಯೋಗಕ್ಕೆ ಒತ್ತು ನೀಡುವ ಮೂಲಕ ಮಾನವ ಅಭಿವೃದ್ಧಿ ಸೂಚ್ಯಂಕ ಹೆಚ್ಚಿಸಲು ಕ್ರಮಕೈಗೊಳ್ಳಲಾಗುವುದು’ ಎಂದರು.

‘ಒಂದು ಕುಟುಂಬ ಚೈತನ್ಯಶೀಲವಾಗಿರಬೇಕು. ಇಂತಹ ಖುಷಿ ಕುಟುಂಬಗಳನ್ನು ಹೆಚ್ಚಿಸಿ ಆ ಮೂಲಕ ಅಭಿವೃದ್ಧಿ ಸೂಚ್ಯಂಕ ಅಳೆಯಬೇಕು ಎಂಬುದು ನಮ್ಮ ಬಯಕೆ. ಯೋಜನಾ ಆಯೋಗದ ಸದಸ್ಯರೊಂದಿಗೆ ಚರ್ಚಿಸಿ ಈ ಬಗ್ಗೆ ಕಾರ್ಯಕ್ರಮ ರೂಪಿಸುತ್ತೇವೆ’ ಎಂದು ಹೇಳಿದರು.

ಉದ್ಯೋಗ ಸೃಷ್ಟಿಗೆ ಒತ್ತು: ‘ಉದ್ಯೋಗ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಒತ್ತು ನೀಡುತ್ತೇವೆ. ಉದ್ಯಮಿಗಳನ್ನು ಸೆಳೆಯಲು ಬಂಡವಾಳ ಹೂಡಿಕೆ ಸಮಾವೇಶ ನಡೆಸುತ್ತೇವೆ. ಉದ್ಯಮಿಗಳು ಎಷ್ಟು ಬಂಡವಾಳ ಹೂಡಿಕೆ ಮಾಡುತ್ತಾರೆ ಎಂಬುದು ಮುಖ್ಯವಲ್ಲ. ಅವರು ಎಷ್ಟು ಜನರಿಗೆ ಉದ್ಯೋಗ ನೀಡುತ್ತಾರೆ ಎಂಬುದರ ಆಧಾರದ ಮೇಲೆ ಸರ್ಕಾರ ಅವರಿಗೆ ರಿಯಾಯ್ತಿ ನೀಡಲಿದೆ’ ಎಂದು ಪ್ರಕಟಿಸಿದರು.



ಸುಬ್ರಮಣಿಯನ್ ಸ್ವಾಮಿ ಅವರೊಬ್ಬ ಸ್ವತಂತ್ರ ಚಿಂತಕ ಎಂದು ಹೇಳಿದ್ದೇನೆ. ಅದು ಟೀಕೆಯಲ್ಲ. ನನ್ನ ಹೇಳಿಕೆ ಖಂಡಿಸಿ ಟ್ವೀಟ್ ಮಾಡಿರುವ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ



ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ನಡೆದ ‘ಕರಾಳ ದಿನ’ ಆಚರಣೆಯಲ್ಲಿ ಸಾವಿರಾರು ಜನರು ಸೇರಿದ್ದರು –ಪಿಟಿಐ ಚಿತ್ರ

ಕೃಷಿ ಕಾಯ್ದೆಗಳಿಗೆ 1 ವರ್ಷ: ದೆಹಲಿಯಲ್ಲಿ ಪ್ರತಿಭಟನೆ

ಎಸ್‌ಎಡಿಯಿಂದ ಕರಾಳ ದಿನ

ನವದೆಹಲಿ (ಪಿಟಿಐ): ಮೂರು ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರವು ಅಂಗೀಕರಿಸಿ ಸೆ.17ಕ್ಕೆ ಒಂದು ವರ್ಷ ತುಂಬಿತು. ಈ ಹಿನ್ನೆಲೆಯಲ್ಲಿ ಶುಕ್ರವಾರವನ್ನು ‘ಕರಾಳ ದಿನ’ವನ್ನಾಗಿ ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಆಚರಿಸಿತು. ಅದರ ಅಂಗವಾಗಿ ದೆಹಲಿಯ ಗುರುದ್ವಾರ ರಾಕಬ್ ಗಂಜ್‌ನಿಂದ ಸಂಸತ್ ಭವನದವರೆಗೆ ರೈತರ ಪ್ರತಿಭಟನಾ ಮೆರವಣಿಗೆ ಆಯೋಜಿಸಿತ್ತು.

ಸಂಚಾರದಲ್ಲಿ ಭಾರಿ ವ್ಯತ್ಯಯ

ಪ್ರತಿಭಟನೆಯಿಂದಾಗಿ ದೆಹಲಿಯ ಪ್ರಮುಖ ಪ್ರದೇಶಗಳಾದ ಲ್ಯುಟೆನ್ಸ್ ಮತ್ತು ಐಟಿಒ ಸೇರಿ ಹಲವೆಡೆ ಸಂಚಾರದಲ್ಲಿ ಭಾರಿ ವ್ಯತ್ಯಯ ಉಂಟಾಗಿತ್ತು.

ದೆಹಲಿ ಸಂಚಾರ ಪೊಲೀಸರು ಹಲವು ಮಾರ್ಗಗಳನ್ನು ಮುಚ್ಚಿದ್ದರು ಮತ್ತು ಹಲವು ಮಾರ್ಗಗಳಿಗೆ ಬದಲಿ ಮಾರ್ಗಗಳನ್ನು ಒದಗಿಸಿದ್ದರು.

ಎರಡು ಮೆಟ್ರೊ ನಿಲ್ದಾಣ ಬಂದ್: ರೈತರು ಪ್ರತಿಭಟನೆ ನಡೆಸುತ್ತಿರುವ ಪ್ರದೇಶಗಳಲ್ಲಿ ಒಂದಾಗಿರುವ ದೆಹಲಿ–ಹರಿಯಾಣ ನಡುವಿನ ಟಿಕ್ರಿ ಗಡಿ ಬಳಿಯ ಎರಡು ಮೆಟ್ರೊ ನಿಲ್ದಾಣಗಳನ್ನು ಭದ್ರತೆಯ ದೃಷ್ಟಿಯಲ್ಲಿ ಮುಚ್ಚಲಾಗಿತ್ತು ಎಂದು ದೆಹಲಿ ಮೆಟ್ರೊ ರೈಲು ನಿಗಮ ಹೇಳಿದೆ.

ಶಿರೋಮಣಿ ಅಕಾಲಿ ದಳ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಮತ್ತು ಮಾಜಿ ಕೇಂದ್ರ ಸಚಿವೆ ಹರ್‌ಸಿಮ್ರತ್ ಕೌರ್ ಬಾದಲ್ ಅವರ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು.

ಪಕ್ಷದ ಸದಸ್ಯರು ಶುಕ್ರವಾರ ಬೆಳಿಗ್ಗೆಯೇ ಗುರುದ್ವಾರ ರಾಕಬ್ ಗಂಜ್ ಬಳಿ ಸೇರಿದ್ದರು. ರೈತರು ಗುರುದ್ವಾರ ರಾಕಬ್ ಗಂಜ್ ಬಳಿ ಪ್ರತಿಭಟನೆ ನಡೆಸುವುದಾಗಿ ಹೇಳಿದ್ದ ಕಾರಣ ದೆಹಲಿಯ ಹಲವು ಭಾಗಗಳಲ್ಲಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿತ್ತು. ವಾಹನಗಳನ್ನು ಪರಿಶೀಲಿಸಿದ ಬಳಿಕವೇ ಸಂಚಾರಕ್ಕೆ ಅನುವು ಮಾಡಲಾಗುತ್ತಿತ್ತು ಎಂದು ಹಿರಿಯ ಸಂಚಾರ ಪೊಲೀಸರೊಬ್ಬರು ಹೇಳಿದ್ದಾರೆ.

ಪೊಲೀಸ್ ವಶಕ್ಕೆ ನಾಯಕರು: ಸುಖ್‌ಬೀರ್ ಸಿಂಗ್ ಬಾದಲ್ ಮತ್ತು ಹರ್‌ಸಿಮ್ರತ್ ಕೌರ್ ಸೇರಿ ಪ್ರತಿಭಟನಾಕಾರರನ್ನು ಸಂಸತ್ ಭವನ ಮಾರ್ಗದಲ್ಲಿ ಪೊಲೀಸರು ವಶಕ್ಕೆ ತೆಗೆದುಕೊಂಡರು. ಬಳಿಕ ಅವರನ್ನು ಬಿಡುಗಡೆ ಮಾಡಿದರು.

‘ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಿ ಅವರು ಪ್ರತಿಭಟನಾ ಮೆರವಣಿಗೆ ನಡೆಸಿದ್ದರು. ಹಾಗಾಗಿ ಅವರನ್ನು ವಶಕ್ಕೆ ತೆಗೆದುಕೊಳ್ಳಲಾಯಿತು’ ಎಂದು ಪೊಲೀಸರು ಹೇಳಿದ್ದಾರೆ.

ಪ್ರತಿಭಟನೆ ಕುರಿತು ಟ್ವೀಟ್ ಮಾಡಿರುವ ಹರ್‌ಸಿಮ್ರತ್ ಕೌರ್, ‘ಇಂದು ನಡೆದ ಪ್ರತಿಭಟನೆ ರೈತರ ಅಸಮ್ಮತಿಯನ್ನು ಮಾತ್ರ ತೋರಿಸುವುದಿಲ್ಲ, ಬದಲಾಗಿ ನಿರಂಕುಶ ಪ್ರಭುತ್ವದ ವಿರುದ್ಧ ಪ್ರತಿರೋಧ ತೋರಿದ ದಿನವಾಗಿ ಇತಿಹಾಸದಲ್ಲಿ ದಾಖಲಾಗುತ್ತದೆ. ರೈತರಿಗೆ ನ್ಯಾಯ ಕೊಡಿಸಲು ಎದ್ದ ಬಂಡಾಯದ ದಿನವನ್ನಾಗಿ ನಾವೆಲ್ಲರೂ ಈ ದಿನವನ್ನು ಗುರುತಿಸೋಣ’ ಎಂದಿದ್ದಾರೆ.

‘ರೈತರು ದೆಹಲಿ ಗಡಿಗಳಲ್ಲಿ ಒಂದು ವರ್ಷದಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರ ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ನಾವು ಎನ್‌ಡಿಎ ಮೈತ್ರಿಕೂಟ ತೊರೆದ ಕುರಿತು ನಮಗೆ ಹೆಮ್ಮೆ ಇದೆ’ ಎಂದು ಅವರು ಹೇಳಿದ್ದಾರೆ.

ಬ್ಯಾಡರಹಳ್ಳಿಯಲ್ಲಿ ಹೃದಯ ವಿದ್ರಾವಕ ಘಟನೆ; ಬದುಕುಳಿದ ಬಾಲಕಿಗೆ ಚಿಕಿತ್ಸೆ

ನಾಲ್ವರು ಆತ್ಮಹತ್ಯೆ: ಕೂಸಿನ ಮೃತದೇಹವೂ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಬಳಿಯ ತಿಗಳರಪಾಳ್ಯದ ಮನೆಯಲ್ಲಿ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಶರಣಾಗಿದ್ದು, ಅದೇ ಮನೆಯಲ್ಲೇ ಒಂಬತ್ತು ತಿಂಗಳ ಕೂಸಿನ ಮೃತದೇಹ ಸಹ ಪತ್ತೆಯಾಗಿರುವ ಹೃದಯವಿದ್ರಾವಕ ಘಟನೆ ನಡೆದಿದೆ.

‘ಭಾರತಿ (51), ಅವರ ಮಕ್ಕಳಾದ ಸಿಂಚನಾ (34), ಸಿಂಧೂರಾಣಿ (33) ಹಾಗೂ ಮಧುಸಾಗರ್ (25) ಆತ್ಮಹತ್ಯೆ ಮಾಡಿಕೊಂಡವರು. ಸಿಂಧೂರಾಣಿ ಅವರ ಕೂಸು ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದೆ. ಐದೂ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

‘ಐವರ ಮೃತದೇಹ ಸಿಕ್ಕ ಮನೆಯಲ್ಲೇ ಸಿಂಚನಾ ಅವರ ಮಗಳಾದ ಎರಡೂವರೆ ವರ್ಷದ ಬಾಲಕಿ ಪತ್ತೆಯಾಗಿದ್ದಾಳೆ. ಪ್ರಜ್ಞೆ ತಪ್ಪಿ ಉಸಿರಾಡುತ್ತಿದ್ದ ಆಕೆಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಸುಧಾರಿಸುತ್ತಿದೆ’ ಎಂದೂ ತಿಳಿಸಿದರು.

‘ಮಾಸಪತ್ರಿಕೆಯೊಂದನ್ನು ನಡೆಸುತ್ತಿದ್ದ ಮಂಡ್ಯದ ಹಲ್ಲೇಗೆರೆ ಶಂಕರ್ ಅವರ ಪತ್ನಿ ಭಾರತಿ, ಮಕ್ಕಳು ಹಾಗೂ ಮೊಮ್ಮಕ್ಕಳ ಜೊತೆ ತಿಗಳರಪಾಳ್ಯದಲ್ಲಿ ವಾಸವಿದ್ದರು. ಬೇರೆ ಊರಿನಲ್ಲಿದ್ದ ಶಂಕರ್, ನಾಲ್ಕು ದಿನಗಳಿಂದ ಪತ್ನಿಗೆ ನಿರಂತರವಾಗಿ ಕರೆ ಮಾಡಿದರೂ ಸ್ವೀಕರಿಸಿರಲಿಲ್ಲ. ಗಾಬರಿಗೊಂಡ ಅವರು ಶುಕ್ರವಾರ ಸಂಜೆ ಮನೆಗೆ ಬಂದು ಕಿಟಕಿ ತೆರೆದು ನೋಡಿದಾಗ ನೇಣುಬಿಗಿದ ಸ್ಥಿತಿಯಲ್ಲಿ ಮೃತದೇಹಗಳು ಕಂಡಿದ್ದವು’ ಎಂದೂ ಹೇಳಿದರು.

‘ಕೊಳೆತ ಸ್ಥಿತಿಯಲ್ಲಿದ್ದ ಮೃತದೇಹಗಳ ವಿಡಿಯೊ ಚಿತ್ರೀಕರಿಸಿದ್ದ ಶಂಕರ್, ಅದನ್ನು ಪೊಲೀಸರಿಗೆ ಕಳುಹಿಸಿದ್ದರು. ಸ್ಥಳಕ್ಕೆ ಹೋದ ಪೊಲೀಸರು, ಬಾಗಿಲು ಮುರಿದು ಮೃತದೇಹಗಳನ್ನು ಸಾಗಿಸಿದ್ದಾರೆ’ ಎಂದೂ ತಿಳಿಸಿದರು.

ಹಾಸಿಗೆ ಮೇಲೆ ಕೂಸು: ‘ಭಾರತಿ, ಸಿಂಚನಾ, ಸಿಂಧೂರಾಣಿ ಹಾಗೂ ಮಧುಸಾಗರ್ ಅವರು ಪ್ರತ್ಯೇಕ ಕೊಠಡಿಗಳಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೂಸಿನ ಮೃತದೇಹ ಮನೆಯ ಹಾಸಿಗೆ ಮೇಲೆ ಪತ್ತೆಯಾಗಿದೆ’ ಎಂದೂ ಡಿಸಿಪಿ ಮಾಹಿತಿ ನೀಡಿದರು.

‘ಹಸಿವಿನಿಂದ ಬಳಲಿ ಕೂಸು ಮೃತಪಟ್ಟಿರುವ ಅನುಮಾನವಿದೆ. ಇದರ ನಡುವೆಯೇ ಬದುಕಿರುವ ಬಾಲಕಿ ಸದ್ಯ ಆಸ್ಪತ್ರೆಯಲ್ಲಿದ್ದು, ಆಕೆಯ ಹೇಳಿಕೆ ಪಡೆದ ನಂತರವೇ ಮತ್ತಷ್ಟು ಮಾಹಿತಿ ಸಿಗಲಿದೆ. ಇದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬುದೂ ತಿಳಿಯಲಿದೆ’ ಎಂದೂ ವಿವರಿಸಿದರು.

ವಿಶೇಷ ತಂಡ ರಚನೆ: ‘ನಾಲ್ಕು ದಿನಗಳ ಹಿಂದೆಯೇ ಎಲ್ಲರೂ ಮೃತಪಟ್ಟಿರುವುದು ಗೊತ್ತಾಗುತ್ತಿದೆ. ಈ ಬಗ್ಗೆ ಅಕ್ಕ–ಪಕ್ಕದ ಯಾರಿಗೂ ಅನುಮಾನ ಬಂದಿಲ್ಲ. ಶಂಕರ್ ಮನೆಗೆ ಬಂದಿದ್ದಾಗಲೇ ಎಲ್ಲರಿಗೂ ವಿಷಯ ಗೊತ್ತಾಗಿದೆ’ ಎಂದೂ ಡಿಸಿಪಿ ಹೇಳಿದರು.


‘ಸಿಂಧೂರಾಣಿ ಹಾಗೂ ಸಿಂಚನಾ ಅವರನ್ನು ಮದುವೆ ಮಾಡಿಕೊಡಲಾಗಿತ್ತು. ಹೆರಿಗೆಗಾಗಿ ಸಿಂಧೂರಾಣಿ ಇತ್ತೀಚೆಗೆ ತವರು ಮನೆಗೆ ಬಂದು ಉಳಿದುಕೊಂಡಿದ್ದರು. ಸಿಂಚನಾ ಸಹ ಬಂದಿದ್ದರು. ಇವರೆಲ್ಲರ ಆತ್ಮಹತ್ಯೆಗೆ ಕಾರಣವೇನು ಎಂಬುದು ಗೊತ್ತಾಗಿಲ್ಲ. ಮನೆಯಲ್ಲೂ ಯಾವುದೇ ಮರಣ ಪತ್ರ ಸಿಕ್ಕಿಲ್ಲ. ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ’ ಎಂದೂ ಡಿಸಿಪಿ ಹೇಳಿದರು.

ಮೃತದೇಹ ಜೊತೆ ನಾಲ್ಕು ದಿನ ಕಳೆದ ಬಾಲಕಿ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ಕೂಸು ಸೇರಿ ಐವರು ಮೃತಪಟ್ಟಿರುವ ಹೃದಯ ವಿದ್ರಾವಕ ಘಟನೆಯಲ್ಲಿ ಬದುಕುಳಿದಿರುವ ಬಾಲಕಿ, ಮನೆಯಲ್ಲಿದ್ದ ಮೃತದೇಹಗಳ ಜೊತೆಯಲ್ಲೇ ನಾಲ್ಕು ದಿನ ಕಳೆದಿದ್ದಳು ಎಂಬುದು ತನಿಖೆಯಿಂದ ಗೊತ್ತಾಗಿದೆ.

‘ಭಾರತಿ, ಸಿಂಧೂರಾಣಿ, ಸಿಂಚನಾ ಹಾಗೂ ಮಧುಸಾಗರ್ ಅವರು ನೇಣು ಹಾಕಿಕೊಳ್ಳುವ ವೇಳೆ ಎರಡೂವರೆ ವರ್ಷದ ಬಾಲಕಿ ಸ್ಥಳದಲ್ಲಿದ್ದಳು. ಜೊತೆಯಲ್ಲಿ, ಒಂಬತ್ತು ತಿಂಗಳ ಕೂಸು ಸಹ ಹಾಸಿಗೆ ಮೇಲಿತ್ತು. ಅವರಿಬ್ಬರನ್ನು ಬಿಟ್ಟು ನಾಲ್ವರು ಪ್ರತ್ಯೇಕ ಕೊಠಡಿಗಳಲ್ಲಿ ಆತ್ಮಹತ್ಯೆಗೆ ಶರಣಾಗಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆತ್ಮಹತ್ಯೆಗೂ ಮುನ್ನ ಮನೆಯ ಬಾಗಿಲು ಹಾಗೂ ಗೇಟ್ ಬಂದ್ ಮಾಡಲಾಗಿತ್ತು. ಬಾಲಕಿ ಹೊರಗೆ ಹೋಗಲೂ ಅವಕಾಶವೇ ಇರಲಿಲ್ಲ. ನಾಲ್ವರು ನೇಣಿಗೆ ಶರಣಾದರೂ ಏನಾಗಿದೆ ಎಂಬುದು ಬಾಲಕಿಗೆ ಗೊತ್ತಾಗಿರಲಿಲ್ಲ. ನೇತಾಡುತ್ತಿದ್ದ ತನ್ನ ತಾಯಿ ಸಿಂಚನಾ ಅವರ ಕಾಲುಗಳನ್ನು ಹಿಡಿದುಕೊಂಡು ಬಾಲಕಿ ಅತ್ತಿದ್ದಳು. ಮನೆಯಲ್ಲಿದ್ದ ಮೃತದೇಹಗಳ ಬಳಿಯೇ ಓಡಾಡಿ ನಾಲ್ಕು ದಿನ ಕಳೆದಿದ್ದಳು’ ಎಂದೂ ತಿಳಿಸಿವೆ.



ಆತ್ಮಹತ್ಯೆಗೆ ಶರಣಾಗಿರುವ ಸಿಂಧೂರಾಣಿ, ಭಾರತಿ, ಸಿಂಚನಾ ಹಾಗೂ ಮಧುಸಾಗರ್. ಚಿತ್ರದಲ್ಲಿರುವ ಮಗು ಬದುಕುಳಿದಿದೆ. ಶಂಕರ್ (ಬಲದಿಂದ ಎರಡನೆಯವರು) ಈ ಸಂದರ್ಭದಲ್ಲಿ ಮನೆಯಲ್ಲಿ ಇರಲಿಲ್ಲ

‘ಮನೆಯಲ್ಲಿ ಒಂದು ಬಿಸ್ಕತ್ ಬಿಟ್ಟರೆ ತಿನ್ನಲು ಏನೂ ಇರಲಿಲ್ಲ. ಅದೇ ಬಿಸ್ಕತ್ ತಿಂದು ಬಾಲಕಿ ನಾಲ್ಕು ದಿನ ಬದುಕಿದ್ದಳು. ಪೊಲೀಸರು ಮನೆಯೊಳಗೆ ಹೋಗುತ್ತಿದ್ದಂತೆ ಪ್ರಜ್ಞೆ ಕಳೆದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಬಾಲಕಿಯನ್ನು ತ್ವರಿತವಾಗಿ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸಿ ಬಾಲಕಿ ಚೇತರಿಸಿಕೊಂಡಿದ್ದು, ಆಸ್ಪತ್ರೆಯಿಂದ ಸಂಬಂಧಿಕರ ಮನೆಗೆ ಕಳುಹಿಸಲಾಗಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಘಟನೆ ವಿವರಿಸದ ಬಾಲಕಿ : ‘ಘಟನೆಯಿಂದ ಬಾಲಕಿ ಆಘಾತಕ್ಕೆ ಒಳಗಾಗಿದ್ದಾಳೆ. ಘಟನೆ ಬಗ್ಗೆ ವಿವರಿಸುವಷ್ಟು ಮಾತು ಆಕೆಗೆ ಬರುವುದಿಲ್ಲ. ಸದ್ಯ ಸಂಬಂಧಿಕರ ಮನೆಯಲ್ಲಿ ಇದ್ದಾಳೆ. ಬೇರೆ ಊರಿನಲ್ಲಿರುವ ತಂದೆಯ ಸಂಬಂಧಿಕರಿಗೂ ಮಾಹಿತಿ ನೀಡಲಾಗಿದೆ. ಅವರು ಬಂದ ಬಳಿಕವೇ ಬಾಲಕಿಯನ್ನು ಮಾತನಾಡಿಸಬೇಕಿದೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಕಳಪೆ ಮಾಸ್ಕ್: ತನಿಖೆಗೆ ಆದೇಶ

ಬೆಂಗಳೂರು: ವಿಧಾನ ಪರಿಷತ್ ಸದಸ್ಯರಿಗೆ ವಿತರಿಸಿರುವ ಮಾಸ್ಕ್‌ಗಳು ಕಳಪೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಕಂಡುಬಂದಿದ್ದು, ಈ ಸಂಬಂಧ ತನಿಖೆ ನಡೆಸುವಂತೆ ಸಭಾಪತಿ ಬಸವರಾಜ ಹೊರಟ್ಟಿ ಶುಕ್ರವಾರ ಆದೇಶ ಹೊರಡಿಸಿದರು.

‘ಪರಿಷತ್ ಸದಸ್ಯರಿಗೆ ವಿತರಿಸಿರುವ ಮಾಸ್ಕ್‌ಗಳು ಕಳಪೆಯಾಗಿವೆ. ಅವಧಿ ಮುಗಿದ ಮಾಸ್ಕ್‌ಗಳ ಮೇಲೆ ಸ್ಟಿಕ್ಕರ್ ಅಂಟಿಸಿ ನಮಗೆ ನೀಡಲಾಗಿದೆ’ ಎಂದು ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ಗುರುವಾರ ಸದನದಲ್ಲೇ ಆರೋಪಿಸಿದ್ದರು. ಈ ಕುರಿತು ತನಿಖೆ ನಡೆಸುವಂತೆ ಪರಿಷತ್ ಸಚಿವಾಲಯದ ಅಧಿಕಾರಿಗಳಿಗೆ ಸಭಾಪತಿ ಸೂಚಿಸಿದ್ದರು.

ಶುಕ್ರವಾರ ಸದನದಲ್ಲಿ ಈ ಕುರಿತು ತೀರ್ಮಾನ ಪ್ರಕಟಿಸಿದ ಸಭಾಪತಿ, ‘ಒಂದು ವರ್ಷದ ಅವಧಿ ಮುಗಿದಿರುವ ಮಾಸ್ಕ್‌ಗಳ ಮೇಲೆ ಹೊಸ ಸ್ಟಿಕ್ಕರ್ ಅಂಟಿಸಿರುವುದು ಕಂಡುಬಂದಿದೆ. ಮಾಸ್ಕ್‌ಗಳ ಗುಣಮಟ್ಟ ಕೂಡ ಕಳಪೆಯಾಗಿದೆ. ಆರೋಗ್ಯ ಇಲಾಖೆ ಖರೀದಿಸಿ, ಪೂರೈಕೆ ಮಾಡಿದೆ ಎಂಬ ಮಾಹಿತಿ ಲಭಿಸಿದೆ’ ಎಂದರು.

ಕಳಪೆ ಮಾಸ್ಕ್‌ಗಳನ್ನು ಖರೀದಿಸಿ, ಪೂರೈಸಿರುವ ಕುರಿತು ತನಿಖೆ ನಡೆಸಬೇಕು. ಅಕ್ರಮ ಎಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಆದೇಶಿಸಿದರು.

ಚಿನ್ನದ ಬೆಲೆ ಕುಸಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಶುಕ್ರವಾರ ಪ್ರತಿ 10 ಗ್ರಾಂಗೆ ₹ 1,130ರಷ್ಟು ಇಳಿಕೆ ಆಗಿದೆ. 10 ಗ್ರಾಂ ಚಿನ್ನವು ₹ 45,207ರಂತೆ ಮಾರಾಟ ಆಗಿದೆ.




ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವ ಬೆಲೆ ಇಳಿಕೆಯು ದೇಶಿ ಮಾರುಕಟ್ಟೆಯಲ್ಲಿಯೂ ಪ್ರತಿಫಲಿಸಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ. ಗುರುವಾರದ ವಹಿವಾಟಿನ ಕೊನೆಯಲ್ಲಿ ಚಿನ್ನದ ಬೆಲೆಯು ₹ 46,337 ಆಗಿತ್ತು.

ಶುಕ್ರವಾರ ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 708ರಷ್ಟು ಇಳಿಕೆ ಕಂಡಿದೆ. ಕೆ.ಜಿ. ಬೆಳ್ಳಿಯು ₹ 60,183ರಂತೆ ಮಾರಾಟ ಆಗಿದೆ.

ಅಪರೂಪದ ಇರುವೆಗೆ ಗಣೇಶಯ್ಯ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕ ಟ್ರಸ್ಟ್ ಫಾರ್ ರೀಸರ್ಚ್ ಇನ್ ಇಕಾಲಜಿ ಆ್ಯಂಡ್ ಎನ್ವಿರಾನ್‌ಮೆಂಟ್ (ಎಟಿಆರ್‌ಇಇ) ಸಂಶೋಧನಾ ಕೇಂದ್ರದ ಕೀಟಶಾಸ್ತ್ರಜ್ಞರು, ಪೂರ್ವ ಹಿಮಾಲಯದಲ್ಲಿ ಪತ್ತೆ ಮಾಡಿರುವ ಅಪರೂಪದ ಇರುವೆಯೊಂದಕ್ಕೆ ಕೀಟತಜ್ಞ ಹಾಗೂ ಸಾಹಿತಿ ಪ್ರೊ.ಕೆ.ಎನ್.ಗಣೇಶಯ್ಯ ಅವರ ಹೆಸರಿಡಲಾಗಿದೆ.



ಕೆ.ಎನ್‌. ಗಣೇಶಯ್ಯ

ಕೀಟಶಾಸ್ತ್ರಜ್ಞರಾದ ಪ್ರಿಯದರ್ಶನನ್ ಧರ್ಮರಾಜನ್, ಅಶ್ವಜ್ ಪುನ್ನಥ್ ಸಹನಶ್ರೀ, ಅನಿರುದ್ಧ ಮರಾಠೆ ಹಾಗೂ ಶ್ರೀಲಂಕಾದ ಡಬ್ಲ್ಯು.ಎಸ್.ಉದಯಕಾಂತ್ ಅವರಿದ್ದ ಸಂಶೋಧನಾ ತಂಡವು ಜಿನಸ್ ಪ್ಯಾರಸಿಸ್ಸಿಯಾ ಮತ್ತು ಸಿಸ್ಸಿಯಾ ಪ್ರಭೇದಕ್ಕೆ ಸೇರಿದ ಎರಡು ಅಪರೂಪದ ತಳಿಯ ಇರುವೆಗಳನ್ನು ಈಗಲ್‌ನೆಸ್ಟ್ ವನ್ಯಜೀವಿ ಅಭಯಾರಣ್ಯದಲ್ಲಿ ಪತ್ತೆ ಹಚ್ಚಿದೆ.



ಹೊಸ ಪ್ರಭೇದದ ಇರುವೆಗಳು

ಎಟಿಆರ್‌ಇಇ ಈ ವರ್ಷ ಬೆಳ್ಳಿ ಮಹೋತ್ಸವ ಆಚರಿಸುತ್ತಿದೆ. ಹೀಗಾಗಿ ಒಂದು ಇರುವೆಗೆ ಎಟಿಆರ್‌ಇಇ ಸ್ಥಾಪಕರಲ್ಲಿ ಒಬ್ಬರಾದ ಪರಿಸರ ವಿಜ್ಞಾನಿ ಹಾಗೂ ಚಿಂತಕರೂ ಆಗಿರುವ ಪ್ರೊ. ಕೆ.ಎನ್.ಗಣೇಶಯ್ಯ (ಪ್ಯಾರಸಿಸ್ಸಿಯಾ ಗಣೇಶಯ್ಯ) ಅವರ ಹೆಸರಿಡಲಾಗಿದೆ. ಮತ್ತೊಂದು ಇರುವೆಗೆ ಸಿಸ್ಸಿಯಾ ಇಂಡಿಕಾ ಎಂದು ನಾಮಕರಣ ಮಾಡಲಾಗಿದೆ.

‘ಪ್ಯಾರಸಿಸ್ಸಿಯಾ ಗಣೇಶಯ್ಯ ಹೆಸರಿನ ಸಣ್ಣ ಗಾತ್ರದ ಇರುವೆಯು ಹಳದಿ ಮಿಶ್ರಿತ ಕಂದು ಬಣ್ಣ ಹೊಂದಿದೆ. ಇದರ ಮೇಲ್ಮೈ ಮೈಕ್ರೊ ಪಂಕ್ಚರ್‌ಗಳಿಂದ ಕೂಡಿದೆ. ಈ ಇರುವೆ ಕೊಳೆತ ದಿಂಬಿಗಳು ಹಾಗೂ ಕಲ್ಲುಗಳ ಅಡಿಯಲ್ಲಿ ಗೂಡು ನಿರ್ಮಿಸುತ್ತದೆ. ಇದನ್ನು ಸಮುದ್ರಮಟ್ಟದಿಂದ 1,400 ಮೀಟರ್ ಎತ್ತರದ ಪ್ರದೇಶದಲ್ಲಿ ಸಂಗ್ರಹಿಸಲಾಗಿದೆ. ಸಿಸ್ಸಿಯಾ ಇಂಡಿಕಾ ಇರುವೆಯು ಕೆಂಪುಮಿಶ್ರಿತ ಕಂದು ಬಣ್ಣ ಒಳಗೊಂಡಿದೆ. ಇದರ ಮೇಲ್ಮೈ ಚಿಕ್ಕ ಚಿಕ್ಕ ಪಂಕ್ಚರ್‌ಗಳಿಂದ ಕೂಡಿದೆ. ಇದು ಕುರುಡು ಇರುವೆ. ಇದನ್ನು ಸಮುದ್ರಮಟ್ಟದಿಂದ 1,200 ಮೀಟರ್ ಎತ್ತರದಲ್ಲಿ ಸಂಗ್ರಹಿಸಲಾಗಿದೆ’ ಎಂದು ಸಂಶೋಧನಾ ತಂಡದ ಸದಸ್ಯರು ಹೇಳಿದ್ದಾರೆ.


ಹಿಂದುಳಿದ ವರ್ಗಗಳಿಗೆ ಮೇಯರ್ ಹುದ್ದೆ ಖಾಸಗಿ ಮಸೂದೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮೇಯರ್ ಮತ್ತು ಉಪ ಮೇಯರ್ ಹುದ್ದೆಗಳ ಮೀಸಲಾತಿ ನಿಗದಿಯಲ್ಲಿ ಹಿಂದುಳಿದ ವರ್ಗಗಳಿಗೂ ಅವಕಾಶ ಕಲ್ಪಿಸುವುದಕ್ಕೆ ಪೂರಕವಾಗಿ ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಖಾಸಗಿ ಮಸೂದೆ ಮಂಡಿಸಿದರು.

2020ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತ್ಯೇಕ ಕಾಯ್ದೆ ರೂಪಿಸಲಾಗಿತ್ತು. ಆಗ, ಹಿಂದುಳಿದ ವರ್ಗ–ಎ ಮತ್ತು ಹಿಂದುಳಿದ ವರ್ಗ–ಬಿ ಪದಗಳು ಮಸೂದೆಯಲ್ಲಿ ಬಿಟ್ಟುಹೋಗಿದ್ದವು. ಹೀಗಾಗಿ ಕಾಯ್ದೆಯಲ್ಲೂ ಈ ಅಂಶ ಇಲ್ಲ. ಈ ತಾಂತ್ರಿಕ ಲೋಪವನ್ನು ಸರಿಪಡಿಸಬೇಕೆಂದು ರಮೇಶ್ ಹೇಳಿದರು.

ರಾಜ್ಯದ ನಾಲ್ವರು ಸಾಧಕರಿಗೆ ಎನ್‌ಎಸ್‌ಎಸ್ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಡಾ.ಬಿ.ವಸಂತ ಶೆಟ್ಟಿ


ಸುರೇಶಪ್ಪ ಕೆ.ಸಜ್ಜನ


ಬಿಂದಿಯಾ ಶೆಟ್ಟಿ

ಬೆಂಗಳೂರು: ರಾಜ್ಯದ ನಾಲ್ವರು ಸಾಧಕರು 2019-20ನೇ ಸಾಲಿನ ರಾಷ್ಟ್ರೀಯ ಎನ್‌ಎಸ್‌ಎಸ್ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ರಾಷ್ಟ್ರೀಯ ಸೇವಾ ಯೋಜನೆ ಮೂಲಕ (ಎನ್‌ಎಸ್‌ಎಸ್) ಸಾಮಾಜಿಕ, ಶೈಕ್ಷಣಿಕ ಹಾಗೂ ಗ್ರಾಮೀಣಾಭಿವೃದ್ಧಿಗೆ ಶ್ರಮಿಸುವ ಸ್ವಯಂ ಸೇವಕರು ಹಾಗೂ ಸೇವಕರಿಗೆ ಕೇಂದ್ರ ಸರ್ಕಾರವು ಈ ಪುರಸ್ಕಾರ ನೀಡುತ್ತದೆ.

ರಾಜೀವ್‌ಗಾಂಧಿ ಆರೋಗ್ಯ ಮತ್ತು ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ.ಬಿ.ವಸಂತ ಶೆಟ್ಟಿ ಅವರಿಗೆ ವಿಶ್ವವಿದ್ಯಾಲಯ ಮಟ್ಟದ 'ಅತ್ಯುತ್ತಮ ಸಂಯೋಜನಾಧಿಕಾರಿ' ಗೌರವ ಲಭಿಸಿದೆ. ಧಾರವಾಡದ ಜೆಎಸ್‌ಎಸ್ ಬನಶಂಕರಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಸುರೇಶಪ್ಪ ಕೆ.ಸಜ್ಜನ ಅವರು ಕಾಲೇಜು ಮಟ್ಟದ 'ಅತ್ಯುತ್ತಮ ಕಾರ್ಯಕ್ರಮ ಅಧಿಕಾರಿ' ಪುರಸ್ಕಾರ ಪಡೆದಿದ್ದಾರೆ.

ಬೆಂಗಳೂರಿನ ಕೆ.ಎಸ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿರೀಶ್ ಗೋವರ್ಧನ್ ಅವರಿಗೆ 'ಅತ್ಯುತ್ತಮ ಸ್ವಯಂ ಸೇವಕ' ಹಾಗೂ ದಕ್ಷಿಣ ಕನ್ನಡದ ಸುರತ್ಕಲ್‌ನ ಗೋವಿಂದದಾಸ ಕಾಲೇಜಿನ ಬಿಂದಿಯಾ ಶೆಟ್ಟಿಯವರಿಗೆ 'ಅತ್ಯುತ್ತಮ ಸ್ವಯಂ ಸೇವಕ' ಪ್ರಶಸ್ತಿಗಳು ಒಲಿದಿವೆ.

ಇದೇ 24ರಂದು ರಾಷ್ಟ್ರಪತಿ ಭವನದಲ್ಲಿ ನಡೆಯುವ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ನಿಧನ ವಾರ್ತೆ

ಮೃದಂಗ ವಿದ್ವಾನ್ ಎಂ.ಆರ್.ಸಾಯಿನಾಥ್



ಮಂಗಳೂರು: ಮೃದಂಗ ವಿದ್ವಾನ್ ಎಂ.ಆರ್. ಸಾಯಿನಾಥ್ (66) ಹೃದಯಾಘಾತದಿಂದ ಶುಕ್ರವಾರ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ ಪುತ್ರಿಯರಾದ ಎಂ.ಎಸ್. ಲಾವಣ್ಯ ಹಾಗೂ ಎಂ.ಎಸ್. ಸುಬ್ಬಲಕ್ಷ್ಮಿ ಮತ್ತು ಪುತ್ರ ಎಂ.ಎಸ್. ಸುಧೀಂದ್ರ ಇದ್ದಾರೆ. ಈ ಮೂವರೂ ಸ್ಯಾಕ್ಸೊಫೋನ್ ಕಲಾವಿದರು.

ಮೈಸೂರು ಅರಮನೆಯ ಆಸ್ಥಾನ ವಿದ್ವಾನ್ ಆಗಿದ್ದ ಎಂ.ಆರ್. ರಾಜಪ್ಪ ಮತ್ತು ಸರೋಜಮ್ಮ ದಂಪತಿ ಪುತ್ರ ಸಾಯಿನಾಥ್, ತಂದೆಯಿಂದಲೇ ಮೃದಂಗ ವಾದನದ ಪ್ರಾಥಮಿಕ ಪಾಠ ಕಲಿತವರು. 1984ರಲ್ಲಿ ಆಲ್ ಇಂಡಿಯಾ ರೇಡಿಯೊ ಮಂಗಳೂರಿನಲ್ಲಿ ಅವರು ಮೃದಂಗ ಕಲಾವಿದರಾಗಿ ನೇಮಕಗೊಂಡರು. ನಂತರ ಬೆಂಗಳೂರಿಗೆ ವರ್ಗಾವಣೆಗೊಂಡು, 'ಎ' ಗ್ರೇಡ್ ಕಲಾವಿದರಾಗಿ ಗುರುತಿಸಿಕೊಂಡರು. ಅವರು ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ಆಸ್ಥಾನ ವಿದ್ವಾನ್ ಆಗಿದ್ದರು.

ಸಾಯಿನಾಥ್ ಅವರು ಹಿರಿಯ ಕಲಾವಿದರ ಜೊತೆ ದೇಶ–ವಿದೇಶಗಳಲ್ಲಿ ಅನೇಕ ಸಂಗೀತ ಕಛೇರಿಗಳನ್ನು ನೀಡಿದ್ದರು. ಅವರ ಸಾಧನೆಗೆ 'ಲಯ ಕಲಾನಿಧಿ', ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿದ್ದವು.

ಹಂಪಿ ಸದಾಶಿವಯೋಗಿ ಶ್ರೀ



ಹೊಸಪೇಟೆ (ವಿಜಯನಗರ): ತಾಲ್ಲೂಕಿನ ಹಂಪಿ ಶಿವಾನಂದ ಯೋಗಾಶ್ರಮದ ಸದಾಶಿವಯೋಗಿ ಸ್ವಾಮೀಜಿ (89) ಶುಕ್ರವಾರ ಬೆಳಿಗ್ಗೆ 10ರ ಸುಮಾರಿಗೆ ನಿಧನರಾದರು.

ಶನಿವಾರ (ಸೆ.18) ಬೆಳಿಗ್ಗೆ 10ಕ್ಕೆ ಮಠದ ಆವರಣದಲ್ಲಿ ಶಿವಾನಂದರ ಸಮಾಧಿ ಪಕ್ಕದಲ್ಲಿ ಅವರ ಅಂತ್ಯಕ್ರಿಯೆ ನೆರವೇರಲಿದೆ.

ತುಮಕೂರು ತಾಲ್ಲೂಕಿನ ಗುಬ್ಬಿಯವರಾದ ಸ್ವಾಮೀಜಿ 16ನೇ ವಯಸ್ಸಿನಲ್ಲಿ ಮನೆ ತೊರೆದಿದ್ದರು. ಬಳಿಕ ಮುಂಬೈನ ಗಣೇಶಪುರಿಯ ಸಿದ್ಧರೊಬ್ಬರ ಪರಂಪರೆಯ ಬಾಬಾ ನಿತ್ಯಾನಂದ ಪರಮಹಂಸರಿಂದ ಸನ್ಯಾಸ ದೀಕ್ಷೆ ಪಡೆದು, ಹಂಪಿಗೆ ಬಂದು ನೆಲೆಸಿದರು.

ಕನ್ನಡ, ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹತ್ತು ಪುಸ್ತಕಗಳನ್ನು ಬರೆದಿದ್ದಾರೆ. ಮೂಢನಂಬಿಕೆ, ಕಂದಾಚಾರದ ವಿರುದ್ಧ ಜನರಲ್ಲಿ ಅರಿವು ಮೂಡಿಸುತ್ತಿದ್ದ ಅವರು, ವಿಗ್ರಹಾರಾಧನೆ ವಿರೋಧಿಸುತ್ತಿದ್ದರು.

ಮದುವೆ, ಜಾತ್ರೆ ಸೇರಿದಂತೆ ಶುಭ ಸಮಾರಂಭಗಳಿಗೆ ನಿರ್ಬಂಧ: ಹೊಲಗಳಲ್ಲಿಯೇ ಕೊಳೆತ ಉತ್ಪನ್ನ

ಹೂ, ಹಣ್ಣು ಬೆಳೆಗಾರರ ಮುದುಡಿದ ಬದುಕು

● ಡಿ.ಎಂ.ಕುರ್ಕೆ ಪ್ರಶಾಂತ್


ಬಾಗೇಪಲ್ಲಿ ತಾಲ್ಲೂಕಿನ ಆವುಲಮಂದೆ ರಸ್ತೆಯಲ್ಲಿರುವ ತನ್ನ ಹೊಲದಲ್ಲಿ ಬೆಳೆದಿದ್ದ ಹೂಕೋಸನ್ನು ರೈತ ಸೂರಪ್ಪರೆಡ್ಡಿ ಇತ್ತೀಚೆಗೆ ನಾಶಗೊಳಿಸಿದರು

ಚಿಕ್ಕಬಳ್ಳಾಪುರ: 'ಎರಡು ವರ್ಷವಾಯಿತು ನಮ್ಮ ಬದುಕು ಕಷ್ಟಕ್ಕೆ ಸಿಲುಕಿ. ಹಣ್ಣು, ಹಾಲು, ತರಕಾರಿ ಬೆಳೆಯನ್ನು ಕಡಿಮೆ ಮಾಡಿದೆವು. ಮನೆಯ ಖರ್ಚನ್ನು ಸಾಧ್ಯವಿದ್ದಷ್ಟು ತಗ್ಗಿಸಿದೆವು. ಅಲ್ಲಲ್ಲ ಉಳಿತಾಯದಲ್ಲಿಯೇ ಬದುಕು ನಡೆಸಿದೆವು. ಹೂ ಹೊಸಕಿದಂತೆ ಆಯಿತು ನಮ್ಮ ಬದುಕು. 'ಇಂದಿಗೂ ಕೋವಿಡ್ ಪೂರ್ವದಲ್ಲಿದ್ದ ಸಹಜ ಸ್ಥಿತಿ ಸಾಧ್ಯವಾಗಿಲ್ಲ'

ಇದು ಹೂ ಬೆಳೆಗಾರರಾದ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಸೂರೇನಹಳ್ಳಿಯ ರಮ್ಯಾ ಅವರ ನೋವಿನ ನುಡಿ.

ಹೂ, ಹಣ್ಣು, ತರಕಾರಿ ಬೆಳೆಗಾರರು, ಮಾರಾಟಗಾರರ ಹಾಗೂ ಈ ಉದ್ಯಮಗಳಿಗೆ ಪೂರಕವಾಗಿ ಕೆಲಸ ಮಾಡುತ್ತಿರುವವರ ಬದುಕನ್ನು ಕೋವಿಡ್ ಹೈರಾಣಾಗಿಸಿದೆ. ಕೋವಿಡ್ ತಂದ ಸಂಕಷ್ಟಗಳಿಂದ ಇಂದಿಗೂ ಅವರು ಹೊರಬರಲು ಸಾಧ್ಯವಾಗಿಲ್ಲ.

200 ಕಾಡದ ಹೂ ನಿಡಗಳ ಉತ್ಪನ್ನವೇ ರಮ್ಯಾ ಅವರ ಬದುಕಿಗೆ ಆಧಾರವಾಗಿತ್ತು. ಕೋವಿಡ್ ನಂತರ ಬೆಲೆ ಕುಸಿದು ಹಾಕಿದ ಬಂಡವಾಳ ಬದುಕಿನ ಕ್ರಮವನ್ನೇ ಕಸಿಯಿತು. ಆರ್ಥಿಕ ಸ್ಥಿತಿಯ ಏರುಪೇರು ರಾಜ್ಯದ ಹಲವು ಭಾಗಗಳ ಹೂ, ಹಣ್ಣು, ತರಕಾರಿ ಬೆಳೆಗಾರರು, ಮಾರಾಟಗಾರರ ಬದುಕಿನಲ್ಲಿಯೂ ಆಗಿವೆ.

ಬೆಳೆಗಾರರು, ಹೂ ಬಿಡಿಸುವವರು, ಹೂ ಕಟ್ಟುವವರು, ಸಗಟು ಮತ್ತು ಚಿಲ್ಲರೆ ಮಾರಾಟಗಾರರು, ಅಲಂಕಾರಿಕ ಪುಷ್ಪಗಳಿಂದ ಹೂಗುಚ್ಛ ಮಾಡುವವರು ಹೀಗೆ ಪುಷ್ಪೋದ್ಯಮಕ್ಕೆ ಆತುಕೊಂಡು ಬದುಕು ಸಾಗಿಸುತ್ತಿದ್ದ ಸಾವಿರಾರು ಕೋವಿಡ್‌ನಿಂದ ಕುಗ್ಗಿದ್ದಾರೆ. ಮೊದಲ ಅಲೆಯಲ್ಲಿ ಸಂಕಷ್ಟಕ್ಕೆ ಒಳಗಾದ ಹೂ, ಹಣ್ಣು, ತರಕಾರಿ ಬೆಳೆಗಾರರಿಗೆ ಸರ್ಕಾರ ಗರಿಷ್ಠ ಒಂದು ಹೆಕ್ಟೇರ್ ಮಿತಿಯಲ್ಲಿ ₹ 25 ಸಾವಿರ ಪರಿಹಾರ ನೀಡಿತು. ಎರಡನೇ ಅಲೆಯಲ್ಲಿ ಪರಿಹಾರ ₹ 10 ಸಾವಿರಕ್ಕೆ ಇಳಿಕೆ ಆಯಿತು. ಅದು, ಕೆಲವು ಬೆಳೆಗಾರರಿಗೆ ಈ ಹಣ ದಕ್ಕಿತು. ಆದರೆ ಹೂ ಕಟ್ಟುವವರು, ಬಿಡಿಸುವ ಕೂಲಿಕಾರರ ಪಾಡು?

ಹಣ್ಣು, ತರಕಾರಿ, ಹೂ ಉತ್ಪನ್ನಗಳನ್ನು ದೀರ್ಘಕಾಲದವರೆಗೆ ಸಂಗ್ರಹಿಸುವ ಗ್ರಾಮೀಣ ಭಾಗಗಳಲ್ಲಿ ವ್ಯವಸ್ಥೆಯೂ ಇಲ್ಲ. ಸಂಗ್ರಹ ಸಾಧ್ಯವೂ ಇಲ್ಲ. ಬೇಡಿಕೆ ಮತ್ತು ಬೆಲೆ ಇಲ್ಲದ ಕಾರಣ ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹೂವಿನ ಗಿಡಗಳನ್ನು ಕೊಳೆಯಲು ಬಿಟ್ಟರು. ಕಡ್ಡರಿಸಿ ಹಾಕಿದರು. ಕೋವಿಡ್ ಛಾಯೆಯ ಕಾರಣ ಲಾಭದ ಮಾತಿರಲಿ, ಹೂಡಿಕೆಯೂ ವಾಪಸ್ ಆಗದಷ್ಟು ಏರುಪೇರು ಜರುಗಿದವು. ಮಾರ್ಚ್‌ನಿಂದ


ಅರವಿಂದ್


ಮೆಹಬೂಬ್

ಬದುಕು ಬೀದಿಗೆ ತಂದ ಕೋವಿಡ್

ಆರಂಭವಾಗಿ ಜುಲೈವರೆಗಿನ ಗ್ರಾಮೀಣ ಭಾಗಗಳಲ್ಲಿ ಜಾತ್ರೆಗಳ ಸುಗ್ಗಿ. ವಿವಾಹ ಸೇರಿದಂತೆ ಶುಭ ಸಮಾರಂಭಗಳು ಹೆಚ್ಚು ಜರುಗುತ್ತವೆ. ಸಹಜವಾಗಿ ಹಣ್ಣು, ತರಕಾರಿ, ಹೂವಿಗೆ ಬೇಡಿಕೆ ಇರುತ್ತದೆ. ಆದರೆ, ಕೋವಿಡ್ ಕಾರಣ ಯಾರಿಗೂ ಶುಭವಾಗಲಿಲ್ಲ. ಹೋಟೆಲ್‌ಗಳು, ಅಂಗಡಿಗಳು ಸಹ ಬಂದ್ ಆಗಿದ್ದವು.

ಬೀದಿಗೆ ಬದುಕು: 'ಆಯಾ ಸೀಜನ್‌ಗೆ ಅನುಗುಣವಾಗಿ ಚಿಕ್ಕಬಳ್ಳಾಪುರ ಎಪಿಎಂಸಿಯಿಂದ ಸಗಟು ದರದಲ್ಲಿ ತರಕಾರಿ, ಹಣ್ಣು, ಹೂ ಖರೀದಿಸಿ ಮಾರುತ್ತಿದ್ದೆವು. ನಿತ್ಯ ಗರಿಷ್ಠ ₹ 500 ಆದಾಯ ದುಡಿಮೆ ಆಗುತ್ತಿತ್ತು. ಹಬ್ಬಗಳು, ದೇಗುಲಗಳಲ್ಲಿ ಪೂಜೆ ನಡೆಯುತ್ತಿದ್ದ ಸಂದರ್ಭದಲ್ಲಿ ಒಳ್ಳೆಯ ಆದಾಯವನ್ನೇ ನೋಡುತ್ತಿದ್ದೆವು' ಎಂದು ಚಿಕ್ಕಬಳ್ಳಾಪುರದ ಬೀದಿಬದಿ ವ್ಯಾಪಾರಿ ಅಸ್ಲಾಂ ಪಾಷ ತಿಳಿಸುತ್ತಾರೆ.

ಜೀವನಕ್ಕೆ ಸಮಸ್ಯೆ ಇರಲಿಲ್ಲ. ಆದರೆ, ಕೋವಿಡ್ ಬಂದ ನಂತರ ನಮ್ಮ ತಳ್ಳುವಗಾಡಿಗಳು ಮೂಲೆ ಸೇರಿದವು. ಜನರು ಹೊರಗೆ ಬಂದರೆ ಅಲ್ಲವೆ ನಮ್ಮ ವ್ಯಾಪಾರ ನಡೆಯುವುದು. ಬೀದಿ ವ್ಯಾಪಾರಿಗಳಾದ ನಾವು ನಿಜಕ್ಕೂ ಬೀದಿಗೇ ಬಿದ್ದಿದ್ದೇವೆ. ದಾನಿಗಳು ದಿನಸಿ ಕಿಟ್ ಕೊಟ್ಟ ಕಾರಣ ಬದುಕಿದೆವು ಎಂದು ಕಣ್ಣೀರಾಗುತ್ತಾರೆ.

'ಅಂಗಡಿಗಳೇ ಬಂದ್ ಆದವು'

ಕೋವಿಡ್ ತಂದ ನಷ್ಟದಿಂದ ರಾಜ್ಯದಲ್ಲಿ 20ಕ್ಕೂ ಹೆಚ್ಚು ಸಗಟು ಹಣ್ಣಿನ ವ್ಯಾಪಾರಿಗಳು ಅಂಗಡಿಗಳನ್ನೇ ಮುಚ್ಚಿದರು ಎಂದು ರಾಜ್ಯ ಸಗಟು ಹಣ್ಣು ಮಾರಾಟಗಾರರ ಸಂಘದ ಅಧ್ಯಕ್ಷ ಸೈಯದ್ ಮೆಹಬೂಬ್ ತಿಳಿಸಿದರು.

ಸಪೋಟ, ಸೀತಾಫಲ, ಮೂಸಂಬಿ ಮತ್ತಿತರ ಹಣ್ಣುಗಳನ್ನು ದೀರ್ಘಕಾಲ ಸಂಗ್ರಹಿಸಲು ಸಾಧ್ಯವಿಲ್ಲ. ಸರ್ಕಾರ ನಿಗದಿಗೊಳಿಸಿದ ಅವಧಿಯ ಒಳಗೆ ವ್ಯಾಪಾರ ನಡೆಸಬೇಕಾಗಿತ್ತು. ರಾಜ್ಯದಿಂದ ಪ್ರತಿವರ್ಷ ದೊಡ್ಡ ಪ್ರಮಾಣದಲ್ಲಿ ಹೊರರಾಜ್ಯಗಳಿಗೆ ಮಾವು ರವಾನೆ ಆಗುತ್ತದೆ. ಆದರೆ, ಕಳೆದ ಎರಡು ವರ್ಷಗಳಿಂದ ಮಾವು ರವಾನೆ ಕಡಿಮೆ ಆಯಿತು. ಬೆಳೆಗಾರರು, ಸಗಟು ಮತ್ತು ಚಿಲ್ಲರೆ ಮಾರಾಟಗಾರರು ನಷ್ಟಕ್ಕೆ ತುತ್ತಾದರು ಎಂದು ಹೇಳಿದರು.

ಸಾಲ ಕಟ್ಟಲು ಸಾಧ್ಯವಾಗುತ್ತಿಲ್ಲ

ಪುಷ್ಪ ಕೃಷಿಕರು ಬ್ಯಾಂಕ್‌ಗಳಿಂದ ಪಡೆದಿದ್ದ ಸಾಲ ಪಾವತಿಸಲು ಸಾಧ್ಯವಾಗುತ್ತಿಲ್ಲ. ಕೋವಿಡ್ ಕಾರಣದಿಂದ ಬಹಳಷ್ಟು ಬೆಳೆಗಾರರು ಬೀದಿಗೆ ಬಂದಿದ್ದಾರೆ. ಪುಷ್ಪ ಕೃಷಿ ವ್ಯವಹಾರ ನಡೆಸುತ್ತಿದ್ದವರಿಗೂ ಪೆಟ್ಟು ಬಿದ್ದಿದೆ ಎಂದು ದಕ್ಷಿಣ ಭಾರತ ಹೂ ಬೆಳೆಗಾರರ ಸಂಘದ ಅಧ್ಯಕ್ಷ ಅರವಿಂದ್ 'ಪ್ರಜಾವಾಣಿ'ಗೆ ತಿಳಿಸಿದರು. ಈಗ ಸ್ವಲ್ಪಮಟ್ಟಿಗೆ ಪುಷ್ಪೋದ್ಯಮ ಚೇತರಿಕೆ ಹಾದಿಯಲ್ಲಿ ಇದೆ. ಆದರೆ ಕೋವಿಡ್ ಪರಿಣಾಮಗಳು ಇಂದಿಗೂ ಕಾಡುತ್ತಿವೆ. ಸರ್ಕಾರ ಹೂ ಬೆಳೆಗಾರರ ಬೆಂಬಲಕ್ಕೆ ನಿಲ್ಲಬೇಕು ಎಂದರು.



ಎರಡು ಎಕರೆಯಲ್ಲಿ 600 ಗಿಡ ಸೀಬೆ ಬೆಳೆದಿದ್ದೆ. ಎರಡು ವರ್ಷ ಲಾಕ್‌ಡೌನ್ ಮಾಡಿದ್ದರಿಂದ ಹಣ್ಣು ಮಾರಾಟ ಸಾಧ್ಯವಾಗಲಿಲ್ಲ. ಲಕ್ಷಾಂತರ ರೂಪಾಯಿ ನಷ್ಟವಾಯಿತು.
ಶಶಿಧರ, ಹಲಗಲ್ಲಿ, ತಿರುಮಲಾಪುರ ತಾಲ್ಲೂಕು



ಕೋವಿಡ್ ಸಂದರ್ಭದಲ್ಲಿ ತರಕಾರಿ ಬೆಲೆ ಆಗೊಮ್ಮೆ ಈಗೊಮ್ಮೆ ಹೆಚ್ಚಳ ಕಂಡಿದೆ. ಆದರೆ, ಎರಡು ವರ್ಷಗಳಿಂದ ಬೆಲೆಯಲ್ಲಿ ಸ್ಥಿರತೆ ಇಲ್ಲ.
ಎಸ್.ಎಂ. ಮಲ್ಲೇಶ್, ಗೊಲ್ಲಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್*	124.80	116.96	10,919	11,014
ಹಾರಂಗಿ	2,859	2,858.39	2,765	3,079
ಕಬಿನಿ	2284.00	2,283.37	4,551	2,000
ಹೇಮಾವತಿ	2,922	2,916.98	5,425	5,372
ಲಿಂಗನಮಕ್ಕಿ	1,819	1,816.45	8,677	-
ಸೂಪಾ (ಮೀ)	564	557.08	6,301	2,730
ಮಾಣಿ	594	587.94	992	-
ತುಂಗಭದ್ರಾ	1,633	1,632.90	41,022	45,123
ಮಲಪ್ರಭಾ	2079.5	2,079.50	2,844	2,894
ಘಟಪ್ರಭಾ	2175	2,175.00	5,134	5,134
ಭದ್ರಾ	186	185.50	4,767	4,767
ಆಲಮಟ್ಟಿ (ಮೀ)	519.6	519.30	1,04,892	62,786
ನಾರಾಯಣಪುರ (ಮೀ)	492.25	492.12	40,000	46,000

* ನೆಲಮಟ್ಟದಿಂದ

ಮೂರು ಸಾವಿರ ಹೆಕ್ಟೇರ್ ಈರುಳ್ಳಿ ನಷ್ಟ; ಶೇಂಗಾ, ಸೇವಂತಿಗೂ ರೋಗ

70 ಸಾವಿರ ಹೆಕ್ಟೇರ್ ಮೆಕ್ಕೆಜೋಳ ನಾಶ

● ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಜಿಲ್ಲೆಯಲ್ಲಿ ಸೈನಿಕ ಹುಳುವಿನ ಬಾಧೆಗೆ 70 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಬೆಳೆದಿರುವ ಮೆಕ್ಕೆಜೋಳ ಬೆಳೆ ಹಾನಿಯಾದರೆ, ಕೊಳೆರೋಗದಿಂದ ಮೂರು ಸಾವಿರ ಹೆಕ್ಟೇರ್ ಈರುಳ್ಳಿ ನಷ್ಟವಾಗಿದೆ.

ಇತ್ತೀಚೆಗೆ ಸುರಿದ ಜಿಟಿಜಿಟಿ ಮಳೆಯಿಂದ ಜಿಲ್ಲೆಯ ಹೊಸಪೇಟೆ, ಹೂವಿನಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಕೊಟ್ಟೂರು ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ಈರುಳ್ಳಿಗೆ ಕೊಳೆ ರೋಗ ಆವರಿಸಿಕೊಂಡಿದೆ. ಕಾಳು ಕಟ್ಟುವ ಹಂತದಲ್ಲಿ ಮಳೆ ಕೈಕೊಟ್ಟಿದ್ದರಿಂದ ಹೂವಿನಹಡಗಲಿ, ಹರಪನಹಳ್ಳಿಯಲ್ಲಿ ರೈತರೇ ಮೆಕ್ಕೆಜೋಳ ನಾಶಪಡಿಸಿದ್ದಾರೆ.

ಹೊಸಪೇಟೆಯಲ್ಲಿ ಸತತ ಮಳೆಗೆ ಬಾಳೆ ಕೊಳೆಯುತ್ತಿದೆ. ಹರಪನಹಳ್ಳಿ, ಕೂಡ್ಲಿಗಿ, ಕೊಟ್ಟೂರಿನಲ್ಲಿ ಶೇಂಗಾ, ಸೇವಂತಿ ಹೂವಿನಲ್ಲೂ ರೋಗ ಕಾಣಿಸಿಕೊಂಡಿರುವುದರಿಂದ ರೈತರು ಬೆಳೆ ನಷ್ಟದ ಆತಂಕದಲ್ಲಿದ್ದಾರೆ. ಈಗಷ್ಟೇ ತೋಟಗಾರಿಕೆ ಇಲಾಖೆಯು ಬೆಳೆ ಹಾನಿಯ ಸಮೀಕ್ಷೆ ಆರಂಭಿಸಿದೆ. ಸಮೀಕ್ಷೆ ಪೂರ್ಣಗೊಂಡ ನಂತರ ನಷ್ಟದ ಪ್ರಮಾಣ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ.

'ಇನ್ನು ಎರಡು ವಾರ ಕಳೆದರೆ ಗುಣಮಟ್ಟದ ಈರುಳ್ಳಿ ಕೈಸೇರುತ್ತಿತ್ತು. ಆದರೆ, ಅಧಿಕ ತೇವಾಂಶದಿಂದ ರೋಗ ಬಂದಿದೆ. ಮೂರು ವರ್ಷದಿಂದ ಸತತವಾಗಿ ಈರುಳ್ಳಿಯಲ್ಲಿ ಕೊಳೆರೋಗ ಕಾಣಿಸಿಕೊಳ್ಳುತ್ತಿದೆ. ತೋಟಗಾರಿಕೆ ಇಲಾಖೆಯವರು ಯಾವುದೇ ಪರಿಹಾರ ಸೂಚಿಸಿಲ್ಲ' ಎಂದು ಹೂವಿನಹಡಗಲಿ ತಾಲ್ಲೂಕಿನ ಹಿರೇಕೊಳಚಿಯ ರೈತ ರಹೀಮ್ ಸಾಬ್ ಹೇಳಿದರು.

'ಸತತವಾಗಿ ಸುರಿದ ಮಳೆಗೆ ಗದ್ದೆಯಲ್ಲಿ ಬಾಳೆ ಕೊಳೆತು ಹೋಗಿದೆ. ಹಾಕಿದ ಬಂಡವಾಳವೂ ಬರುವುದಿಲ್ಲ. ಏನು ಮಾಡಬೇಕು ಎಂದು ದಿಕ್ಕೇ ತೋಚುತ್ತಿಲ್ಲ' ಎಂದು ಹೊಸಪೇಟೆ ತಾಲ್ಲೂಕಿನ ಹೊಸೂರಿನ ರೈತ ಹುಲುಗಪ್ಪ ಅಸಹಾಯಕರಾಗಿ ನುಡಿದರು.


ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಬಯಲು ತುಂಬರಗುದ್ದಿ ಗ್ರಾಮದ ರೈತ ಹಳ್ಳಿ ವೀರಣ್ಣ ಅವರು ಅವರ ಹೊಲದಲ್ಲಿ ಬೆಳೆದಿರುವ ಈರುಳ್ಳಿಗೆ ಕೊಳೆರೋಗ ಬಂದದ್ದರಿಂದ ಸಂಪೂರ್ಣ ಬೆಳೆ ತಿಪ್ಪೆಗೆ ಸುರಿದಿದ್ದಾರೆ

ಕೊಳೆರೋಗ, ಸೈನಿಕ ಹುಳುವಿನಿಂದ ಈರುಳ್ಳಿ, ಮೆಕ್ಕೆಜೋಳ ದೊಡ್ಡ ಪ್ರಮಾಣದಲ್ಲಿ ಹಾಳಾಗಿದೆ. ಸಮೀಕ್ಷೆ ಮುಗಿದ ನಂತರ ನಿಖರ ಅಂಕಿ ಅಂಶ ಗೊತ್ತಾಗಲಿದೆ.
ತಿಪ್ಪಾರೆಡ್ಡಿ, ಕೇಂದ್ರ ಸಹಾಯಕ, ತೋಟಗಾರಿಕೆ ಇಲಾಖೆ ಬಳ್ಳಾರಿ

ಹೋದ ವರ್ಷದ ಬೆಳೆ ಹಾನಿಯ ಪರಿಹಾರ ಇದುವರೆಗೆ ಕೈಸೇರಿಲ್ಲ. ಈ ವರ್ಷದ ನಷ್ಟಕ್ಕೆ ಪರಿಹಾರ ಸಿಗುವ ಭರವಸೆ ಇಲ್ಲ.
ರಹೀಮ್ ಸಾಬ್, ರೈತ, ಹಿರೇಕೊಳಚಿ ಗ್ರಾಮ

ಬೆಳೆ ಹಾನಿಯ ತಾಲ್ಲೂಕುವಾರು ವಿವರ (ಹೆಕ್ಟೇರ್‌ಗಳಲ್ಲಿ)

ತಾಲ್ಲೂಕು	ಮೆಕ್ಕೆಜೋಳ	ಈರುಳ್ಳಿ	ಶೇಂಗಾ
ಹೊಸಪೇಟೆ	-	20	-
ಹರಪನಹಳ್ಳಿ	27,369	700	200
ಹೂವಿನಹಡಗಲಿ	25,001	800	-
ಹಗರಿಬೊಮ್ಮನಹಳ್ಳಿ	600	900	-
ಕೂಡ್ಲಿಗಿ	10,000	400	7,500
ಕೊಟ್ಟೂರು	8,000	350	1,200

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಕ್ಷೇತ್ರಗಳ ಪುನರ್ ವಿಂಗಡಣೆಗೆ ದಾರಿ ಸುಗಮ

ಪಂಚಾಯತ್ ವ್ಯವಸ್ಥೆ ದುರ್ಬಲ: ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಪುನರ್‌ವಿಂಗಡಣೆ ಮತ್ತು ಮೀಸಲಾತಿ ನಿಗದಿಗೆ ಸೀಮಾ ನಿರ್ಣಯ ಆಯೋಗವನ್ನು ನೇಮಿಸುವ ಪ್ರಸ್ತಾವದ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ-2021' [illegible]

ಸಭಾತ್ಯಾಗದ ನಡುವೆಯೇ ಅಂಗೀಕಾರ

[illegible]

ಕೆ.ಎಸ್. ಈಶ್ವರಪ್ಪ ಅವರಿಗೆ ಮುಂದಿನ ದಿನಗಳಲ್ಲಿ ಒಳ್ಳೆಯ ಭವಿಷ್ಯವಿದೆ. ಅವರಿಗೆ ಕೆಟ್ಟ ಹೆಸರು ತರಲು ಈ ಮಸೂದೆ ರೂಪಿಸಲಾಗಿದೆ

ಎಸ್. ರವಿ, ಕಾಂಗ್ರೆಸ್ ಸದಸ್ಯ

[illegible]

'ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ಮುಂದೂಡುವ ಏಕೈಕ ಉದ್ದೇಶದಿಂದ ಈ ಮಸೂದೆ ತರಲಾಗಿದೆ' ಎಂದು ದೂರಿದ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು, ಈ ತಿದ್ದುಪಡಿಯು ಪಂಚಾಯತ್ ರಾಜ್ ಸಂಸ್ಥೆಗಳ [illegible] ಎಡೆಮಾಡಲಿದೆ' ಎಂದರು.

ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ, 'ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಅಧಿಕಾರವನ್ನು ಸರ್ಕಾರ ಪರೋಕ್ಷವಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲಿದೆ. ಚುನಾ[illegible] ಸರ್ಕಾರ ಕೈಹಾಕಿದೆ. ಇದು ಇತಿಹಾಸದ ಪುಟಗಳಲ್ಲಿ ಕಪ್ಪು ಚುಕ್ಕೆಯಾಗಿ ಉಳಿಯಲಿದೆ' ಎಂದು ವಾಗ್ದಾಳಿ ನಡೆಸಿದರು.

ಕತ್ತು ಹಿಸುಕುವ ಕೆಲಸ: ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಮಾತನಾಡಿ, 'ರಾಜ್ಯ ಸರ್ಕಾರವೇ ಚುನಾವಣಾ [illegible] ಗಿಡುವ ಹುನ್ನಾರ ಅಡಗಿದೆ. ಹೊಸ ಆಯೋಗದ ಮೂಲಕ ಕ್ಷೇತ್ರ ಪುನರ್ ವಿಂಗಡಣೆ ಆದರೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು ಹೆಚ್ಚು ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಕ್ಷೇತ್ರಗಳನ್ನು ಛಿದ್ರಗೊಳಿಸಿ ಅವರನ್ನು [illegible] ವೆಂಕಟೇಶ್, ಪಿ.ಆರ್. ರಮೇಶ್, ಜೆಡಿಎಸ್‌ನ ಅಪ್ಪಾಜಿಗೌಡ, ರಮೇಶ್ ಗೌಡ, ಎಸ್.ಎಲ್. ಭೋಜೇಗೌಡ ಮಸೂದೆ ವಿರೋಧಿಸಿ ಮಾತನಾಡಿದರು. ಬಿಜೆಪಿಯ ತೇಜಸ್ವಿನಿ ಗೌಡ ಮಸೂದೆ ಬೆಂಬಲಿಸಿ ಮಾತನಾಡಿದರು.

ಕೆ.ಟಿ. ಶ್ರೀಕಂಠೇಗೌಡರ ಪ್ರಶ್ನೆಗೆ ಸಾರಿಗೆ ಇಲಾಖೆ ಉತ್ತರ

ಮಹಿಳಾ ವಿಶ್ರಾಂತಿ ಗೃಹ: ಆರ್ಥಿಕ ತೊಡಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ಸ್ವಾಮ್ಯದ ನಾಲ್ಕು ಸಾರಿಗೆ ನಿಗಮಗಳ ವ್ಯಾಪ್ತಿಯ 140 ಬಸ್ ನಿಲ್ದಾಣಗಳಲ್ಲಿ ಮಹಿಳೆಯರ ವಿಶ್ರಾಂತಿ ಗೃಹ ನಿರ್ಮಾಣಕ್ಕೆ ಆರ್ಥಿಕ ತೊಡಕು ಎದುರಾಗಿದೆ ಎಂದು ಸಾರಿಗೆ ಇಲಾಖೆ ಹೇಳಿದೆ.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಅವರ ಪ್ರಶ್ನೆಗೆ ಶುಕ್ರವಾರ ಸಾರಿಗೆ ಸಚಿವರ ಪರವಾಗಿ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಉತ್ತರ ನೀಡಿದರು.

'ನಾಲ್ಕು ಸಾರಿಗೆ ನಿಗಮಗಳ ವ್ಯಾಪ್ತಿಯಲ್ಲಿ 547 ಬಸ್ ನಿಲ್ದಾಣಗಳಿವೆ. ಅವುಗಳಲ್ಲಿ 410 ಬಸ್ ನಿಲ್ದಾಣಗಳಲ್ಲಿ ಮಾತ್ರ ಮಹಿಳೆಯರ ವಿಶ್ರಾಂತಿ ಗೃಹ ಇದೆ' ಎಂದರು.

'ಸಾರಿಗೆ ನಿಗಮಗಳು ನಷ್ಟಕ್ಕೆ ಸಿಲುಕಿವೆ. ಆರ್ಥಿಕ ತೊಂದರೆಯ ಕಾರಣದಿಂದ ಯಾವುದೇ ಕಾಮಗಾರಿ ಕೈಗೊಳ್ಳುವ ಪರಿಸ್ಥಿತಿ ಇಲ್ಲ. ಹಣದ ಲಭ್ಯತೆ ಆಧರಿಸಿ ಮುಂದೆ ಕಾಮಗಾರಿ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಈ ಉತ್ತರಕ್ಕೆ ಹಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. 'ಮಹಿಳೆಯರಿಗೆ ಶೌಚಾಲಯ, ವಿಶ್ರಾಂತಿ ಗೃಹ ಸೌಲಭ್ಯ ಒದಗಿಸುವುದಕ್ಕೂ ಆರ್ಥಿಕ ಅಡಚಣೆ ಎನ್ನುವುದು ಸರಿಯಲ್ಲ' ಎಂದು ಬಿಜೆಪಿಯ ಭಾರತಿ ಶೆಟ್ಟಿ ಹೇಳಿದರು.

ಆನ್‌ಲೈನ್ ಜೂಜು ನಿಷೇಧಕ್ಕೆ ಮಸೂದೆ



ಆರಗ ಜ್ಞಾನೇಂದ್ರ

ಬೆಂಗಳೂರು: ರಾಜ್ಯದಲ್ಲಿ ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್ ನಿಷೇಧಿಸುವ ಪ್ರತಿಬಂಧಕ ಕಾಯ್ದೆಯ ಮಸೂದೆಯನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಿದರು.


ಆನ್‌ಲೈನ್ ಜೂಜು ನಿಷೇಧದ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ. ಈ ಮಸೂದೆಯು ಲಾಟರಿ, ಕುದುರೆ ರೇಸ್‌ಗಳಿಗೆ ಅನ್ವಯವಾಗುವುದಿಲ್ಲ. ಮೊಬೈಲ್, ಕಂಪ್ಯೂಟರ್ ಮತ್ತಿತರ ಆನ್‌ಲೈನ್ ಜೂಜಾಟ ನಡೆಸುವುದು ಮತ್ತು ಬಾಜಿ ಕಟ್ಟುವುದಕ್ಕೆ ಮಾತ್ರ ಅನ್ವಯವಾಗಲಿದೆ ಎಂದರು.

ಕಾನೂನು ಉಲ್ಲಂಘಿಸಿ ಆನ್‌ಲೈನ್ ಜೂಜಿನಲ್ಲಿ ತೊಡಗುವವರು, ಅವರಿಗೆ ಸಹಾಯ ಮಾಡುವವರು ಮತ್ತು ಆಶ್ರಯ ನೀಡುವವರಿಗೆ 6 ತಿಂಗಳ ಜೈಲು ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಲಾಗುವುದು ಎಂದು ಹೇಳಿದರು.

ಸೆಷನ್ ನ್ಯಾಯಾಲಯದ ವಿಚಾರಣೆ ಆನ್‌ಲೈನ್: ಸೆಷನ್ಸ್ ನ್ಯಾಯಾಲಯದ ವಿಚಾರಣೆಗಳನ್ನೂ ಆನ್‌ಲೈನ್ ಮೂಲಕ ನಡೆಸಲು ಸಹಾಯಕವಾಗುವ 'ದಂಡ ಪ್ರಕ್ರಿಯಾ ಸಂಹಿತೆ ಮಸೂದೆ'ಗೆ ವಿಧಾನಸಭೆ ಒಪ್ಪಿಗೆ ನೀಡಿತು.

ಶಿಕ್ಷೆಗೊಳಗಾದ ಅಪರಾಧಿಗಳ ಮಾದರಿ ಸಂಗ್ರಹ: ನ್ಯಾಯಾಲಯದಿಂದ ಶಿಕ್ಷೆಗೆ ಒಳಪಟ್ಟ ಅಪರಾಧಿಗಳ ಬೆರಳಚ್ಚು, ಪಾದದ ಗುರುತಿನ ಜತೆಗೆ ರಕ್ತ, ಡಿಎನ್‌ಎ, ಧ್ವನಿ ಮಾದರಿ ಮತ್ತು ಕಣ್ಣಿನ ಪಾಪೆಯನ್ನು ಸಂಗ್ರಹಿಸಲಾಗುತ್ತದೆ. ಆದರೆ, ವಿಚಾರಣಾಧೀನ ಕೈದಿಗಳಿಂದ ಇವುಗಳನ್ನು ಪಡೆಯುವುದಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ವಿಧಾನಸಭೆಗೆ ತಿಳಿಸಿದರು.

ಬಂದಿಗಳ ಗುರುತಿಸುವಿಕೆ ತಿದ್ದುಪಡಿ ಮಸೂದೆಯ ಕುರಿತು ಸ್ಪಷ್ಟನೆ ನೀಡಿದ ಅವರು, ಶಿಕ್ಷೆಗೆ ಒಳಪಡದ ವಿಚಾರಣಾಧೀನ ಕೈದಿಗಳಿಂದ ಮಾದರಿ ಸಂಗ್ರಹಿಸುವುದಿಲ್ಲ ಎಂದರು.



ಸುಭಾಷಿತ
ಯಾರನ್ನಾದರೂ ಸೋಲಿಸುವುದು ಅತ್ಯಂತ ಸುಲಭ. ಆದರೆ, ಯಾರ ಮನಸ್ಸನ್ನಾದರೂ ಗೆಲ್ಲುವುದು ಬಹಳ ಕಷ್ಟ.
-ಎ.ಪಿ.ಜೆ. ಅಬ್ದುಲ್ ಕಲಾಂ

ದೂರಸಂಪರ್ಕ ವಲಯಕ್ಕೆ ನೆರವು ಅನಿವಾರ್ಯ, ಸ್ವಾಗತಾರ್ಹ

ಕೇಂದ್ರ ಸರ್ಕಾರವು ದೇಶದ ದೂರಸಂಪರ್ಕ ವಲಯಕ್ಕೆ ಸಂಬಂಧಿಸಿದಂತೆ ಕೆಲವು ಸುಧಾರಣಾ ಕ್ರಮಗಳನ್ನು, ನೆರವು ಕ್ರಮಗಳನ್ನು ಘೋಷಿಸಿದೆ. ತೀವ್ರ ಸ್ವರೂಪದ ಹಣಕಾಸಿನ ಬಿಕ್ಕಟ್ಟನ್ನು ಎದುರಿಸುತ್ತಿರುವ ದೂರಸಂಪರ್ಕ ವಲಯದ ಚೇತರಿಕೆಗೆ ಈ ಕ್ರಮಗಳು ಪೂರಕವಾಗಬಹುದು. ದೇಶದ ಕೆಲವು ದೂರಸಂಪರ್ಕ ಕಂಪನಿಗಳು ಸಾಲದ ಸುಳಿಗೆ ಸಿಲುಕಿವೆ, ನಷ್ಟದಲ್ಲಿ ನಡೆಯುತ್ತಿವೆ. ದೇಶದಲ್ಲಿ ಈ ಹಿಂದೆ ಹತ್ತಕ್ಕೂ ಹೆಚ್ಚು ಖಾಸಗಿ ಕಂಪನಿಗಳು ದೂರಸಂಪರ್ಕ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದವು. ಈಗ ಮೊಬೈಲ್ ಸೇವೆಗಳನ್ನು ನೀಡುತ್ತಿರುವ ಖಾಸಗಿ ಕಂಪನಿಗಳ ಸಂಖ್ಯೆಯು ಮೂರಕ್ಕೆ ಇಳಿದಿದೆ. ಕಂಪನಿಗಳ ದಿವಾಳಿ, ಸ್ಥಗಿತ, ವಿಲೀನ, ಮಾರಾಟವನ್ನು ದೂರಸಂಪರ್ಕ ವಲಯವು ಈಚಿನ ವರ್ಷಗಳಲ್ಲಿ ಕಂಡಿದೆ. ಇಡೀ ಉದ್ಯಮ ವಲಯ ಅನುಭವಿಸುತ್ತಿರುವ ಹಣಕಾಸಿನ ಒತ್ತಡವನ್ನು ಇವು ಹೇಳುತ್ತವೆ. ಕೆಲವು ವರ್ಷಗಳ ಹಿಂದೆ ದೂರಸಂಪರ್ಕ ವಲಯದಲ್ಲಿ ದೈತ್ಯ ಉದ್ದಿಮೆಯೊಂದು ಹೂಡಿಕೆ ಮಾಡಿದ ಬಳಿಕ, ತೀವ್ರ ದರಸಮರ ಶುರುವಾಯಿತು. ಇದರಿಂದಾಗಿ ಗ್ರಾಹಕರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಇಂಟರ್ನೆಟ್ ಸಂಪರ್ಕ ಹಾಗೂ ಧ್ವನಿ ಕರೆಗಳ ಸೌಲಭ್ಯ ದೊರೆಯಿತು. ಆದರೆ, ಕಂಪನಿಗಳು ಹಣಕಾಸಿನ ಸಂಕಷ್ಟಕ್ಕೆ ಸಿಲುಕಿದವು. ಈಗ ಸೇವೆ ಒದಗಿಸುತ್ತಿರುವ ಖಾಸಗಿ ಕಂಪನಿಗಳ ಪೈಕಿ ಒಂದಾಗಿರುವ ವೊಡಾಫೋನ್ ಐಡಿಯಾ ಲಿಮಿಟೆಡ್ ಕಂಪನಿಯು ನಷ್ಟದಲ್ಲಿ ಇದೆ, ಸಾಲದ ಸುಳಿಗೆ ಸಿಲುಕಿದೆ. ಸರ್ಕಾರದ ನೆರವು ಸಿಗದಿದ್ದರೆ ಈ ಕಂಪನಿಯು ಇನ್ನಷ್ಟು ಸಂಕಷ್ಟಕ್ಕೆ ಸಿಲುಕುತ್ತಿತ್ತು. ಹಾಗಾಗಿ ಈಗ ಸರ್ಕಾರ ಪ್ರಕಟಿಸಿರುವ ಕ್ರಮಗಳ ಅತಿದೊಡ್ಡ ಪ್ರಯೋಜನ ಈ ಕಂಪನಿಗೆ ದಕ್ಕಬಹುದು. ಸಮಸ್ಯೆಯ ಕೇಂದ್ರಬಿಂದು ಆಗಿದ್ದ ಹೊಂದಾಣಿಕೆ ಮಾಡಿದ ನಿವ್ವಳ ಆದಾಯದ (ಎಜಿಆರ್) ವ್ಯಾಖ್ಯಾನವನ್ನು ಕೇಂದ್ರವು ಬದಲಾಯಿಸಿದೆ. ದೂರಸಂಪರ್ಕ ಸೇವೆಗಳು ಅಲ್ಲದೆ, ಇತರ ಸೇವೆಗಳ ಮೂಲಕ ಬರುವ ಆದಾಯವನ್ನು ಎಜಿಆರ್ ವ್ಯಾಪ್ತಿಗೆ ತರಬಾರದು ಎಂದು ಕಂಪನಿಗಳು ಹಲವು ಬಾರಿ ಕೋರಿದ್ದವು. ಅಲ್ಲದೆ, ಇದುವರೆಗಿನ ಎಜಿಆರ್ ಬಾಕಿ ಪಾವತಿಗೆ ನಾಲ್ಕು ವರ್ಷಗಳ ಕಾಲಾವಕಾಶ ನೀಡುವ ತೀರ್ಮಾನವನ್ನೂ ಕೇಂದ್ರವು ಪ್ರಕಟಿಸಿದೆ. ಇದು ಕಂಪನಿಗಳಲ್ಲಿನ ನಗದು ಹರಿವಿನ ಸಮಸ್ಯೆಯನ್ನು ತುಸು ನಿವಾರಿಸಬಹುದು. ಲಭ್ಯ ಬಂಡವಾಳವನ್ನು ಕಂಪನಿಗಳು ಮೂಲಸೌಕರ್ಯ ಹೆಚ್ಚಿಸಲು ಬಳಸಿಕೊಳ್ಳಬಹುದು.



ದೂರಸಂಪರ್ಕ ಉದ್ಯಮ ವಲಯವು ಈಗ ಸರ್ಕಾರದ ನೆರವು ಬೇಕೇಬೇಕು ಎಂಬ ಸ್ಥಿತಿಗೆ ತಲುಪಿದ್ದು ಏಕೆ ಎಂಬುದರ ಬಗ್ಗೆಯೂ ಈ ಸಂದರ್ಭದಲ್ಲಿ ಅವಲೋಕನ ನಡೆಸಬಹುದು

ಎಜಿಆರ್ ವಿಚಾರದಲ್ಲಿ ಈಗ ಕೈಗೊಂಡಿರುವ ತೀರ್ಮಾನದ ಕಾರಣದಿಂದಾಗಿ, ಕೇಂದ್ರದ ಪಾಲಿಗೆ ತಕ್ಷಣಕ್ಕೆ ಬರಬಹುದಾಗಿದ್ದ ವರಮಾನವು ಕಡಿಮೆ ಆಗುವ ಸಾಧ್ಯತೆ ಇದೆ. ಆದರೆ ಎಜಿಆರ್ ವ್ಯಾಖ್ಯಾನ ಬದಲಿಸದೆ, ಹೆಚ್ಚುವರಿ ಕಾಲಾವಕಾಶವನ್ನೂ ಕೊಡದೆ ಇದ್ದರೆ, ಹಿಂಬಾಕಿ ಹಣ ಪಾವತಿ ಮಾಡಲಾಗದೆ ಕಂಪನಿಗಳು ಕುಸಿದುಬೀಳುವ ಅಪಾಯವೂ ಇತ್ತು. ಹೀಗಾಗಿ, ಈಗ ಕೇಂದ್ರ ಕೈಗೊಂಡಿರುವ ತೀರ್ಮಾನವು ಅನಿವಾರ್ಯವೂ ಹೌದು ಸ್ವಾಗತಾರ್ಹವೂ ಹೌದು. ನಾಲ್ಕು ವರ್ಷಗಳ ಕಾಲಾವಕಾಶ ಪೂರ್ಣಗೊಂಡ ನಂತರದಲ್ಲಿಯೂ ಎಜಿಆರ್ ಬಾಕಿ ಉಳಿದುಕೊಂಡಿದ್ದರೆ, ಬಾಕಿ ಮೊತ್ತವನ್ನು ಷೇರುಗಳಾಗಿ ಪರಿವರ್ತನೆ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಬಹುದು. ದೇಶದ ದೂರಸಂಪರ್ಕ ವಲಯದಲ್ಲಿ ಶೇಕಡ 100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ (ಎಫ್‌ಡಿಐ) ಕೂಡ ಕೇಂದ್ರವು ಒಪ್ಪಿಗೆ ನೀಡಿದೆ. ಈ ಹೂಡಿಕೆಗೆ ಕಂಪನಿಗಳು ಪೂರ್ವಾನುಮತಿ ಪಡೆಯುವ ಅಗತ್ಯ ಇರುವುದಿಲ್ಲ. ಇದರಿಂದಾಗಿ ಕಂಪನಿಗಳಿಗೆ ಹೊಸ ಹೂಡಿಕೆದಾರರನ್ನು ಆಕರ್ಷಿಸಲು ಸಾಧ್ಯವಾಗುತ್ತದೆ. ದೂರಸಂಪರ್ಕ ಉದ್ಯಮ ವಲಯಕ್ಕೆ ನೆರವಾಗುವ ಗಂಭೀರ ಪ್ರಯತ್ನ ತನ್ನದು ಎಂಬುದನ್ನು ಕೇಂದ್ರವು ಈ ಎಲ್ಲ ಕ್ರಮಗಳ ಮೂಲಕ ಸ್ಪಷ್ಟವಾಗಿ ತೋರಿಸಿದೆ. ಈ ವಲಯಕ್ಕೆ ಬ್ಯಾಂಕ್‌ಗಳಿಂದ ಕೋಟ್ಯಂತರ ರೂಪಾಯಿ ಸಾಲ ನೀಡಲಾಗಿದೆ. ಕಂಪನಿಗಳು ನಷ್ಟದ ಸುಳಿಗೆ ಸಿಲುಕಿದಾಗ ಅದರ ಪರಿಣಾಮವು ಬ್ಯಾಂಕ್‌ಗಳ ಮೇಲೆ ನೇರವಾಗಿ ಆಗುತ್ತದೆ. ಕೇಂದ್ರದ ನೆರವು ಪರೋಕ್ಷವಾಗಿ ದೇಶದ ಹಲವು ಬ್ಯಾಂಕ್‌ಗಳಿಗೆ ಸಮಾಧಾನ ತಂದಿರಬಹುದು. ಆ ಬ್ಯಾಂಕ್‌ಗಳು ಹಾಗೂ ದೂರಸಂಪರ್ಕ ಕಂಪನಿಗಳಲ್ಲಿನ ಹೂಡಿಕೆದಾರರಲ್ಲಿಯೂ ಸಮಾಧಾನ ಮೂಡಿಸಿರಬಹುದು.

ದೂರಸಂಪರ್ಕ ಉದ್ಯಮ ವಲಯವು ಇಂದು ಸರ್ಕಾರದ ನೆರವು ಬೇಕೇಬೇಕು ಎಂಬ ಸ್ಥಿತಿಗೆ ತಲುಪಿದ್ದು ಏಕೆ ಎಂಬುದರ ಬಗ್ಗೆಯೂ ಈ ಸಂದರ್ಭದಲ್ಲಿ ಅವಲೋಕನ ನಡೆಸಬಹುದು. ಅತಿಯಾದ ದರ ಸಮರದ ಕಾರಣದಿಂದಾಗಿ ಕಂಪನಿಗಳು ಇಂದು ನಷ್ಟ ಅನುಭವಿಸುತ್ತಿವೆ ಅಥವಾ ಬಹಳ ಕಡಿಮೆ ಪ್ರಮಾಣದ ಲಾಭ ಕಾಣುತ್ತಿವೆ. ದರ ಸಮರದಿಂದಾಗಿ ಆರಂಭದಲ್ಲಿ ಗ್ರಾಹಕರಿಗೆ ಒಳ್ಳೆಯದಾಗುವಂತೆ ಕಂಡರೂ, ದೀರ್ಘಾವಧಿಯಲ್ಲಿ ನಷ್ಟವೇ ಹೆಚ್ಚು. ಕಂಪನಿಗಳಿಗೆ ಹೊಸ ತಂತ್ರಜ್ಞಾನದ ಮೇಲೆ ಹೆಚ್ಚುವರಿ ಹೂಡಿಕೆ ಮಾಡಲು ಆಗುವುದಿಲ್ಲ, ಗ್ರಾಹಕರಿಗೆ ಹೊಸ ತಂತ್ರಜ್ಞಾನದ ಪ್ರಯೋಜನ ಸಿಗುವುದಿಲ್ಲ. ಕೋವಿಡ್ ಕಾರಣದಿಂದಾಗಿ ಕೆಲಸ ಮಾಡುವ, ಶಿಕ್ಷಣ ಪಡೆಯುವ ಬಗೆ ಬದಲಾಗಿದೆ. ಹಳ್ಳಿಗಳಲ್ಲಿಯೂ ಅತಿವೇಗದ ಇಂಟರ್ನೆಟ್ ಸಂಪರ್ಕ ಅಗತ್ಯವಿದೆ. ಆದರೆ ಅದಕ್ಕೆ ಅಗತ್ಯವಿರುವ ಮೂಲಸೌಕರ್ಯವನ್ನು ತ್ವರಿತಗತಿಯಲ್ಲಿ ಅಳವಡಿಸುವ ಸಾಮರ್ಥ್ಯ ಎಲ್ಲ ಕಂಪನಿಗಳಿಗೂ ಇದೆ ಎನ್ನಲಾಗದು. ಈ ಸ್ಥಿತಿಗೆ ಕಾರಣ ದರಸಮರ ಹಾಗೂ ಅದರಿಂದ ಸೃಷ್ಟಿಯಾದ ಹಣಕಾಸಿನ ಸಂಪನ್ಮೂಲದ ಕೊರತೆ. ಪ್ರತೀ ಗ್ರಾಹಕನಿಂದ ಬರುವ ಆದಾಯ (ಎಆರ್‌ಪಿಯು) ಕಡಿಮೆ ಇದೆ ಎಂದು ಕೆಲವು ಕಂಪನಿಗಳು ಹೇಳುತ್ತಿವೆ ಯಾದರೂ, ದರ ಹೆಚ್ಚಳದ ವಿಚಾರದಲ್ಲಿ ಧೈರ್ಯವಾಗಿ ಮುಂದಡಿ ಇರಿಸುತ್ತಿಲ್ಲ. ಕನಿಷ್ಠ ಸೇವಾ ಶುಲ್ಕವನ್ನು ನಿಗದಿ ಮಾಡಬೇಕು ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವನ್ನು (ಟ್ರಾಯ್) ಒತ್ತಾಯಿಸುವ ಬದಲು ಕಂಪನಿಗಳು ತಾವೇ ಮುಂದಾಗಿ ದರ ಸಮರಕ್ಕೆ ಅಂತ್ಯ ಹೇಳಬೇಕು. ಸೇವಾ ಗುಣಮಟ್ಟದ ಮೂಲಕ ಪೈಪೋಟಿ ನೀಡಬೇಕು; ಉಚಿತ ಕೊಡುಗೆಗಳ ಮೂಲಕ ಅಲ್ಲ. ಹಾಗೆ ಆದಾಗ ಮಾತ್ರ ಉದ್ದಿಮೆಯೂ ಬೆಳೆಯುತ್ತದೆ, ಜನರಿಗೆ ಒಳ್ಳೆಯ ಸೇವೆಗಳೂ ಸಿಗುತ್ತವೆ.

ದಿನದ ಟ್ವೀಟ್

ಕೊಂದು ಹಾಕಿತು...

ಪಾಕಿಸ್ತಾನದ ಕ್ರಿಕೆಟ್ ಅನ್ನೇ ನ್ಯೂಜಿಲೆಂಡ್ ಇವತ್ತು ಕೊಂದು ಹಾಕಿತು.
(ಪಾಕ್ ವಿರುದ್ಧದ ಕ್ರಿಕೆಟ್ ಸರಣಿಯಿಂದ ಹಿಂದೆ ಸರಿದ ನ್ಯೂಜಿಲೆಂಡ್ ನಡೆ ಕುರಿತ ಪ್ರತಿಕ್ರಿಯೆ)



ಶೋಯಬ್ ಅಖ್ತರ್, ಪಾಕಿಸ್ತಾನದ ಮಾಜಿ ಕ್ರಿಕೆಟಿಗ

ಕಿಡಿನುಡಿ

ರಾಜ್ಯದ ಕರಾವಳಿ ಭಾಗದಲ್ಲಿ ಮಾತ್ರವಲ್ಲ, ದೇಶದ ಹಲವು ಭಾಗಗಳಲ್ಲಿ ಮತಾಂತರ ನಡೆಯುತ್ತಿದೆ. ಹಿಂದೂಗಳ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು ಮತಾಂತರ ನಡೆಸಲಾಗುತ್ತಿದೆ. ಇದರ ತಡೆಗೆ ಕಾನೂನು ಕಠಿಣವಾಗಬೇಕು.



ಶೋಭಾ ಕರಂದ್ಲಾಜೆ, ಕೇಂದ್ರ ಕೃಷಿ ಸಚಿವೆ

25 ವರ್ಷಗಳ ಹಿಂದೆ

ಬುಧವಾರ, 18-9-1996

• **ಸಂದರ್ಶನ ಆರಂಭಿಸಲು ಸಿಇಟಿಗೆ ಅನುಮತಿ**

ಬೆಂಗಳೂರು, ಸೆ. 17– ವೃತ್ತಿಶಿಕ್ಷಣದ ಪ್ರವೇಶಕ್ಕೆ ವಿದ್ಯಾರ್ಥಿಗಳ ಸಂದರ್ಶನ (ಕೌನ್ಸೆಲಿಂಗ್) ಪ್ರಕ್ರಿಯೆ ಪ್ರಾರಂಭಿಸಲು ಹೈಕೋರ್ಟ್ ಇಂದು ತಾಂತ್ರಿಕ ಶಿಕ್ಷಣ ಇಲಾಖೆಯ ಸಾಮಾನ್ಯ ಪ್ರವೇಶ ಪರೀಕ್ಷಾ (ಸಿಇಟಿ) ವಿಭಾಗಕ್ಕೆ ಅನುಮತಿ ನೀಡಿತು.

ಸಂದರ್ಶನದ ವಿಳಂಬ ತಪ್ಪಿಸಲು, ಅಡ್ವೊಕೇಟ್ ಜನರಲ್ ಅವರ ಕೋರಿಕೆ ಮೇರೆಗೆ ಇಂದು ತಾತ್ಕಾಲಿಕ ಆಜ್ಞೆ ನೀಡಿದ ನ್ಯಾಯಮೂರ್ತಿ ಜಿ.ಸಿ.ಭರೂಕ ಅವರು, 'ಪ್ರವೇಶ ಸಂಖ್ಯೆಯು ಹೈಕೋರ್ಟಿನ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ' ಎಂದು ಸ್ಪಷ್ಟಪಡಿಸಿದರು.

ಖಾಸಗಿ ಕಾಲೇಜಿನವರು 1993ರಲ್ಲಿ ವೃತ್ತಿಶಿಕ್ಷಣ ಪ್ರವೇಶ ನೀಡಿರುವಲ್ಲಿ ಅನ್ಯಾಯ ನಡೆದಿದೆ ಎಂದು ಹೈಕೋರ್ಟಿಗೆ ಬರೆದ ಪತ್ರವನ್ನು ಹೈಕೋರ್ಟ್ ರಿಟ್ ಅರ್ಜಿಯಾಗಿ ಪರಿಗಣಿಸಿ ವಿಚಾರಣೆ ನಡೆಸುತ್ತಿದ್ದು, ವಾದ ಪ್ರತಿವಾದ ಮುಕ್ತಾಯವಾಗಿದೆ. ಗುರುವಾರ ಅಥವಾ ಶುಕ್ರವಾರ ತೀರ್ಪು ಹೊರಬೀಳಲಿದೆ.

50 ವರ್ಷಗಳ ಹಿಂದೆ

ಶನಿವಾರ, 18-9-1971

• **ತೆರಿಗೆ ಕಳ್ಳತನ ತಪ್ಪಿಸಲು ಸದ್ಯವೇ ಬಿಗಿ ಶಾಸನ**

ಮುಂಬೈ, ಸೆ. 17– ತೆರಿಗೆ ಕಳ್ಳತನವನ್ನು 'ಇನ್ನೂ ಹೆಚ್ಚು ತೀವ್ರ ಅಪರಾಧವನ್ನಾಗಿ' ಮಾಡಲು ತೆರಿಗೆಗೆ ಸಂಬಂಧಿಸಿದ ಶಾಸನಗಳನ್ನು ಮಾರ್ಪಡಿಸಲಾಗುವುದು ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವರಾದ ಕೆ.ಆರ್. ಗಣೇಶ್‌ರವರು ಇಲ್ಲಿ ಇಂದು ಹೇಳಿದರು.

ಪತ್ರಿಕಾ ಸಂದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತ, ಈಗ ರಾಷ್ಟ್ರದಲ್ಲಿ 500 ಕೋಟಿ ರೂಪಾಯಿ ತೆರಿಗೆ ಬಾಕಿ ಇದೆಯೆಂದೂ ಇದರಲ್ಲಿ ಮುಂಬೈನಿಂದಲೇ 200 ಕೋಟಿ ರೂ. ಬರಬೇಕಾಗಿದೆಯೆಂದೂ ನುಡಿದರು.

ಕಲ್ಕತ್ತ ಹೈಕೋರ್ಟಿನಲ್ಲಿ ತೆರಿಗೆ ಬಾಕಿಗೆ ಸಂಬಂಧಿಸಿದಂತೆ 2000 ರಿಟ್ ಅರ್ಜಿಗಳು ಬಾಕಿ ಇರುವುದನ್ನು ಅವರು ಪ್ರಸ್ತಾಪಿಸಿ, ಇವುಗಳಲ್ಲಿ 75 ಅರ್ಜಿಗಳು ಒಬ್ಬರಿಂದಲೇ ದಾಖಲು ಮಾಡಲ್ಪಟ್ಟಿವೆ ಎಂದೂ ನ್ಯಾಯಾಲಯಗಳೂ ತಮ್ಮ ಧೋರಣೆಯನ್ನು ಬದಲಾಯಿಸಬೇಕೆಂದೂ ನುಡಿದರು.

ವಾಯುಗುಣ ಪುನಶ್ಚೇತನ ಸಾಮರ್ಥ್ಯ ವೃದ್ಧಿ ಇಂದಿನ ತುರ್ತು ಅಗತ್ಯ

ವಾಯುಗುಣ ನಿರಾಶ್ರಿತರ ವಲಸೆ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ನಮ್ಮ ದೇಶದ ಅರಣ್ಯ ಸಂರಕ್ಷಣೆಯ ಅಹಿಂಸಾತ್ಮಕ ಚಳವಳಿಯ ಇತಿಹಾಸದಲ್ಲಿ ಎದ್ದು ಕಾಣುವ ಹೆಸರೆಂದರೆ ಚಿಪ್ಕೊ. ಉತ್ತರಾಖಂಡ ರಾಜ್ಯದ ಚಮೋಲಿ ಜಿಲ್ಲೆಯ 'ರೇನಿ' ಈ ಚಿಪ್ಕೊ ಚಳವಳಿಯಲ್ಲಿ ಮುಖ್ಯ ಪಾತ್ರ ವಹಿಸಿದ ಒಂದು ಹಳ್ಳಿ.

1974ರ ಮಾರ್ಚ್ 25ರಂದು, ಹಳ್ಳಿಯ ಸಮೀಪದ ಅರಣ್ಯದಲ್ಲಿ ಮರಗಳನ್ನು ಕಡಿಯಲೆಂದು ಗುತ್ತಿಗೆದಾರ ತನ್ನ ಸಿಬ್ಬಂದಿಯೊಂದಿಗೆ ಬಂದಾಗ, ಆ ಹಳ್ಳಿಯ ಮಹಿಳಾ ಮಂಗಳ ದಳದ ಮುಖ್ಯಸ್ಥೆ ಗೌರಾದೇವಿ, ಇಪ್ಪತ್ತೇಳು ಮಹಿಳಾ ಸದಸ್ಯರೊಂದಿಗೆ ಮರಗಳನ್ನು ತಬ್ಬಿ ನಿಲ್ಲುತ್ತಾಳೆ. ಯಾವ ಬೆದರಿಕೆಗೂ ಬಗ್ಗದೆ, ನಾಲ್ಕು ದಿನಗಳ ಕಾಲ ಹಗಲಿರುಳೂ ಸರದಿಯಲ್ಲಿ ಮರಗಳನ್ನು ಅಪ್ಪಿ ನಿಂತ ರೇನಿ ಹಳ್ಳಿಯ ಅನಕ್ಷರಸ್ಥ ಮಹಿಳೆಯರ ಅಹಿಂಸಾತ್ಮಕ ಪ್ರತಿಭಟನೆಯನ್ನು ಎದುರಿಸಲಾರದೇ, ಮರ ಕಡಿಯಲೆಂದು ಬಂದಿದ್ದ ತಂಡ ಸೋತು ಅಲ್ಲಿಂದ ಹೊರಡುತ್ತದೆ. ಈ ವಿನೂತನ ಯಶಸ್ವಿ ಪ್ರತಿಭಟನೆಯ ವಿವರಗಳು ಹಿಮಾಲಯದ ಹಳ್ಳಿ ಹಳ್ಳಿಗಳಿಗೆ ಹರಡಿ, ಅರಣ್ಯ ಸಂರಕ್ಷಣೆಯ ಪ್ರಬಲ ಶಕ್ತಿಯಾಗಿ ರೂಪುಗೊಳ್ಳುತ್ತವೆ.

ನಲವತ್ತೆಂಟು ವರ್ಷಗಳ ನಂತರ ಇದೇ ರೇನಿ ಹಳ್ಳಿಯ ಜನ ಮತ್ತೊಮ್ಮೆ ಸಂಘಟಿತರಾಗಿ ಹೊಸ ಹೋರಾಟಕ್ಕೆ ಸಿದ್ಧರಾಗಿದ್ದಾರೆ. ವಾಯುಗುಣ ಬದಲಾವಣೆಯಿಂದಾಗಿ ಮತ್ತೆ ಮತ್ತೆ ಸಂಭವಿಸುತ್ತಿರುವ ಮೇಘ ಸಿಡಿತ, ದಿಢೀರ್ ಪ್ರವಾಹ ಮುಂತಾದ ಪ್ರಾಕೃತಿಕ ಅವಘಡಗಳಿಂದ ತತ್ತರಿಸಿಹೋಗಿರುವ ಅವರು ತಮ್ಮೆಲ್ಲ ಮನೆಮಠಗಳನ್ನು ತೊರೆದು ಬೇರೆಡೆಗೆ ವಾಯುಗುಣ ವಲಸಿಗರಾಗಿ (ಕ್ಲೈಮೇಟ್ ಮೈಗ್ರೆಂಟ್ಸ್) ಹೊರಡಲು ತುದಿಗಾಲಿನಲ್ಲಿ ನಿಂತಿದ್ದಾರೆ. ತಮ್ಮ ಆರಾಧ್ಯದೈವ ಗೌರಾದೇವಿಯ ಪುತ್ಥಳಿಯನ್ನು ಜೋಪಾನವಾಗಿ ರೇನಿಯಿಂದ ಹೊರಗೆ ಜೋಶಿಮಠದ ಸುರಕ್ಷಿತ ಸ್ಥಾನಕ್ಕೆ ಸಾಗಿಸಿದ್ದಾರೆ. ಇಡೀ ಹಳ್ಳಿಯನ್ನು ಬೇರೊಂದು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಿ, ಹೊಸದಾಗಿ ಬದುಕನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕೆಂಬ ಸಮುದಾಯದ ಬೇಡಿಕೆಗೆ ತ್ವರಿತಗತಿಯಲ್ಲಿ ಸ್ಪಂದಿಸದ ಸರ್ಕಾರದ ವಿರುದ್ಧ ದನಿಯೆತ್ತಿದ್ದಾರೆ. ಉತ್ತರಾಖಂಡದ 421 ಹಳ್ಳಿಗಳ ಜನ ಇದೇ ರೀತಿ ಸ್ಥಳಾಂತರಕ್ಕಾಗಿ ಕಾದಿದ್ದಾರೆ.

ದೇಶ ಇಬ್ಭಾಗವಾದಾಗ, ಯುದ್ಧ ನಡೆದ ಸಂದರ್ಭಗಳಲ್ಲಿ ನೆಲೆ ಕಳೆದುಕೊಂಡ ನಿರಾಶ್ರಿತರು ಬೇರೆಡೆಗೆ ವಲಸೆ ಹೋಗುವ ಸಾವಿರಾರು ನಿದರ್ಶನಗಳು ಪ್ರಪಂಚದಾದ್ಯಂತ ನಮಗೆ ದೊರೆಯುತ್ತವೆ.

ಅಭಿವೃದ್ಧಿ ಯೋಜನೆಗಳೂ ಸ್ಥಳೀಯ ಸಮುದಾಯಗಳನ್ನು ಒಕ್ಕಲೆಬ್ಬಿಸಿ ಪರಿಸರ ನಿರಾಶ್ರಿತರ (ಎನ್‌ವೈರನ್‌ಮೆಂಟಲ್ ರೆಫ್ಯುಜೀಸ್) ಸಮಸ್ಯೆಗಳನ್ನು ಸೃಷ್ಟಿಸುವುದು ಹೊಸದೇನಲ್ಲ. ವಿಶ್ವಬ್ಯಾಂಕ್ ವರದಿಯಂತೆ, ದೇಶದಲ್ಲಿರುವ 3,600ಕ್ಕೂ ಹೆಚ್ಚಿನ ಬೃಹತ್ ಅಣೆಕಟ್ಟೆಗಳು 4 ಕೋಟಿ ಜನರ ಸ್ಥಳಾಂತರಕ್ಕೆ ಕಾರಣವಾಗಿವೆ. ಬೃಹತ್ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಎಂಜಿನಿಯರಿಂಗ್ ವಿವರಗಳು, ವಿದ್ಯುತ್ ಉತ್ಪಾದನೆ, ನೀರಾವರಿ ಸೌಲಭ್ಯಗಳು ಮುಖ್ಯವಾಗುತ್ತವೆಯೇ ವಿನಾ ಯೋಜನೆಯಿಂದ ಸ್ಥಳಾಂತರಗೊಳ್ಳುವ ಜನಸಮುದಾಯದ ಪುನರ್ವಸತಿಗೆ ಅದೇ ಮಟ್ಟದ ಆದ್ಯತೆ ದೊರೆಯುವುದಿಲ್ಲ. ಸಾರ್ವಜನಿಕವಾಗಿ ಲಭ್ಯವಿರುವ ಸರ್ಕಾರಿ ದಾಖಲೆಗಳಂತೆ, ಇದುವರೆವಿಗೂ ನೆಲೆ ಕಳೆದುಕೊಂಡು ಸ್ಥಳಾಂತರಗೊಂಡ ಸುಮಾರು 4 ಕೋಟಿ ಜನರಲ್ಲಿ ಸಂಪೂರ್ಣ ಪುನರ್ವಸತಿ ಸಾಧ್ಯವಾಗಿರುವುದು ಸುಮಾರು 1 ಕೋಟಿ ಜನರಿಗೆ ಮಾತ್ರ.

ಯುದ್ಧ ಮತ್ತು ಅಭಿವೃದ್ಧಿ ಯೋಜನೆಗಳಿಂದ ನಿರಾಶ್ರಿತರಾಗಿ ಸ್ಥಳಾಂತರಗೊಂಡು ವಲಸೆ ಹೋಗುವ ಜನರೊಂದಿಗೆ ಇದೀಗ ವಾಯುಗುಣ ಬದಲಾವಣೆ ತರುತ್ತಿರುವ ಸಮಸ್ಯೆಗಳೂ ಸೇರಿ, ವಾಯುಗುಣ ನಿರಾಶ್ರಿತರು ಮತ್ತು ವಲಸಿಗರ ಸಂಖ್ಯೆ ಏರುತ್ತಿದೆ.

ವಾಯುಗುಣ ಬದಲಾವಣೆಯ ನೇರ ಪರಿಣಾಮವಾಗಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿರುವ ಚಂಡಮಾರುತಗಳು, ಅತ್ಯಲ್ಪ ಕಾಲದಲ್ಲಿ ಅತಿ ಹೆಚ್ಚಿನ ಮಳೆ ಸುರಿಸುವ ಮೇಘಸಿಡಿತ, ದಿಢೀರ್ ಪ್ರವಾಹ, ಕಾಳ್ಗಿಚ್ಚು, ಭೂಸರಿತ, ಮಣ್ಣಿನಕುಸಿತ ಮುಂತಾದ ವಿದ್ಯಮಾನಗಳ ಜೊತೆಗೆ ಮರುಭೂಮೀಕರಣ, ಬರಗಾಲ, ಸಾಗರದ ನೀರಿನ ಮಟ್ಟ ಏರಿಕೆ ಮುಂತಾದವು ವರ್ಷ ವರ್ಷವೂ ಲಕ್ಷಾಂತರ ಜನರನ್ನು ಸ್ಥಳಾಂತರಗೊಳಿಸುತ್ತಿವೆ. ವಾಯುಗುಣಪ್ರೇರಿತ ಜನವಲಸೆಯ ಬಗ್ಗೆ ದೇಶದಲ್ಲಿ ಅಧಿಕೃತ ಅಂಕಿಅಂಶಗಳು ಲಭ್ಯವಿಲ್ಲದಿದ್ದರೂ ವರ್ಲ್ಡ್ ಎಕನಾಮಿಕ್ ಫೋರಂ, ವಿಶ್ವಬ್ಯಾಂಕ್, ಯುನಿಸೆಫ್ ಅಧ್ಯಯನ ವರದಿಗಳು ಸಮಸ್ಯೆಯ ತೀವ್ರತೆಯ ಮೇಲೆ ಬೆಳಕು ಚೆಲ್ಲುತ್ತವೆ.

2008- 2018ರ ಅವಧಿಯಲ್ಲಿ, ಬದಲಾಗುತ್ತಿರುವ ವಾಯುಗುಣದ ಪರಿಣಾಮವಾಗಿ ಸಂಭವಿಸಿದ ಅವಘಡಗಳಿಂದ ಪ್ರಪಂಚದಾದ್ಯಂತ 25.3 ಕೋಟಿ ಜನ ನೆಲೆ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಇದು ಅದೇ ಅವಧಿಯಲ್ಲಿ ಯುದ್ಧಗಳಿಂದ ನೆಲೆ ಕಳೆದುಕೊಂಡು ವಲಸೆ ಹೋದವರಿಗಿಂತ ಹತ್ತು ಪಾಲು ಹೆಚ್ಚು. 2018ರ ಒಂದೇ ವರ್ಷದಲ್ಲಿ ದಕ್ಷಿಣ ಏಷ್ಯಾದ ದೇಶಗಳಲ್ಲಿ, ವಾಯುಗುಣ ಬದಲಾವಣೆಯ ಕಾರಣದಿಂದ ನೆಲೆ ಕಳೆದುಕೊಂಡು ಸ್ಥಳಾಂತರಗೊಂಡವರ ಸಂಖ್ಯೆ 33 ಲಕ್ಷ. 2050ರ ಒಳಗಾಗಿ ಮೊಜಾಂಬಿಕ್, ಜಿಂಬಾಬ್ವೆ, ಬಹಮಾಸ್, ಜಪಾನ್ ಮತ್ತು ಅಫ್ಗಾನಿಸ್ತಾನದಲ್ಲಿ ವಾಯುಗುಣ ಬದಲಾವಣೆ ಪ್ರೇರಿತ ವಿದ್ಯಮಾನಗಳಿಂದ 120 ಕೋಟಿ ಜನ ನಿರಾಶ್ರಿತರಾಗಿ ಸ್ಥಳಾಂತರಗೊಳ್ಳಲಿದ್ದಾರೆ ಎಂದು ವರದಿಗಳು ತಿಳಿಸುತ್ತಿವೆ.



ಈಗಾಗಲೇ ವಾಯುಗುಣ ನಿರಾಶ್ರಿತರಾಗಿ ಸ್ಥಳಾಂತರಗೊಂಡಿರುವ ಕೋಟ್ಯಂತರ ಮಂದಿ ಕೊಳೆಗೇರಿಗಳಲ್ಲಿ, ನಿರಾಶ್ರಿತರ ಶಿಬಿರಗಳಲ್ಲಿ ದಿನ ದೂಡುತ್ತಿದ್ದಾರೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ವರದಿಯಂತೆ, ವಾಯುಗುಣ ನಿರಾಶ್ರಿತ ವಲಸಿಗರ ಒಟ್ಟು ಸಂಖ್ಯೆಯ ಶೇ 80ರಷ್ಟು ಭಾಗ ಬದುಕಲು ಬೇಕಾದ ಮೂಲಭೂತ ಅಗತ್ಯಗಳಿಗೂ ಹೋರಾಡಬೇಕಾದ ಪರಿಸ್ಥಿತಿ ಬರುವುದರಿಂದ, ಘನತೆಯಿಂದ ಜೀವಿಸಬೇಕೆನ್ನುವ ಅವರ ಹಂಬಲ ಕನಸಾಗಿಯೇ ಉಳಿಯಲಿದೆ.

ಜಾಗತಿಕ ಮಟ್ಟದಲ್ಲಿ ನಡೆದಿರುವ ಎಲ್ಲ ಅಧ್ಯಯನಗಳೂ ಒಟ್ಟಾರೆಯಾಗಿ ನಿರಾಶಾದಾಯಕವಾದ ಮುನ್ನೋಟವನ್ನು ನೀಡಿವೆ ನಿಜ. ಹಾಗಾದರೆ ಅಂತಹ ವಿಷಮ ಪರಿಸ್ಥಿತಿಯಿಂದ ಪಾರಾಗುವುದು ಹೇಗೆ? ವಾಯುಗುಣ ಬದಲಾವಣೆಗೆ ಮುಖ್ಯ ಕಾರಣವಾದ ಜಾಗತಿಕ ತಾಪಮಾನದ ಏರಿಕೆಯನ್ನು ನಿಯಂತ್ರಿಸುವುದರ ಜೊತೆಗೇ ವಾಯುಗುಣ ಬದಲಾವಣೆಗಳು ತರುತ್ತಿರುವ ಪರಿಣಾಮಗಳ ವಾಸ್ತವವನ್ನು ಒಪ್ಪಿಕೊಂಡು, ವಾಯುಗುಣ ನಿರಾಶ್ರಿತರು ಮತ್ತು ವಲಸೆಯ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸಲು ಬೇಕಾದ 'ಕ್ಲೈಮೇಟ್ ರೆಸಿಲಿಯನ್ಸ್' ಸಾಮರ್ಥ್ಯವನ್ನು ತುರ್ತಾಗಿ ಅಭಿವೃದ್ಧಿಪಡಿಸಬೇಕೆಂಬುದು ವಿಜ್ಞಾನಿಗಳ ಅಭಿಪ್ರಾಯ.

ಅಪಾಯಕಾರಿ ಹವಾವಿದ್ಯಮಾನಗಳನ್ನು ಎದುರಿಸಲು ಸನ್ನದ್ಧರಾಗಿ, ಸ್ಥಳೀಯ ಆರ್ಥಿಕತೆ, ಜೀವನೋಪಾಯಗಳಿಗೆ ತೊಂದರೆಯಾಗದಂತೆ ಪರ್ಯಾಯಗಳನ್ನು ಮೊದಲೇ ರೂಪಿಸಿ, ಅವಘಡಗಳ ಪರಿಣಾಮಗಳಿಂದ ಆದಷ್ಟು ಬೇಗ ಚೇತರಿಸಿಕೊಳ್ಳುವ ಸಾಮರ್ಥ್ಯವನ್ನು ಸ್ಥಳೀಯವಾಗಿ ಬೆಳೆಸುವುದೇ ವಾಯುಗುಣ ಪುನಶ್ಚೇತನದ (ಕ್ಲೈಮೇಟ್ ರೆಸಿಲಿಯನ್ಸ್) ಮುಖ್ಯ ಗುರಿ. ದೇಶದಲ್ಲಿ 2005ರಲ್ಲಿ, ನ್ಯಾಷನಲ್ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಅಥಾರಿಟಿ ಅಸ್ತಿತ್ವಕ್ಕೆ ಬಂದಾಗಿನಿಂದಲೇ ಈ ಕೆಲಸಗಳು ನಿಧಾನವಾಗಿ ಪ್ರಾರಂಭವಾಗಿವೆ.

ಒಡಿಶಾ ರಾಜ್ಯದ 480 ಕಿ.ಮೀ. ಕರಾವಳಿಯಲ್ಲಿ ಇದುವರೆವಿಗೂ ನಿರ್ಮಿಸಲಾಗಿರುವ ಸುಮಾರು 200 ಚಂಡಮಾರುತ ಆಶ್ರಯ ತಾಣಗಳು (ಸೈಕ್ಲೋನ್ ಶೆಲ್ಟರ್ಸ್) ಇದಕ್ಕೊಂದು ನಿದರ್ಶನ. 15 ರಾಜ್ಯಗಳಲ್ಲಿ, ಸೆಂಟರ್ ಫಾರ್ ಸೈನ್ಸ್ ಆ್ಯಂಡ್ ಎನ್‌ವಿರಾನ್ಮೆಂಟ್ ಸಂಸ್ಥೆ ಮತ್ತು ಡೌನ್ ಟು ಅರ್ಥ್ ಪತ್ರಿಕೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ನಡೆಸಿದ ವಿಸ್ತೃತ ಅಧ್ಯಯನವು ಈ ಯೋಜನೆಯಲ್ಲಿರುವ ನೀರು ಮತ್ತು ಸಂಪನ್ಮೂಲಗಳ ಸಂರಕ್ಷಣೆ, ನೀರಾವರಿ, ಪ್ರವಾಹನಿರ್ವಹಣೆ, ಕೃಷಿಮತ್ತುಜಾನುವಾರು, ಮೀನುಗಾರಿಕೆ, ಕುಡಿಯುವ ನೀರು ಮತ್ತು ನೈರ್ಮಲ್ಯಗಳಿಗೆ ಸಂಬಂಧಿತ ಕೆಲಸಗಳಲ್ಲಿ ಹಣ ತೊಡಗಿಸಿ, ವಾಯುಗುಣ ಪುನಶ್ಚೇತನದ ಸಾಮರ್ಥ್ಯವನ್ನು ಬೆಳೆಸುವುದು ಸಾಧ್ಯವೆಂಬುದನ್ನು ತೋರಿಸಿದೆ. ಅಂತಹ ಹಲವಾರು ನಿದರ್ಶನಗಳೂ ಈ ಅಧ್ಯಯನದಲ್ಲಿವೆ.

ಬದಲಾಗುತ್ತಿರುವ ವಾಯುಗುಣದಿಂದ ಮತ್ತೆ ಮತ್ತೆ ಪ್ರಾಕೃತಿಕ ಅವಘಡಗಳಿಗೆ ಈಡಾಗುತ್ತಿರುವ ಪ್ರದೇಶಗಳಲ್ಲಿ, ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು, ವಾಯುಗುಣ ಪುನಶ್ಚೇತನ ಸಾಮರ್ಥ್ಯವನ್ನು ಬೆಳೆಸುವ ದಿಕ್ಕಿಗೆ ಮರುಹೊಂದಿಸಿ ಕಾರ್ಯಗತಗೊಳಿಸಿದಲ್ಲಿ, ವಾಯುಗುಣ ನಿರಾಶ್ರಿತರ ವಲಸೆ ಹಾಗೂ ಸಂಬಂಧಿತ ಸಮಸ್ಯೆಗಳನ್ನು ನಿರ್ವಹಿಸುವುದು ಸಾಧ್ಯವಾಗುತ್ತದೆ ಎಂಬುದು ತಜ್ಞರ ಖಚಿತ ನಿಲುವು.

ಚುರುಮುರಿ



ವಿಜಯ ಯಾತ್ರೆ

• ಆನಂದ

ವಾಟ್ಸ್‌ಆ್ಯಪ್ ನೋಡಿ 'ಅಯ್ಯೋ ಏನು ಗತಿ ಬಂತು...' ಎಂದು ಉದ್ಗರಿಸಿದೆ. 'ಏನು ಸಮಾಚಾರ?' ಎಂದು ಹೆಂಡತಿ ಕಣ್ಣಲ್ಲೇ ಕೇಳಿದಳು.

'ಅದೇ ವಿಜಯ ಮಲ್ಯರದ್ದು?'

'ಏನು ಮುಂಬೈ ಜೇಲಿಗೆ ಬರ್ತಿದ್ದಾರೇನು? ಪ್ಲೇನ್‌ನಲ್ಲಿ ತಾನೆ? ಅವರದ್ದೇ ಕಿಂಗ್‌ಫಿಶರ್ ಇದ್ದಿದ್ದರೆ ಅದರಲ್ಲೇ ಪೊಲೀಸರು ಕರೆದುಕೊಂಡು ಬರ್ತಿದ್ದರೇನೋ' ಎಂದಳು.

'ಅದಲ್ಲಮ್ಮ, ಮಲ್ಯ ಸಾಹೇಬರು ಲಂಡನ್ನಿನ ಮೆಟ್ರೊ ರೈಲಿನಲ್ಲಿ ಓಡಾಡ್ತಿದಾರೆ' ಎಂದು ಅವರ ಆ ರೈಲು ಯಾತ್ರೆಯ ವಾಟ್ಸ್‌ಆ್ಯಪ್ ಪಿಕ್ಚರ್ ತೋರಿಸಿದೆ. 'ಹೌದಲ್ಲಾರೀ! ಅವರ ಕೈಲೇ ಬ್ರೀಫ್‌ಕೇಸ್! ಟ್ಯಾಕ್ಸಿನಾದರೂ ಹಿಡೀಬಾರದಿತ್ತೇ?' ಎಂದು ಉದ್ಗರಿಸಿದಳು.

'ಮೆಟ್ರೋನೇ ಚೀಪ್ ಅಂತ ಇದನ್ನೇ ಹತ್ತಿರಬಹುದು' ಎಂಬ ಸಮಜಾಯಿಷಿ ಕೊಟ್ಟೆ.

'ಆದರೂ ಪಾಪ ನೋಡಿ, ಒಂದು ವಿಮಾನ ಸಂಸ್ಥೆನೇ ನಡೆಸ್ತಿದ್ದವರು ಈಗ ಈ ತರಹ ಓಡಾಡಬೇಕಾಗಿ ಬಂದಿದೆಯಲ್ಲಾ?'

'ಮೇಲೆ ಹೋದವರು ಕೆಳಗೆ ಇಳೀಲೇಬೇಕು ಅಂತ ಗಾದೇನೇ ಇದೆಯಲ್ಲ' ಎಂದೆ.

'ಬಹುಶಃ ಮಲ್ಯಾಜಿ ರೈಲು ಹತ್ತಿದ್ದು ಇದೇ ಮೊದಲ ಬಾರಿ ಇರಬಹುದು'.

'ಇರಬಹುದು ಇರಬಹುದು... ಬೆಂಗಳೂರಿನಲ್ಲಿದ್ದಾಗ ಬಾಗಿಲಲ್ಲೇ ಐಷಾರಾಮಿ ಕಾರ್ ನಿಂತಿರೋದು. ಆಳು ಬ್ರೀಫ್‌ಕೇಸ್ ತಂದು ಕಾರಿನಲ್ಲಿ ಇಡ್ತಿದ್ದ. ಡ್ರೈವರ್ ಬಾಗಿಲು ತೆಗೆದು ಧಣಿಗಳನ್ನು ಕಾರಿನಲ್ಲಿ ಕೂಡಿಸುತ್ತಿದ್ದ. ಕಾರ್ ಸೀದಾ ಏರ್‌ಪೋರ್ಟ್‌ಗೆ ಹೋಗ್ತಿತ್ತು. ಝುಂ ಅಂತ ಬಿಸಿನೆಸ್ ಕ್ಲಾಸ್‌ನಲ್ಲಿ ಕೂತು ಹಾರ್ತಿದ್ದರು. ಈಗ?'

'ಜೀವನ ಪಾಠ ಕಲಿಸುತ್ತೇಂತ ಹಾಗೆ ಪಾಠ ಕಲಿತವರು ಬೇರೆಯವರಿಗೆ ಹೇಳ್ತಾರೆ'.

'ನಾಳೆ ನಮ್ಮ ಮಲ್ಯಾಜಿ ಸಹ ಇತರರಿಗೆ ಹೇಳಬಹುದು ಯಾವುದಾದರೂ ಕ್ಲಬ್‌ನಲ್ಲಿ. ಏಕೆಂದರೆ ಅವರೂ ಪಾಠ ಕಲೀತಿದಾರಲ್ಲಾ...'

'ಮುಂದೆ ಇನ್ನೂ ಏನೇನು ಪಾಠ ಕಲಿಬೇಕಾಗಿದೆಯೋ ಏನೋ. ಈ ರೈಲು ಪ್ರಯಾಣ ಡ್ರೆಸ್‌ರಿಹರ್ಸಲ್ ಇರಬಹುದು'.

'ಆಮೇಲೆ ಇತರರ ಮುಂದೆ ರೈಲು ಬಿಡದೇ ಹೋದರೆ ಸರಿ'.

ಸಂಗತ

ವೈದ್ಯ– ರೋಗಿ ಸಂಬಂಧಕ್ಕೆ ಹೊಸ ಭಾಷ್ಯ

ವೈದ್ಯಕೀಯ ಶಿಕ್ಷಣಕ್ಕೆ ಸೇರ್ಪಡೆಯಾಗಿರುವ ಹೊಸ ಪಠ್ಯಕ್ರಮ, ಬದಲಾದ ಕಾಲಘಟ್ಟದಲ್ಲಿ ಈ ಇಬ್ಬರ ನಡುವಿನ ಪರಸ್ಪರ ವಿಶ್ವಾಸ ವೃದ್ಧಿಗೆ ಪೂರಕವಾಗಿದೆ

• ಡಾ. ವಿನಯ ಶ್ರೀನಿವಾಸ್

ವೈದ್ಯಕೀಯ ಶಿಕ್ಷಣದಲ್ಲಿ ಈಗ ಹೊಸ ಪಠ್ಯಕ್ರಮ ಸೇರಿಸಲಾಗಿದೆ. ವಿಶೇಷವೆಂದರೆ, ಈ ಪಠ್ಯಕ್ರಮ ವೈದ್ಯ ವಿಷಯಗಳಿಗೆ ಸಂಬಂಧಿಸಿದ್ದಲ್ಲ, ಸಂಪೂರ್ಣ ಬೇರೆಯದು.

ಭಾರತೀಯ ವೈದ್ಯಕೀಯ ಮಂಡಳಿಯು ಇದೀಗ ವೈದ್ಯರ ಜವಾಬ್ದಾರಿಯನ್ನು ಹೆಚ್ಚಿಸುವ ಉದ್ದೇಶದಿಂದ, ವೈದ್ಯ– ರೋಗಿಯ ಸಂಬಂಧವನ್ನು ಮತ್ತಷ್ಟು ಉತ್ತಮವಾಗಿಸಲೆಂದು ಹಾಗೂ ಸಂಘರ್ಷಗಳನ್ನು ಕಡಿಮೆ ಮಾಡಲೆಂದು ಹೊಸ ಅಂಶಗಳನ್ನು ಪಠ್ಯದಲ್ಲಿ ಸೇರಿಸಿದೆ. ಇದರಲ್ಲಿ ಮುಖ್ಯವಾಗಿ ವರ್ತನೆ, ನೈತಿಕತೆ ಮತ್ತು ಸಂವಹನ ಕೌಶಲದ ಬಗ್ಗೆ ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕಿದೆ. ವೈದ್ಯಕೀಯ ಶಿಕ್ಷಣದ ನಾಲ್ಕೂ ವರ್ಷಗಳಲ್ಲಿ ಈ ಪಠ್ಯವನ್ನು ಹಂಚಲಾಗಿದೆ.

ಮೊದಲನೆಯ ವರ್ಷದಲ್ಲಿ, ವೈದ್ಯನೆಂದರೆ ಹೇಗಿರಬೇಕು, ರೋಗಿಯ ಮನಃಸ್ಥಿತಿ ಹೇಗಿರುತ್ತದೆ, ವೈದ್ಯನಿಂದ ಆತನ ನಿರೀಕ್ಷೆಗಳೇನು ಎಂಬುದರ ಬಗ್ಗೆ ಪಾಠಗಳಿವೆ. ಅಂತೆಯೇ ತನ್ನ ದೇಹವನ್ನು ಕತ್ತರಿಸಿಕೊಂಡು ಅಂಗಾಂಗ ರಚನೆಯ ಬಗ್ಗೆ ವಿದ್ಯಾರ್ಥಿಗಳಿಗೆ ಸಂಪೂರ್ಣವಾಗಿ ತಿಳಿಸಲು ತಯಾರಾದ ಮಾನವ ಕಳೇಬರವನ್ನು ತಮ್ಮ ಮೊದಲ ಗುರು ಎಂದು ಗೌರವಿಸಬೇಕು ಎಂಬ ಅಂಶವನ್ನು ಮನವರಿಕೆ ಮಾಡಿಕೊಡಲಾಗುತ್ತದೆ.

ಎರಡನೆಯ ವರ್ಷದಲ್ಲಿ ಸಂವಹನ ಕೌಶಲಗಳನ್ನು ಇನ್ನೂ ವಿಸ್ತಾರವಾಗಿ ತಿಳಿಸುತ್ತಾ, ಜೈವಿಕ ನೈತಿಕ ವಿಜ್ಞಾನದ ಬಗ್ಗೆಯೂ ಬೋಧನೆ ಶುರುವಾಗುತ್ತದೆ. ಆರೋಗ್ಯ ರಕ್ಷಣೆ ಪ್ರತಿಯೊಬ್ಬರ ಹಕ್ಕು ಎಂಬುದನ್ನು ಮನದಟ್ಟು ಮಾಡುತ್ತಲೇ ಆರೋಗ್ಯ ರಕ್ಷಣಾ ತಂಡಗಳಲ್ಲಿ ಸೌಹಾರ್ದದಿಂದ ಕಾರ್ಯ ನಿರ್ವಹಿಸುವ ಸೂಕ್ಷ್ಮಗಳನ್ನು ತಿಳಿಸಲಾಗುತ್ತದೆ. ರೋಗಿಯ ಕುಟುಂಬದ ಸದಸ್ಯರ ಮನಃಸ್ಥಿತಿಯನ್ನು ಅರ್ಥ ಮಾಡಿಕೊಂಡು ಸೂಕ್ತ ಸಾಂತ್ವನ ಹೇಳುವ ರೀತಿನೀತಿಗಳನ್ನು ಹೊಸ ಪಠ್ಯ ತಿಳಿಸುತ್ತದೆ.

ಮೂರನೆಯ ವರ್ಷದಲ್ಲಿಯೂ ಸಂವಹನ ಕೌಶಲ, ಜೈವಿಕ ನೈತಿಕ ವಿಜ್ಞಾನದ ತರಗತಿಗಳು ಮುಂದುವರಿಯುತ್ತವೆ. ಚಿಕಿತ್ಸೆಯ ವೇಳೆ ಆಗಬಹುದಾದ ವೈದ್ಯಕೀಯ ಲೋಪಗಳನ್ನು ಬಹಿರಂಗಪಡಿಸುವ ರೀತಿ ಮತ್ತು ಅದರ ಮಹತ್ವವನ್ನು ತಿಳಿಸಲಾಗುತ್ತದೆ. ರೋಗಿಯ ಆರೈಕೆಯಲ್ಲಿ ಆತನ ಗೋಪ್ಯತೆ ಕಾಪಾಡಿಕೊಳ್ಳುವ ಬಗೆ ಮತ್ತು ಎಂತಹ ಸಂದರ್ಭಗಳಲ್ಲಿ ಅದನ್ನು ಉಲ್ಲಂಘಿಸಬಹುದು ಎಂಬುದರ ಬಗ್ಗೆ ತಿಳಿಹೇಳಲಾಗುತ್ತದೆ. ಕಾನೂನಿನ ಚೌಕಟ್ಟಿಗೆ ಒಳಪಡುವ ವೈದ್ಯಕೀಯ ಪ್ರಕರಣಗಳನ್ನು ನಿರ್ವಹಿಸುವ ರೀತಿ ರಿವಾಜುಗಳನ್ನು ಬೋಧಿಸಲಾಗುತ್ತದೆ.

ಇನ್ನು ಕಡೆಯ ವರ್ಷದ ಹೊಸ ಪಠ್ಯವು ವೈದ್ಯ– ರೋಗಿಯ ನಡುವಿನ ಸಂಬಂಧಕ್ಕೆ ಒತ್ತುಕೊಡುತ್ತದೆ. ರೋಗಿಯ ಆರೈಕೆಯಲ್ಲಿ ಅನುಭೂತಿಯ ಮಹತ್ವವನ್ನು ತಿಳಿಸುತ್ತದೆ. ನಿಷ್ಠಾವಂತ ವೈದ್ಯನಾಗಿ ಕರ್ತವ್ಯ ನಿರ್ವಹಿಸುವುದರ ಬಗ್ಗೆ ತಿಳಿಹೇಳಲಾಗುತ್ತದೆ. ಗಂಭೀರ ಸ್ವರೂಪದ ಕಾಯಿಲೆಯಿಂದ ಬಳಲುತ್ತಿರುವ ಅಥವಾ ಸಾವಿನ ಅಂಚಿನಲ್ಲಿರುವ ರೋಗಿಯ ವಿಚಾರವನ್ನು ಆತನ ಸಂಬಂಧಿಕರಿಗೆ ನಿಧಾನವಾಗಿ ತಿಳಿಸುವ ಪರಿಯನ್ನೂ ಕಲಿಸಲಾಗುತ್ತದೆ. ವಿದ್ಯಾರ್ಥಿಗಳು ಪರಿಪೂರ್ಣ ವೈದ್ಯರಾಗುವ ಕಡೆಯ ಹಂತದಲ್ಲಿರುವ ಈ ದಿನಗಳಲ್ಲಿ ವೈದ್ಯ ಹಾಗೂ ವೈದ್ಯಕೀಯ ಕ್ಷೇತ್ರಕ್ಕೆ ಹತ್ತಿರವಾದ ವಿವಿಧ ಉದ್ಯಮಗಳ (ಉದಾಹರಣೆಗೆ, ಔಷಧ ತಯಾರಿಸುವ) ನಡುವಿನ ಸಂಬಂಧ ಹೇಗಿರಬೇಕು, ಅಲ್ಲಿ ವೈದ್ಯ ಎಂತಹ ನೈತಿಕ ಪ್ರಜ್ಞೆ ಹೊಂದಿರಬೇಕು ಎಂಬುದನ್ನು ಬೋಧಿಸಲಾಗುತ್ತದೆ.

ರೋಗಿಯ ಸಾವು ಸಂಭವಿಸಿದಾಗ ಅಹಿತಕರ ಘಟನೆಗೆ ಅವಕಾಶವಿಲ್ಲದೆ ಸನ್ನಿವೇಶವನ್ನು ನಿಭಾಯಿಸುವುದರ ಬಗ್ಗೆ ಪ್ರಕರಣಗಳನ್ನು ಆಧರಿಸಿ ಕಲಿಯಲು ಸೂಚಿಸಲಾಗುತ್ತದೆ. ಚಿಕಿತ್ಸೆಯು ವಿಫಲವಾದಾಗ ರೋಗಿಯ ಕಡೆಯವರಿಗೆ ತಿಳಿಸುವ ಬಗೆ ಮತ್ತು ಅದು ಬೀರಬಹುದಾದ ಪರಿಣಾಮಗಳ ನಿರ್ವಹಣೆ ಹೇಗೆ ಎಂಬಂಥ ಅಂಶಗಳನ್ನು ಹೇಳಿಕೊಡಲಾಗುತ್ತದೆ.



ಒಟ್ಟಿನಲ್ಲಿ, ವೈದ್ಯರ ವೃತ್ತಿಪರತೆಗೆ ವಿದ್ಯಾರ್ಥಿ ದೆಸೆಯಿಂದಲೇ ತಳಪಾಯ ಹಾಕುವ ಉದ್ದೇಶ ಈ ಹೊಸ ಪಠ್ಯಕ್ರಮದ್ದಾಗಿದೆ. ಹಾಗೆಯೇ, ವೈದ್ಯನಾಗುವವನು ಕೇವಲ ರೋಗ ಚಿಕಿತ್ಸಕನಾದರೆ ಸಾಲದು, ಸ್ವಸ್ಥ ಸಮಾಜವನ್ನು ಕಟ್ಟುವ ನಾಯಕನಾಗಬೇಕು ಎಂಬ ಅಂಶವನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವಿದೆ. ಪರಹಿತ ಚಿಂತನೆ, ಪರಸ್ಪರ ಗೌರವ, ಸ್ಪಂದಿಸುವಿಕೆ ಮೊದಲಾದ ಮೌಲ್ಯಗಳನ್ನು ಬಿತ್ತುವ ಕಾರ್ಯಕ್ಕೆ ಈ ಪಠ್ಯ ಕೈಹಾಕಿದೆ. ಇದನ್ನು ಬೋಧಿಸಲು ವೈದ್ಯ ಶಿಕ್ಷಕರಿಗೆ ಕಡ್ಡಾಯವಾಗಿ ಸೂಕ್ತ ತರಬೇತಿ ಕೊಡಲಾಗುತ್ತಿದೆ.

ಅದೇನೇ ಇರಲಿ, ಹಿಂದೆ ವೈದ್ಯಕೀಯ ವಿಷಯ ಕಲಿಯುತ್ತ ಸ್ವಾಭಾವಿಕವಾಗಿಯೇ ಈ ಮೌಲ್ಯಗಳನ್ನು ಕರಗತ ಮಾಡಿಕೊಂಡ ಎಷ್ಟು ಹಿರಿಯ ವೈದ್ಯರನ್ನು ನಾವು ನೋಡಿಲ್ಲ? ಆದರೆ ಅದು ವೈದ್ಯೋ ನಾರಾಯಣೋ ಹರಿಃ ಎನ್ನುತ್ತಿದ್ದ ಕಾಲ! ವೈದ್ಯರು ಎಂದಿಗೂ ಉದ್ದೇಶಪೂರ್ವಕವಾಗಿ ರೋಗಿಗೆ ಹಾನಿ ಮಾಡುವುದಿಲ್ಲ ಎಂದು ಬಲವಾಗಿ ನಂಬಿದ್ದ ಕಾಲ! ಕಾಲ ಬದಲಾಗಿದೆ. ಜನಸಾಮಾನ್ಯರು ಮೊದಲು ಗೂಗಲ್ ವೈದ್ಯರನ್ನು ಸಂಪರ್ಕಿಸಿದ ನಂತರವೇ ಆಸ್ಪತ್ರೆಗೆ ಭೇಟಿ ನೀಡುವುದು. ಮೂರ್ನಾಲ್ಕು ವೈದ್ಯರ ಅಭಿಪ್ರಾಯವನ್ನು ತೆಗೆದುಕೊಂಡ ನಂತರವೇ ಚಿಕಿತ್ಸೆಯನ್ನು ನಿರ್ಧರಿಸುವುದು. ಕೆಲವು ವೈದ್ಯರೂ ಐಷಾರಾಮಿ ಬದುಕಿನ ಹಿಂದೆ ತೆರಳಿ ಎಡವುತ್ತಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ವೈದ್ಯ– ರೋಗಿ ಇಬ್ಬರಿಗೂ ಮೊದಲಿನ ತಾಳ್ಮೆ– ಸಾವಧಾನ ಇಲ್ಲದಾಗಿದೆ. ಬದಲಾದ ಕಾಲಘಟ್ಟದಲ್ಲಿ ಅವರ ನಡುವೆ ಪರಸ್ಪರ ವಿಶ್ವಾಸ ಕುಂದಿದೆ.

ಕಾರಣಗಳೇನೇ ಇರಲಿ, ಈ ಎಲ್ಲ ಸೂಕ್ಷ್ಮಗಳನ್ನೂ ಪಠ್ಯದ ರೂಪದಲ್ಲಿ ಕಡ್ಡಾಯವಾಗಿ ಕಲಿಸುವಂತಹ ಪರಿಸ್ಥಿತಿ ಬಂದಿರುವುದು ವಿಪರ್ಯಾಸವೇ ಸರಿ.

ಲೇಖಕಿ: ರೋಗಲಕ್ಷಣಶಾಸ್ತ್ರಜ್ಞೆ

ವಾಚಕರ ವಾಣಿ

ಜನಸಾಮಾನ್ಯ ಓಡಾಡುವುದು ಹೇಗೆ?

'ಉತ್ತಮ ರಸ್ತೆಗಳು ಬೇಕು ಎಂದರೆ ಜನ ಹಣ ನೀಡಬೇಕು' ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಬೇಜವಾಬ್ದಾರಿಯ ಹೇಳಿಕೆ ನೀಡಿದ್ದಾರೆ (ಪ್ರ.ವಾ., ಸೆ. 17). ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸಬೇಕಾದುದು ಸರ್ಕಾರಗಳ ಕರ್ತವ್ಯ. ದೇಶದ ಪ್ರತಿಯೊಬ್ಬ ಪ್ರಜೆಯೂ ಜಿಎಸ್‌ಟಿ ರೂಪದಲ್ಲಿ ತೆರಿಗೆ ಪಾವತಿಸುತ್ತಿದ್ದಾನೆ. ಬಡವ– ಬಲ್ಲಿದ ಎನ್ನದೆ ಪಾವತಿಸುತ್ತಿರುವ ತೆರಿಗೆ ಹಣದಲ್ಲಿ ಮೂಲ ಸೌಕರ್ಯಗಳನ್ನು ಕೊಡದೆ ಸರ್ಕಾರಗಳು ಮಾಡುತ್ತಿರುವ ಅಭಿವೃದ್ಧಿಗಳಾದರೂ ಏನು? ಶ್ರೀಮಂತರು ಆದಾಯ ತೆರಿಗೆ, ಆಸ್ತಿ ತೆರಿಗೆಯಂತಹ ಶುಲ್ಕಗಳನ್ನು ಹೆಚ್ಚುವರಿಯಾಗಿ ಪಾವತಿಸುತ್ತಾರೆ. ವಾಹನಗಳು ಓಡಾಡುವ ಎಲ್ಲ ರಸ್ತೆಗಳಿಗೂ ಟೋಲ್ ಶುಲ್ಕ ವಿಧಿಸುತ್ತಾ ಹೋದರೆ ಜನಸಾಮಾನ್ಯ ಓಡಾಡುವುದಾದರೂ ಹೇಗೆ? ದಿನನಿತ್ಯ ಬಳಸುವ ವಸ್ತುಗಳ ಬೆಲೆ ಹೆಚ್ಚಿಸುತ್ತಾ ರಸ್ತೆಗಳಿಗೆ ಶುಲ್ಕ ವಿಧಿಸುತ್ತಾ ಹೋದರೆ, ಶಪಿಸುತ್ತಲೇ ಅವುಗಳನ್ನು ಬಳಸುವುದು ಜನರಿಗೆ ಅನಿವಾರ್ಯವಾಗುತ್ತದೆ. ಆರ್ಥಿಕ ಮುಗ್ಗಟ್ಟಿನಿಂದ ಬಸವಳಿದ ಜನಸಾಮಾನ್ಯನ ಮೇಲೆ ಸರ್ಕಾರ ಇನ್ನೆಷ್ಟು ಬರೆಗಳನ್ನು ಎಳೆಯಲಿದೆಯೋ?

ಡಾ. ಎಚ್.ಮಲ್ಲತ್ತಹಳ್ಳಿ ತುಕಾರಾಂ, ಬೆಂಗಳೂರು

ಈ ಡೆಮು ರೈಲೂ ಪುನರಾರಂಭವಾಗಲಿ

ಕೊರೊನಾ ಕಾರಣದಿಂದ ರೈಲ್ವೆ ಇಲಾಖೆ ಸ್ಥಗಿತಗೊಳಿಸಿದ್ದ 'ಡೆಮು' ರೈಲುಗಳ ಸಂಚಾರ ಪುನರಾರಂಭವಾಗಿದೆ. ಹೀಗಾಗಿ ರಾಯಚೂರು- ಕಲಬುರ್ಗಿ- ರಾಯಚೂರು ಮತ್ತು ಬೀದರ್- ಕಲಬುರ್ಗಿ- ಬೀದರ್ ನಡುವಿನ ಡೆಮು ರೈಲುಗಳ ಸೇವೆ ಪ್ರಯಾಣಿಕರಿಗೆ ಲಭ್ಯವಾಗಿದೆ. ಆದರೆ, ಕಲಬುರ್ಗಿ- ರಾಯಚೂರು- ಕಲಬುರ್ಗಿ ಡೆಮು ರೈಲನ್ನು ಆರಂಭಿಸಲು ಸೋಲಾಪುರ ರೈಲ್ವೆ ವಿಭಾಗ ನಿರಾಸಕ್ತಿ ತೋರಿ ಕುಂಭಕರ್ಣ ನಿದ್ರೆಗೆ ಜಾರಿದೆ. ಈ ಕುರಿತು ಅಲ್ಲಿನ ಅಧಿಕಾರಿಗೆ ಟ್ವೀಟ್ ಮಾಡಿ, ಅದನ್ನು ಕೇಂದ್ರ ವಲಯದ ಪ್ರಧಾನ ವ್ಯವಸ್ಥಾಪಕರು, ನೂತನ ರೈಲ್ವೆ ಸಚಿವರಿಗೆ ಟ್ಯಾಗ್ ಮಾಡಿದ್ದರೂ ಏನೂ ಪ್ರಯೋಜನವಾಗಿಲ್ಲ. ಈ ರೈಲಿನ ಒಂದು ಜೊತೆ ಬೋಗಿಯು ಕಲಬುರ್ಗಿ ರೈಲು ನಿಲ್ದಾಣದ 'ಕೋಚಿಂಗ್ ಸಂಕೀರ್ಣ'ದಲ್ಲಿ ದೂಳು ತಿನ್ನುತ್ತಾ ನಿಂತಿದೆ. ದಯವಿಟ್ಟು ಈ ರೈಲನ್ನು ಪುನರಾರಂಭಿಸಬೇಕು. ಇಲ್ಲವಾದರೆ, ಕಲಬುರ್ಗಿ- ರಾಯಚೂರಿನ ಪ್ರಯಾಣಿಕರು ದುಬಾರಿಯ ರಸ್ತೆ ಪ್ರಯಾಣವನ್ನೇ ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳಬೇಕಿದೆ.

ವೆಂಕಟೇಶ ಮುದಗಲ್, ಕಲಬುರ್ಗಿ

ವಸ್ತುಸ್ಥಿತಿ ಅರಿಯದ ಸಂಸ್ಕೃತಿ ವ್ಯಾಮೋಹ

'ಹಿಂದಿ ದಿನ' ಆಚರಣೆಯ ಪರವಾದ ಆರ್.ವೆಂಕಟರಾಜು ಅವರ ಅಭಿಪ್ರಾಯ (ವಾ.ವಾ., ಸೆ. 16) ಪೂರ್ವಗ್ರಹಪೀಡಿತವಾಗಿದೆ. ಇಂಗ್ಲಿಷ್‌ನ ಅನಿವಾರ್ಯ ಮತ್ತು ಹಿಂದಿ ಹೇರಿಕೆಯ ವಸ್ತುಸ್ಥಿತಿಯನ್ನು ಅರಿಯದ ಸಂಸ್ಕೃತಿ ವ್ಯಾಮೋಹವನ್ನು ತೋರಿಸುತ್ತದೆ. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಸಾಹಿತ್ಯ, ಶಿಕ್ಷಣ, ರಾಜಕೀಯ, ಸಂಪರ್ಕ, ಸಾರಿಗೆ, ಮುದ್ರಣ, ವಿದ್ಯುತ್, ಅಂತರ್ಜಾಲ- ಹೀಗೆ ನಾನಾ ಕ್ಷೇತ್ರಗಳಲ್ಲಿ ಇಂಗ್ಲಿಷ್‌ನ ಪದಗಳು ನಮ್ಮ ದಿನನಿತ್ಯ ಜೀವನದ ಭಾಗವಾಗಿ ಹೋಗಿರುವಾಗ ಇಂಗ್ಲಿಷ್ ಪದಗಳ ಬಳಕೆಯನ್ನು ಅನ್ಯ ಸಂಸ್ಕೃತಿಯ ಮೈಲಿಗೆ ಎಂಬಂತೆ ಭಾವಿಸುವುದು ಎಷ್ಟರಮಟ್ಟಿಗೆ ಉಚಿತ ಎಂದು ಪ್ರಶ್ನಿಸಿಕೊಳ್ಳಬೇಕಲ್ಲವೇ?

ಭಾರತದ ಪ್ರಧಾನಿ ಗದ್ದುಗೆಗೆ ಏರಿದ ಕನ್ನಡಿಗ ಎಚ್.ಡಿ.ದೇವೇಗೌಡರು ಹಿಂದಿ ಬಾರದ ಕಾರಣಕ್ಕೆ ಮೂದಲಿಕೆಗೆ ಒಳಗಾದರು ಎಂದು ಅವರು ಭಾವಿಸುವ ಸಂದರ್ಭವು ನಮ್ಮ ಸ್ವಾಭಿಮಾನವನ್ನು ಕೆಣಕಬೇಕೇ ಹೊರತು ದೀನತನದ ಭಾವನೆಯನ್ನು ಉಂಟು ಮಾಡಬಾರದು. ಹಿಂದಿ ಹೇರಿಕೆಗೆ ವಿರೋಧ ಒಂದು ದಿನದ ಹಿಂದಿ ದಿನಾಚರಣೆಗೆ ಸಂಬಂಧಿಸಿದ್ದಲ್ಲ. ಯುಪಿಎಸ್‌ಸಿ ನೇಮಕಾತಿ, ಬ್ಯಾಂಕಿಂಗ್ ಪರೀಕ್ಷೆ, ನೀಟ್, ಕರ್ನಾಟಕದಲ್ಲಿನ ಕೇಂದ್ರ ಸರ್ಕಾರಿ ಕಚೇರಿಗಳು, ಬ್ಯಾಂಕುಗಳಲ್ಲಿ ಪ್ರಾದೇಶಿಕ ಭಾಷೆಯ ಕಡೆಗಣನೆ, ಕೆಲವು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಮಾತನಾಡಿದರೆ ಮಕ್ಕಳಿಗೆ ದಂಡ ಹಾಕುವುದು (ಹಿಂದಿ ಮಾತಾಡಿದರೆ ದಂಡ ಇಲ್ಲ) ಮುಂತಾದ ಅನೇಕ ಸಂದರ್ಭಗಳಲ್ಲಿ ಹಿಂದಿ ಹೇರಿಕೆ ಆಗುತ್ತಿದೆ. ನೆನಪಿರಲಿ: ಕನ್ನಡಿಗರು ಹಿಂದಿಯನ್ನು ದ್ವೇಷಿಸುವುದಿಲ್ಲ, ಆದರೆ ಹಿಂದಿ ಹೇರಿಕೆಯನ್ನು ವಿರೋಧಿಸುತ್ತಾರೆ. ಏಕೆಂದರೆ ನಾವೂ ಬದುಕಿ ಉಳಿಯಬೇಕಲ್ಲ!

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಪ್ರತ್ಯೇಕ ಟೋಲ್ ಬೇಡಿಕೆ ಮತ್ತು ಡಾ. ಲೋಹಿಯಾ

ಟೋಲ್‌ಗಳಲ್ಲಿ ತಮಗೆ ಪ್ರತ್ಯೇಕ ಪಥ ಬೇಕು ಎಂದು ನಮ್ಮ ಶಾಸಕದ್ವಯರು ಸ್ಪೀಕರ್ ಅವರಿಗೆ ಬೇಡಿಕೆ ಸಲ್ಲಿಸಿದ್ದನ್ನು ಓದಿ (ಪ್ರ.ವಾ., ಸೆ. 16) ಆಶ್ಚರ್ಯವಾಯಿತು. 'ನಾವು ಶಾಸಕರು, ಟೋಲ್‌ಗಳಲ್ಲಿ ನಮ್ಮ ವಾಹನ ತಡೆದು ಗುರುತಿನ ಚೀಟಿ ಕೇಳುವುದೆಂದರೇನು? ಸಾರ್ವಜನಿಕರ ವಾಹನಗಳ ಜತೆ ಹೋಗಬೇಕಾಗಿರುವುದು ನಮ್ಮ ಗೌರವಕ್ಕೆ ತಕ್ಕುದಲ್ಲ' ಎಂಬುದು ಅವರ ಅಸಮಾಧಾನಕ್ಕೆ ಕಾರಣ.

ಈ ಪ್ರಸಂಗದಲ್ಲಿ ನನಗೆ ಡಾ. ರಾಮಮನೋಹರ ಲೋಹಿಯಾ ನೆನಪಾಗುತ್ತಾರೆ. ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಲೋಹಿಯಾ, ಅನಾರೋಗ್ಯಪೀಡಿತರಾಗಿ ನವದೆಹಲಿಯ ಆಸ್ಪತ್ರೆಗೆ ದಾಖಲಾಗಿರುತ್ತಾರೆ (ಈಗದು ರಾಮ ಮನೋಹರ ಲೋಹಿಯಾ ಆಸ್ಪತ್ರೆ ಎಂದು ಪುನರ್ ನಾಮಕರಣಗೊಂಡಿದೆ). ಲೋಹಿಯಾ ಅವರ ಆರೋಗ್ಯಸ್ಥಿತಿ ಉಲ್ಬಣಿಸುತ್ತದೆ. ವಿದೇಶದಿಂದ ತಜ್ಞ ವೈದ್ಯರನ್ನು ಕರೆಸಿ, ಚಿಕಿತ್ಸೆ ಮುಂದುವರಿಸುವ ಕುರಿತು ವೈದ್ಯರ ತಂಡ ಚರ್ಚಿಸುತ್ತಿರುತ್ತದೆ. ಅದನ್ನು ಕೇಳಿಸಿಕೊಂಡ ಲೋಹಿಯಾ ಅವರು ಆ ವೈದ್ಯರಿಗೆ ಕೇಳುತ್ತಾರೆ, 'ಈಗ ನನಗೆ ಸಿಗಲಿರುವ ವಿದೇಶಿ ವೈದ್ಯರ ಸೇವೆಯ ಸೌಲಭ್ಯ ಭಾರತದ ಸರ್ವ ಜನಸಾಮಾನ್ಯರಿಗೂ ಸಿಗುತ್ತದೇನು?' 'ಇಲ್ಲ' ಎಂಬ ಉತ್ತರ ವೈದ್ಯರಿಂದ ಬಂದಾಗ, ಲೋಹಿಯಾ ಸ್ಪಷ್ಟವಾಗಿ ಹೇಳುತ್ತಾರೆ, 'ಬಡವರಿಗೆ ಸಿಗದ ಇಂಥ ಯಾವ ಸೌಲಭ್ಯ ನನಗೆ ಯಾಕೆ ಬೇಕು? ಬೇಡ... ಬೇಡವೇ ಬೇಡ' ಎಂದು ನಿರಾಕರಿಸುತ್ತಾರೆ.

ಲೋಹಿಯಾ ಅವರು ಒಂದುಕಡೆ ಹೀಗೆ ಬರೆಯುತ್ತಾರೆ. 'ನನ್ನ ಬಳಿ ನನ್ನದೆಂಬುದೇನೂ ಇಲ್ಲ. ಭಾರತದ ಬಡವರು ಹಾಗೂ ಶ್ರೀಸಾಮಾನ್ಯರು ನನ್ನನ್ನು ತಮ್ಮವನು ಅಂದುಕೊಂಡಿರುವ ಒಂದು ಗೌರವದ ಭಾವನೆಯ ಹೊರತಾಗಿ ನನ್ನ ಬಳಿ ಏನೂ ಇಲ್ಲ'. ಅಂಥ ಲೋಹಿಯಾ ಅವರು ಇಂದಿನ ಜನಪ್ರತಿನಿಧಿಗಳಿಗೆ ಆದರ್ಶ ಏಕಾಗಬಾರದು...?

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪೆಗಾಸಸ್ ಬೇಹುಗಾರಿಕೆ ಪ್ರಕರಣ
ಮಾಹಿತಿ ಬಹಿರಂಗಪಡಿಸದಿರುವ ಕೇಂದ್ರದ ಕ್ರಮ ಸರಿಯೇ?

ಖಾಸಗಿತನದ ಹಕ್ಕು ಮೊಟಕು



• ಜೈನಾ ಕೊಠಾರಿ

ಸಾರ್ವಜನಿಕ ಮಹತ್ವದ ಹಲವು ವಿಚಾರಗಳನ್ನು ಪೆಗಾಸಸ್ ಪ್ರಕರಣವು ಮುನ್ನೆಲೆಗೆ ತಂದಿದೆ. ಈ ವಿಚಾರವು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ್ದಾಗಿದೆ ಎಂದು ಬಿಂಬಿಸಲಾಗಿದೆ. ಆದರೆ, ಜನರ ಖಾಸಗಿತನದ ಹಕ್ಕುಗಳ ಗಂಭೀರ ಉಲ್ಲಂಘನೆಯೇ ಇಲ್ಲಿ ಇರುವ ನಿಜವಾದ ವಿಚಾರವಾಗಿದೆ


ಪ್ರಜಾವಾಣಿ ಚರ್ಚೆ

ಪೆಗಾಸಸ್ ಗೂಢಚರ್ಯೆ ಪ್ರಕರಣವು ಕುತೂಹಲಕರ ತಿರುವು ಪಡೆದುಕೊಂಡಿದೆ!

ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಅಭಿವೃದ್ಧಿಪಡಿಸಿದ ಪೆಗಾಸಸ್ ಎಂಬ ಕುತಂತ್ರಾಂಶ ಬಳಸಿ ವಿರೋಧ ಪಕ್ಷಗಳ ರಾಜಕಾರಣಿಗಳು, ಪತ್ರಕರ್ತರು, ವಕೀಲರು ಮತ್ತು ಮಾನವ ಹಕ್ಕು ಕಾರ್ಯಕರ್ತರು ಸೇರಿ ಭಾರತದ 142ಕ್ಕೂ ಹೆಚ್ಚು ಜನರ ಮೇಲೆ ಬೇಹುಗಾರಿಕೆ ನಡೆಸಲಾಗಿದೆ ಎಂಬ ವರದಿಯು ಮಾಧ್ಯಮದಲ್ಲಿ ಪ್ರಕಟವಾದ ಬಳಿಕ ಪೆಗಾಸಸ್ ಪ್ರಕರಣವು ಬಯಲಾಯಿತು. ತಾನು ಅಭಿವೃದ್ಧಿಪಡಿಸಿದ ಕುತಂತ್ರಾಂಶವನ್ನು ಸರ್ಕಾರಗಳಿಗೆ ಮಾತ್ರ ಮಾರಾಟ ಮಾಡುವುದಾಗಿಯೂ ಅದು ಖಾಸಗಿ ಬಳಕೆಗೆ ಲಭ್ಯವಿಲ್ಲ ಎಂದೂ ಎನ್‌ಎಸ್‌ಒ ಗ್ರೂಪ್ ಹೇಳಿದೆ. ಪ್ರಕರಣವು ಬಯಲಿಗೆ ಬಂದ ಬಳಿಕ, ಹಿರಿಯ ಪತ್ರಕರ್ತರು ಸೇರಿ ಹಲವು ವ್ಯಕ್ತಿಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ; ಆರೋಪಗಳ ಬಗ್ಗೆ ವಿಶೇಷ ತನಿಖೆ ನಡೆಸಬೇಕು ಎಂದು ಕೋರಿದ್ದಾರೆ; ಈ ಕುತಂತ್ರಾಂಶದ ಪರವಾನಗಿಯನ್ನು ಪಡೆದುಕೊಳ್ಳಲಾಗಿದೆಯೇ, ಈ ಕುತಂತ್ರಾಂಶವನ್ನು ಯಾವುದೇ ವ್ಯಕ್ತಿಯ ಮೇಲೆ ನಿಗಾ ಇರಿಸಲು ಬಳಸಲಾಗಿದೆಯೇ ಎಂಬುದನ್ನು ಬಹಿರಂಗಪಡಿಸಲು ಸರ್ಕಾರಕ್ಕೆ ಸೂಚಿಸಬೇಕು ಎಂದು ಕೋರಲಾಗಿದೆ.

ಪೆಗಾಸಸ್ ಕುತಂತ್ರಾಂಶವನ್ನು ಖರೀದಿಸಲಾಗಿದೆಯೇ ಎಂಬ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಈಗ ಪ್ರಕರಣವು ವಿಚಿತ್ರ ತಿರುವು ಪಡೆದುಕೊಂಡಿದೆ. ಯಾವುದೇ ಹೆಚ್ಚಿನ ಮಾಹಿತಿಯನ್ನು ಸರ್ಕಾರವು ಬಹಿರಂಗಪಡಿಸುವುದಿಲ್ಲ, ಪ್ರಮಾಣಪತ್ರವನ್ನೂ ಸಲ್ಲಿಸುವುದಿಲ್ಲ ಎಂದು ಸಾಲಿಸಿಟರ್ ಜನರಲ್ ಹೇಳಿದ್ದಾರೆ. ಅಲ್ಲದೆ, ಸರ್ಕಾರವು ಗೂಢಚರ್ಯೆಗಾಗಿ ಯಾವ ತಂತ್ರಾಂಶ ಬಳಸಿದೆ ಎಂಬ ಮಾಹಿತಿಯನ್ನು ಬಹಿರಂಗಪಡಿಸುವುದು ದೇಶದ ಭದ್ರತೆಗೆ ಮಾರಕ ಎಂದು ಅವರು ವಾದಿಸಿದ್ದಾರೆ. ಕುತಂತ್ರಾಂಶ ಬಳಸಿ ಬೇಹುಗಾರಿಕೆ ನಡೆಸಿದ ಪ್ರಕರಣದ ಬಗ್ಗೆ ಪರಿಶೀಲನೆ ನಡೆಸಲು ಪರಿಣತರ ಸ್ವತಂತ್ರ ಸಮಿತಿ ರಚಿಸಬಹುದು ಎಂಬ ಸಲಹೆಯನ್ನೂ ಅವರು ಕೊಟ್ಟಿದ್ದಾರೆ. ರಾಷ್ಟ್ರೀಯ ಭದ್ರತೆಗೆ ಧಕ್ಕೆ ಉಂಟು ಮಾಡುವಂತಹ ಯಾವುದೇ ಮಾಹಿತಿಯನ್ನು ಕೇಳುತ್ತಿಲ್ಲ. ಬದಲಿಗೆ, ಬೇಹುಗಾರಿಕೆಗಾಗಿ ಕಾನೂನುಬದ್ಧವಲ್ಲದ ವಿಧಾನಗಳನ್ನು ಬಳಸಲಾಗಿದೆಯೇ ಎಂಬ ಮಾಹಿತಿಯಷ್ಟೇ ಬೇಕಾಗಿದೆ ಎಂದು ನ್ಯಾಯಾಲಯ ಹೇಳಿತ್ತು. ಈಗ, ಸರ್ಕಾರವು ಯಾವುದೇ ಪ್ರಮಾಣಪತ್ರ ಸಲ್ಲಿಸುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಹಾಗಾಗಿ, ಸುಪ್ರೀಂ ಕೋರ್ಟ್ ಸೂಕ್ತ ಆದೇಶವನ್ನು ನೀಡಬೇಕಿದೆ.

ಸಾರ್ವಜನಿಕ ಮಹತ್ವದ ಹಲವು ವಿಚಾರಗಳನ್ನು ಈ ಪ್ರಕರಣವು ಮುನ್ನೆಲೆಗೆ ತಂದಿದೆ. ಈ ವಿಚಾರವು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ್ದಾಗಿದೆ ಎಂದು ಬಿಂಬಿಸಲಾಗಿದೆ. ಆದರೆ,



ಜನರ ಖಾಸಗಿತನದ ಹಕ್ಕುಗಳ ಗಂಭೀರ ಉಲ್ಲಂಘನೆಯೇ ಇಲ್ಲಿ ಇರುವ ನಿಜವಾದ ವಿಚಾರವಾಗಿದೆ ಎಂಬುದು ನನ್ನ ವಾದವಾಗಿದೆ. ಪೆಗಾಸಸ್ ಕುತಂತ್ರಾಂಶವನ್ನು ವ್ಯಕ್ತಿಯೊಬ್ಬರ ಫೋನ್‌ಗೆ ಒಮ್ಮೆ ಸೇರಿಸಿಬಿಟ್ಟರೆ, ಬಳಿಕ ಅವರ ಸಂದೇಶಗಳು, ಕರೆಗಳು, ಫೋಟೊಗಳು, ಇ-ಮೇಲ್‌ಗಳು ಎಲ್ಲವನ್ನೂ ಪಡೆದುಕೊಳ್ಳಬಹುದು. ಕ್ಯಾಮೆರಾ ಅಥವಾ ಮೈಕ್ರೊಫೋನ್‌ಗೆ ರಹಸ್ಯವಾಗಿಯೇ ಚಾಲನೆ ಕೊಡಬಹುದು. ವಾಟ್ಸ್‌ಆ್ಯಪ್, ಸಿಗ್ನಲ್ ಮತ್ತು ಟೆಲಿಗ್ರಾಂನಂತಹ ಗೂಢಲಿಪಿಯಲ್ಲಿರುವ ಸಂದೇಶಗಳನ್ನೂ ಓದಬಹುದು. ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಯಾವುದೇ ಅಂಶವು ಈ ರೀತಿ ನಿಗಾ ಇರಿಸುವುದಕ್ಕೆ ಅವಕಾಶ ಕೊಡುವುದಿಲ್ಲ. ಭಾರತೀಯ ಟೆಲಿಗ್ರಾಫ್ ಕಾಯ್ದೆಯ ಸೆಕ್ಷನ್ 5 (2) ಮಾತ್ರ ಸಾರ್ವಜನಿಕ ತುರ್ತು ಸಂದರ್ಭದಲ್ಲಿ ಅಥವಾ ಸಾರ್ವಜನಿಕ ಸುರಕ್ಷತೆಗಾಗಿ ಮಾತ್ರ ರಾಷ್ಟ್ರೀಯ ಸುರಕ್ಷತೆಯ ದೃಷ್ಟಿಯಿಂದ ಸರ್ಕಾರವು ಆದೇಶ ಹೊರಡಿಸಿದ ಬಳಿಕ ದೂರವಾಣಿ ಕದ್ದಾಲಿಕೆ ಅಥವಾ ಬೇಹುಗಾರಿಕೆ ನಡೆಸಲು ಅವಕಾಶ ನೀಡುತ್ತದೆ. ಇಂತಹ ಸಂದರ್ಭವಲ್ಲದೇ ಇದ್ದರೆ, ಯಾವುದೇ ರೀತಿಯ ಗೂಢಚರ್ಯೆ ತಂತ್ರಾಂಶ ಬಳಕೆಯು ಗಂಭೀರವಾಗಿ ಕಾನೂನುಬಾಹಿರವಾದುದಾಗಿದೆ.

ಈಗಿನ ಪ್ರಕರಣದಲ್ಲಿ ಸರ್ಕಾರವು ಅಂತಹ ಯಾವುದೇ ಆದೇಶವನ್ನು ಹೊರಡಿಸಿಲ್ಲ; ಸೂಕ್ತ ಪ್ರಕ್ರಿಯೆಗಳನ್ನು ನಡೆಸದೆ ವ್ಯಕ್ತಿಗಳ ಮೇಲೆ ಬೇಹುಗಾರಿಕೆಗಾಗಿ ಪೆಗಾಸಸ್ ಕುತಂತ್ರಾಂಶ ಬಳಕೆಯು ಖಾಸಗಿತನದ ಹಕ್ಕಿನ ಸಂಪೂರ್ಣ ಉಲ್ಲಂಘನೆಯಾಗಿದೆ. ಖಾಸಗಿತನವು ಸಂವಿಧಾನವು ಕೊಟ್ಟಿರುವ ಮೂಲಭೂತ ಹಕ್ಕುಗಳ ಭಾಗ ಎಂದು ನ್ಯಾಯಮೂರ್ತಿ ಕೆ.ಎಸ್. ಪುಟ್ಟಸ್ವಾಮಿ ಮತ್ತು ಭಾರತ ಸರ್ಕಾರ ಹಾಗೂ ಇತರರು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಖಾಸಗಿತನದ ಹಕ್ಕಿನಲ್ಲಿ ಮಾಹಿತಿಯೂ ಸೇರುತ್ತದೆ. ಹೇಗೆ ಕಾಣಿಸಿಕೊಳ್ಳಬೇಕು ಮತ್ತು ಹೇಗೆ ದಿರಿಸು ಧರಿಸಬೇಕು ಎಂಬ ಆಯ್ಕೆಯ ರೀತಿಯಲ್ಲಿಯೇ ಒಬ್ಬ ವ್ಯಕ್ತಿಗೆ ಸಂಬಂಧಿಸಿದ ದತ್ತಾಂಶವು ಖಾಸಗಿಯಾದುದಾಗಿದೆ. ಸರ್ಕಾರವು ದೂರವಾಣಿ ಕದ್ದಾಲಿಕೆ ಮತ್ತು ಅಂತರ್ಜಾಲವನ್ನು ಹ್ಯಾಕ್ ಮಾಡುವುದು ಖಾಸಗಿತನದ ವ್ಯಾಪ್ತಿಯ ಒಳಗೇ ಬರುತ್ತದೆ. ಇಂತಹ ವೈಯಕ್ತಿಕ ಮಾಹಿತಿಯ ಅನಧಿಕೃತ ಬಳಕೆಯು ವ್ಯಕ್ತಿಯ ಖಾಸಗಿತನದ ಹಕ್ಕನ್ನು ಮೊಟಕುಗೊಳಿಸಿದಂತಾಗುತ್ತದೆ. ಇಂತಹ ಮೊಟಕುಗೊಳಿಸುವಿಕೆಯು ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯೂ ಹೌದು. ಏಕೆಂದರೆ, ಬೇಹುಗಾರಿಕೆ ನಡೆಸಲಾಗುತ್ತಿದೆ ಎಂಬುದು ಜನರಲ್ಲಿ ಭೀತಿ ಮೂಡಿಸಿ, ಅವರ ಮುಕ್ತ ಅಭಿವ್ಯಕ್ತಿಗೆ ಧಕ್ಕೆ ಉಂಟು ಮಾಡುತ್ತದೆ.

ವ್ಯಕ್ತಿಯ ಮನೆ ಅಥವಾ ಕಚೇರಿಯ ಖಾಸಗಿ ಸ್ಥಳದಲ್ಲಿ ಯಾವುದೇ ಹಸ್ತಕ್ಷೇಪ ಇಲ್ಲದೆ ದೂರವಾಣಿ ಮೂಲಕ ಸಂಭಾಷಣೆ ನಡೆಸುವುದು ಖಾಸಗಿತನದ ಹಕ್ಕಿನ ಅವಿಭಾಜ್ಯ ಅಂಗವಾಗಿದೆ. ಏಕೆಂದರೆ, ದೂರವಾಣಿಯ ಮೂಲಕ ನಡೆಸುವ ಸಂಭಾಷಣೆಯು ಸಾಮಾನ್ಯವಾಗಿ ಆತ್ಮೀಯವಾದುದು ಮತ್ತು ಗೋಪ್ಯ ಸ್ವರೂಪದ್ದು ಆಗಿರುತ್ತದೆ ಎಂದು ಪಿಯುಸಿಎಲ್ ಮತ್ತು ಕೇಂದ್ರ ಸರ್ಕಾರ ಹಾಗೂ ಇತರರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ದೂರವಾಣಿ ಕದ್ದಾಲಿಕೆಗೆ ಸಂಬಂಧಿಸಿ ಇದೊಂದು ಮಹತ್ವದ ಪ್ರಕರಣವಾಗಿತ್ತು.

ಕಾನೂನಿನ ಅನ್ವಯ ಸ್ಥಾಪಿಸಲಾದ ಪ್ರಕ್ರಿಯೆಗಳ ಅಡಿಯಲ್ಲಿ ಅನುಮೋದನೆ ಪಡೆದುಕೊಳ್ಳದೆಯೇ ದೂರವಾಣಿ ಕದ್ದಾಲಿಕೆ ಮಾಡುವುದು ಬದುಕುವ ಹಕ್ಕನ್ನು ಖಾತರಿಪಡಿಸುವ ಭಾರತದ ಸಂವಿಧಾನದ 21ನೇ ವಿಧಿಯ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಹಾಗೆಯೇ, ಸಂವಿಧಾನದ 19 (1) (ಎ) ವಿಧಿಯ ಅಡಿಯಲ್ಲಿನ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯದ ಹಕ್ಕುಗಳ ಉಲ್ಲಂಘನೆಯೂ ಆಗುತ್ತದೆ. ಯಾವುದೇ ಸಾರ್ವಜನಿಕ ತುರ್ತಿನ ಸಂದರ್ಭ ಇದ್ದಾಗ ಅಥವಾ ಸಾರ್ವಜನಿಕ ಸುರಕ್ಷತೆಯ ಪ್ರಶ್ನೆ ಇದ್ದಾಗ ಕೇಂದ್ರ ಸರ್ಕಾರದ ಗೃಹ ಕಾರ್ಯದರ್ಶಿ ಮತ್ತು ರಾಜ್ಯ ಸರ್ಕಾರಗಳ ಗೃಹ ಕಾರ್ಯದರ್ಶಿಯವರ ಆದೇಶದ ಮೂಲಕವಷ್ಟೇ ಕದ್ದಾಲಿಕೆಗೆ ಅವಕಾಶ ಲಭ್ಯವಾಗುತ್ತದೆ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ದೊಡ್ಡ ಸಂಖ್ಯೆಯಲ್ಲಿ ವ್ಯಕ್ತಿಗಳ ಮೇಲೆ ಬೇಹುಗಾರಿಕೆ ನಡೆಸಬೇಕಾದಂತಹ ಸಾರ್ವಜನಿಕ ತುರ್ತು ಅಥವಾ ಸಾರ್ವಜನಿಕ ಸುರಕ್ಷತೆಯ ವಿಚಾರ ಇದ್ದರೆ, ಅಗತ್ಯ ಕಾನೂನು ಪ್ರಕ್ರಿಯೆ ಮೂಲಕ ದೂರವಾಣಿ ಕದ್ದಾಲಿಕೆ ನಡೆಸಲು ಅವಕಾಶ ಇದೆ. ಹಾಗೆ ಮಾಡಿದ್ದಿದ್ದರೆ, ಅದನ್ನು ಪ್ರಮಾಣಪತ್ರದ ಮೂಲಕ ತಿಳಿಸುವುದಕ್ಕೆ ಸರ್ಕಾರಕ್ಕೆ ಯಾವ ಸಮಸ್ಯೆಯೂ ಇರುತ್ತಿರಲಿಲ್ಲ. ಇಂತಹ ಮಾಹಿತಿಯನ್ನು ಬಹಿರಂಗಪಡಿಸದೇ ಇರುವುದು ಮತ್ತು ತಡೆ ಹಿಡಿಯುವುದು ಕೂಡ ಜನರ ಸಾಂವಿಧಾನಿಕ ಹಕ್ಕುಗಳನ್ನು ಮೊಟಕುಗೊಳಿಸಿದಂತೆಯೇ ಆಗುತ್ತದೆ. ಜನರ ಖಾಸಗಿತನ ಮತ್ತು ವಾಕ್ ಸ್ವಾತಂತ್ರ್ಯದ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬುದು ಬಯಲಾದ ಬಳಿಕ ರಾಷ್ಟ್ರೀಯ ಭದ್ರತೆಯನ್ನು ಒಂದು ನೆಪವಾಗಿ ಮುಂದಕ್ಕೆ ತರಲಾಗಿದೆ.

ಲೇಖಕಿ: ಸುಪ್ರೀಂ ಕೋರ್ಟ್‌ನಲ್ಲಿ ಹಿರಿಯ ವಕೀಲೆ

ಸಚ್ಚಿದಾನಂದ ಸತ್ಯಸಂದೇಶ
ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಒಳ್ಳೆತನದಲ್ಲಿ ದೇವರಿದ್ದಾನೆ

ದೇವರು ಎಲ್ಲಿದ್ದಾನೆ?! ಈ ಪ್ರಶ್ನೆಗೆ ದೇವರು ಹುಟ್ಟಿದಾಗಿನಿಂದ ಭಕ್ತರು ಉತ್ತರ ಹುಡುಕುತ್ತಿದ್ದಾರೆ. ಆದರೆ ಯಾರಿಗೂ ಸ್ಪಷ್ಟ ಉತ್ತರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಉತ್ತರ ಕಂಡು ಹಿಡಿಯಲಾಗದ ಮನುಷ್ಯರು, ದೇವರು ಹೇಗಿದ್ದಾನೆ ಎಂಬ ಪ್ರಶ್ನೆ ಹಾಕಿಕೊಂಡು ತಲೆಗೊಂದು ಉತ್ತರ ಕೊಡುತ್ತಿದ್ದಾರೆ. ಹಲವರು ದೇವರಿಗೂ ಒಂದು ಆಕಾರ ಇದೆ ಎಂದರೆ, ಇನ್ನು ಕೆಲವರು ದೇವರಿಗೆ ಆಕಾರವೇ ಇಲ್ಲ ಅನ್ನುತ್ತಾರೆ. ಇನ್ನು ಹಲವರು ನಿಸರ್ಗವೇ ದೇವರು ಅಂದರೆ, ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಜನ ದೇವರೇ ಇಲ್ಲ, ಅವನ ಅಸ್ತಿತ್ವವೇ ಸುಳ್ಳು ಅಂತ ಉಢಾಳರಾಗಿರುವುದನ್ನು ರೂಢಿಸಿಕೊಂಡಿದ್ದಾರೆ. ಸಾವಿರಾರು ವರ್ಷಗಳ ಹಿಂದೆ ಭಾರತೀಯ ಸಂಸ್ಕೃತಿಯಲ್ಲಿ ಗೋಚರಿಸಿದ ಆಸ್ತಿಕ-ನಾಸ್ತಿಕ ವಾದಗಳು ಒಂದು ಆರೋಗ್ಯಕರ ಚರ್ಚೆಯನ್ನೆ ಹುಟ್ಟು ಹಾಕಿತು. ಇದರಿಂದ ಧಾರ್ಮಿಕದಾಚೆಗಿನ ಆಧ್ಯಾತ್ಮಿಕ ಚಿಂತನೆಗಳ ದೊಡ್ಡ ಝರಿಯೇ ಹರಿಯಿತು.


ಆತ್ಮ ಮತ್ತು ಪರಮಾತ್ಮಗಳ ನಡುವಿನ ವ್ಯತ್ಯಾಸಗಳನ್ನು ವಿಶ್ಲೇಷಿಸುತ್ತಾ ಹೋದಂತೆ ದೇವರೆಲ್ಲಿದ್ದಾನೆ? ಹೇಗಿದ್ದಾನೆ? ಎಂಬ ಆಸ್ತಿಕರ ಪ್ರಶ್ನೆಗೆ, ದೇವರೇ ಇಲ್ಲ ಅಂತ ಮೆದುಳಿಗೆ ಕೆಲಸವೇ ಕೊಡದ ನಾಸ್ತಿಕರ ಉಢಾಳತೆಗೆ ಉತ್ತರ ದೊರಕುತ್ತಾ ಹೋಯಿತು. ಅದು ಧರ್ಮಗುರುವಿನಿಂದ ಪಾಮರರಿಗೆ ಹಂಚುತ್ತಾ ಹೋದಂತೆ ಸೋರಿಕೆಯೂ ಆಯಿತು. ಜ್ಞಾನದ ಗಟ್ಟಿ ತಳದಲ್ಲೇ ಉಳಿದು, ಮೇಲಿನ ತಿಳಿಯಷ್ಟೆ ಜನರಿಗೆ ತಲುಪಿತು. ಇದರಿಂದ ಜನರಲ್ಲಿ ದೇವರು ಮತ್ತು ಧರ್ಮ ಅನ್ನೋ ವಿಚಾರದಲ್ಲಿ ವಿಕಾರವಾದ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು, ತಮ್ಮ ಗುರು ಹೇಳಿದ್ದೇ ಸರಿ ಅನ್ನೋ ವಿತಂಡವಾದಗಳು ಹೆಚ್ಚಾದವು. ಅವು ಮನುಷ್ಯ-ಮನುಷ್ಯರ ನಡುವೆ ಕಿತ್ತಾಟಕ್ಕೂ ಕಾರಣವಾಯಿತು.

ಇಷ್ಟಕ್ಕೂ ದೇವರೆಲ್ಲಿದ್ದಾನೆ?! ಈ ಮೊದಲ ಪ್ರಶ್ನೆಗೆ ಉತ್ತರ ಕೊಡುವುದಾದರೆ ಆತ ಎಲ್ಲೆಲ್ಲೂ ಇದ್ದಾನೆ. ನನ್ನೊಳಗೂ-ನಿಮ್ಮೊಳಗೂ ಎಲ್ಲರೊಳಗೂ ಇದ್ದಾನೆ. ನನ್ನೊಳಗಿನ ದೇವರಿಗೆ ನೀವು ಕೈಮುಗಿದರೆ, ನಿಮ್ಮೊಳಗಿನ ದೇವರು ಪ್ರಸನ್ನನಾಗುತ್ತಾನೆ. ಬೈದರೆ ಮುನಿಯುತ್ತಾನೆ. ಅರ್ಥಾತ್ ನಿಮ್ಮ ಮನಸ್ಸು ಅಶಾಂತವಾಗುತ್ತೆ. ಇದಕ್ಕೆ ಒಂದು ಸರಳ ಉದಾಹರಣೆ ಕೊಡುವುದಾದರೆ, ನೀವು ಒಬ್ಬ ವ್ಯಕ್ತಿಯನ್ನು ಗೌರವದಿಂದ ನಡೆಸಿಕೊಂಡರೆ ಪ್ರತಿಯಾಗಿ ಗೌರವವೇ ಸಿಗುತ್ತೆ. ನೀವು ಕೆಟ್ಟದ್ದಾಗಿ ವರ್ತಿಸಿದರೆ, ಅದರ ಪ್ರತಿಫಲವಾಗಿ ಕೆಟ್ಟದ್ದನ್ನೇ ಪಡೆಯುತ್ತೀರಿ. ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ನಿಸರ್ಗದ ನಿಯಮ. ಅದರಂತೆ ಒಳ್ಳೆಯ ಮನಸ್ಸಿನಿಂದ ದೇವರನ್ನು ಪೂಜಿಸಿದರೆ, ಒಳ್ಳೆಯದಾಗುತ್ತದೆ. ಕೆಟ್ಟ ಮನಸ್ಸಿನಿಂದ ಪ್ರಾರ್ಥಿಸಿದರೆ, ಕೆಟ್ಟದ್ದು ಆಗುತ್ತದೆ. ಅಂದರೆ ದೇವರು ಒಳ್ಳೆಯತನದಲ್ಲಿದ್ದಾನೆ ಎಂದಾಯಿತು. ಆ ಒಳ್ಳೆತನದ ರೂಪವನ್ನು ನಾವು ಕಟ್ಟಿಕೊಡಲು ಸಾಧ್ಯವಿಲ್ಲ, ಕಲ್ಪಿಸಿಕೊಡಬಹುದಷ್ಟೆ. ಹೀಗಾಗಿ ದೇವರ ಆಕಾರ-ನಿರಾಕಾರಗಳು ಅವರವರ ಕಲ್ಪನೆಯ ರೂಪದಲ್ಲಿವೆ.

ಮನುಷ್ಯನ ಮೃಗೀಯ ಸ್ವಭಾವವನ್ನು ಒಳ್ಳೆಯದಾಗಿ ಪರಿವರ್ತಿಸಲು ಧರ್ಮ ಹುಟ್ಟಿದೆ. ಮಾನವಧರ್ಮಕ್ಕೆ ದಾರಿದೀಪವಾಗಿ ಧರ್ಮಗ್ರಂಥಗಳು ಹುಟ್ಟಿವೆ. ಧರ್ಮ ಮತ್ತು ಧರ್ಮಗ್ರಂಥಗಳ ಸಹಾಯದಿಂದ ಒಳ್ಳೆತನದ ಸಂಕೇತವಾದ ದೇವರನ್ನು ಕಾಣಬಹುದಾಗಿದೆ. ಇಂಥ ಒಳ್ಳೆ ಬುದ್ಧಿಯನ್ನು ಬಿಟ್ಟು, ಧರ್ಮ ಮತ್ತು ದೇವರಲ್ಲಿ ಭಿನ್ನವೆಣಿಸಿದರೆ ನಮ್ಮ ಮನಸ್ಸು ಕೆಟ್ಟು ಮತ್ತೆ ಕ್ರೂರವಾಗುತ್ತೆ. ಒಳ್ಳೆಯದರಲ್ಲಿ ಕೆಟ್ಟದ್ದನ್ನು ಹೇಗೆ ಹುಡುಕಬಾರದೋ, ಹಾಗೇ ದೇವರಲ್ಲಿ ತಮ್ಮದು-ಪರರದು ಎಂಬ ಭೇದಭಾವ ಮಾಡಬಾರದು. ಒಳ್ಳೆಯದನ್ನು ಒಳ್ಳೆ ರೀತಿಯಲ್ಲಿ ನೋಡುವ, ಅನುಸರಿಸುವ ಗುಣವನ್ನು ಕಲಿಸುವುದೇ ಧರ್ಮ. ಆ ಧರ್ಮದಲ್ಲಿ ತಾರತಮ್ಯ ಮಾಡಿದರೆ ನಮ್ಮ ಮನಸ್ಸು ಕೆಡುತ್ತದೆ. ಅಂತ ಮಲೀನ ಮನಸ್ಸಿನಲ್ಲಿ ದೇವರು ಖಂಡಿತ ಉಳಿಯುವುದಿಲ್ಲ. ಎಲ್ಲವೂ ದೇವರದು, ಎಲ್ಲರೂ ನಮ್ಮಂತೆಯೇ ಅನ್ನೋ ಸದ್ಭಾವದಲ್ಲಿ ಮಾತ್ರ 'ಸಚ್ಚಿದಾನಂದ'ಪ್ರಭು ನೆಲೆಸಿರುತ್ತಾನೆ.

ಡಿಜಿಟಲ್ ಯುಗದಲ್ಲಿ ರಾಷ್ಟ್ರದ ಭದ್ರತೆಗೆ ಆದ್ಯತೆ

• ಡಾ.ಉದಯ ಶಂಕರ ಪುರಾಣಿಕ




ರಾಷ್ಟ್ರದ ಬಾಹ್ಯ ಮತ್ತು ಆಂತರಿಕ ಭದ್ರತೆಯ ದೃಷ್ಟಿಯಿಂದ ಬಳಸುವ ತಂತ್ರಜ್ಞಾನಗಳು, ತಂತ್ರಾಂಶಗಳು ಮತ್ತು ಕೆಲಸ ಮಾಡುವ ತಜ್ಞರು, ವಿಜ್ಞಾನಿಗಳ ವಿವರಗಳನ್ನು ಯಾವುದೇ ದೇಶ ಸಾರ್ವಜನಿಕವಾಗಿ ಬಹಿರಂಗಪಡಿಸುವುದಿಲ್ಲ. ವೈರಿ ದೇಶದ ಗೂಢಚಾರರು, ಅಪರಾಧಿಗಳು ಮತ್ತು ತೀವ್ರವಾದಿಗಳ ಮೇಲೆ ನಿಗಾ ಇಡಲು ಕೂಡಾ ಒಂದಲ್ಲ ಹಲವಾರು ತಂತ್ರಾಂಶಗಳನ್ನು ಮತ್ತು ತಂತ್ರಜ್ಞಾನಗಳನ್ನು ಬಳಸಬೇಕಾಗುತ್ತದೆ

ಪೆಗಾಸಸ್ ತಂತ್ರಾಂಶ ಬಳಸಿ ಭಾರತ ಸರ್ಕಾರ, ಕೋಟ್ಯಂತರ ಮೊಬೈಲ್ ಫೋನ್ ಬಳಕೆದಾರರ ದೂರವಾಣಿ ಕರೆಗಳನ್ನು ಕದ್ದಾಲಿಸುತ್ತಿದೆ; ಸಂದೇಶಗಳು, ಇ-ಮೇಲ್ ಮೊದಲಾದ ಮಾಹಿತಿಯನ್ನು ಅನಧಿಕೃತವಾಗಿ ಸಂಗ್ರಹಿಸುತ್ತಿದೆ ಮತ್ತು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎನ್ನುವುದು ತಾಂತ್ರಿಕವಾಗಿ ಸಾಧ್ಯವಿಲ್ಲ. ಏಕ ಕಾಲದಲ್ಲಿ ಕೋಟ್ಯಂತರ ಜನರ ದೂರವಾಣಿ ಕರೆ ಕದ್ದಾಲಿಕೆ, ಸಂದೇಶಗಳ ಸಂಗ್ರಹ, ವಿಶ್ಲೇಷಣೆ ಮಾಡುವ ಅತ್ಯಾಧುನಿಕ ವ್ಯವಸ್ಥೆ ಭಾರತದ ಮಾತಿರಲಿ, ಅಮೆರಿಕದಂತಹ ದೇಶದಲ್ಲಿ ಕೂಡಾ ಇಲ್ಲ. ಇಂತಹ ವ್ಯವಸ್ಥೆ ಸ್ಥಾಪಿಸಲು ಲಕ್ಷಾಂತರ ಕೋಟಿ ಡಾಲರ್ ಬೇಕಾಗುತ್ತದೆ ಮತ್ತು ಜನಸಾಮಾನ್ಯರಿಗೆ ಗೊತ್ತಾಗದಂತೆ ಅವರ ದೂರವಾಣಿ ಕರೆ ಕದ್ದು ಕೇಳುವ ಅಥವಾ ಮಾಹಿತಿ ಸಂಗ್ರಹಿಸುವ, ದುರ್ಬಳಕೆ ಮಾಡಿಕೊಳ್ಳುವ ಯಾವುದೇ ಸರ್ಕಾರದ ಯೋಜನೆಯಲ್ಲಿ ಹೆಸರಾಂತ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಭಾಗಿಯಾಗುವುದಿಲ್ಲ ಕೂಡಾ.

ಡಿಜಿಟಲ್ ಯುಗದಲ್ಲಿ ಮಾಹಿತಿ ಬಂಗಾರ ಎನ್ನುವ ಮಾತಿದೆ. ವಿಶ್ವದಾದ್ಯಂತ ಪ್ರತಿದಿನ 30,600 ಕೋಟಿ ಇ-ಮೇಲ್‌ಗಳನ್ನು ಕಳುಹಿಸಲಾಗುತ್ತಿದೆ. ಇ-ಮೇಲ್, ಎಸ್‌ಎಂಎಸ್, ಟ್ವಿಟರ್, ಫೇಸ್‌ಬುಕ್, ಸ್ಮಾರ್ಟ್ ಫೋನ್, ಡಿಜಿಟಲ್ ಕ್ಯಾಮೆರಾ, ಸಿಸಿಟಿವಿ ಕ್ಯಾಮೆರಾ ಹೀಗೆ ವಿವಿಧ ಮೂಲಗಳಿಂದ, ವಿಶ್ವದಾದ್ಯಂತ ಪ್ರತಿದಿನ, ಪ್ರತಿಕ್ಷಣ ಅಪಾರ ಪ್ರಮಾಣದ ಮಾಹಿತಿ ಸೃಷ್ಟಿಯಾಗುತ್ತಿದೆ. ಈ ಮಾಹಿತಿ ಮಹಾಪೂರದಲ್ಲಿ ಭಾರತದ ಕೊಡುಗೆ ಪ್ರತಿವರ್ಷ ಹೆಚ್ಚಾಗುತ್ತಿದೆ.

2025ರ ಹೊತ್ತಿಗೆ ವಿಶ್ವದಾದ್ಯಂತ ಮಾಹಿತಿ ಕಳವು ಮತ್ತು ದುರ್ಬಳಕೆಯಿಂದಾಗಿ ಪ್ರತಿವರ್ಷ ₹7,72,00,000 ಕೋಟಿ ನಷ್ಟವಾಗಲಿದೆ ಎಂದು ಮಾಹಿತಿ ಸುರಕ್ಷತೆಯಲ್ಲಿ ಹೆಸರು ಮಾಡಿರುವ ಅಂತರರಾಷ್ಟ್ರೀಯ ಸಂಸ್ಥೆಯೊಂದು ನಡೆಸಿರುವ ಸಮೀಕ್ಷಾ ವರದಿಯಲ್ಲಿ ತಿಳಿಸಲಾಗಿದೆ.



ಇನ್ನು ಸುಳ್ಳು ಸುದ್ದಿ, ಆಡಿಯೊ, ವಿಡಿಯೊಗಳನ್ನು ಸೃಷ್ಟಿಸಿ, ಜನಸಾಮಾನ್ಯರಲ್ಲಿ ಆತಂಕ, ದ್ವೇಷ ಸೃಷ್ಟಿಸುವ ಮತ್ತು ಕೋಮುವಾದ, ಹಿಂಸೆಗೆ ಪ್ರಚೋದಿಸುವ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಮತ್ತೊಂದು ಆತಂಕದ ವಿಷಯವಾಗಿದೆ. ಹಾಗಾದರೆ, ಇಂತಹ ಅಪರಾಧಗಳನ್ನು ಮಾಡುತ್ತಿರುವವರು ಯಾರು? ಸೈಬರ್ ಅಪರಾಧಿಗಳು, ಸೈಬರ್ ಅಪರಾಧಿಗಳ ಸಂಘಟನೆಗಳು ಮತ್ತು ಸೈಬರ್ ಭಯೋತ್ಪಾದಕರು. ಇವರಿಂದಾಗಿ, ವಿಶ್ವದಾದ್ಯಂತ ಪ್ರತಿ ಮೂರು ಕ್ಷಣಕ್ಕೆ ಒಂದು ಸೈಬರ್ ಅಪರಾಧ ಪ್ರಯತ್ನ ನಡೆಯುತ್ತಿದೆ. ಸೈಬರ್ ಭಯೋತ್ಪಾದಕರ ದಾಳಿಯಿಂದಾಗಿ ವಿದ್ಯುತ್ ಉತ್ಪಾದನೆ, ವಿತರಣೆ ವ್ಯವಸ್ಥೆಗಳು ಸ್ಥಗಿತಗೊಳ್ಳುವುದು, ಸರಕು ಸಾಗಾಣಿಕೆ ನೌಕೆಗಳು ದಾರಿ ತಪ್ಪುವುದು, ದೂರವಾಣಿ ಮತ್ತು ದೂರದರ್ಶನ ಸೇವೆ ವ್ಯತ್ಯಯವಾಗುವುದು, ಅಗತ್ಯ ವಸ್ತುಗಳ ಪೂರೈಕೆಯ ವ್ಯವಸ್ಥೆಯಲ್ಲಿ ಅಡಚಣೆಗಳಾಗುವುದು, ಹೀಗೆ ಹಲವಾರು ಘಟನೆಗಳು ವಿಶ್ವದಾದ್ಯಂತ ವರದಿಯಾಗುತ್ತಿವೆ.

ಭಾರತದ ರಾಷ್ಟ್ರೀಯ ಭದ್ರತಾ ನೀತಿಯಲ್ಲಿ ಪ್ರಜೆಗಳ ವೈಯಕ್ತಿಕ ಮಾಹಿತಿ, ವಾಣಿಜ್ಯ ಮತ್ತು ಆರ್ಥಿಕ ಮಾಹಿತಿ, ವಿಜ್ಞಾನ, ಸಂಶೋಧನೆ ಮತ್ತು ರಕ್ಷಣಾಪಡೆಗಳು, ಹೀಗೆ ವಿವಿಧ ರೀತಿಯ ಮಾಹಿತಿ ಸುರಕ್ಷತೆಗೆ ಮಹತ್ವ ನೀಡಲಾಗಿದೆ. ಸೈಬರ್ ಅಪರಾಧಗಳು ಮತ್ತು ಸೈಬರ್ ಭಯೋತ್ಪಾದನೆಯ ಪ್ರಯತ್ನಗಳನ್ನು ವಿಫಲಗೊಳಿಸಲು ಸ್ವಂತ ಪ್ರಯತ್ನದ ಜೊತೆಗೆ ಹಲವಾರು ದೇಶಗಳ ಜೊತೆ ಸಂಘಟಿತ ಪ್ರಯತ್ನವನ್ನು ಕೂಡಾ ಭಾರತ ಮಾಡುತ್ತಿದೆ.

ಮಾಹಿತಿ ಸುರಕ್ಷತೆಗೆ ಮತ್ತು ಸೈಬರ್ ಸುರಕ್ಷತೆಗೆ ಅಗತ್ಯವಾದ ಹಲವು ತಂತ್ರಜ್ಞಾನಗಳು, ಹಾರ್ಡ್‌ವೇರ್ ಮತ್ತು ತಂತ್ರಾಂಶಗಳನ್ನು ಭಾರತದಲ್ಲಿ ಅಭಿವೃದ್ಧಿ ಮಾಡುವ ಪ್ರಯತ್ನದ ಜೊತೆಗೆ ಈ ಕ್ಷೇತ್ರದಲ್ಲಿ ಹೆಸರು ಮಾಡಿರುವ ವಿದೇಶಿ ತಜ್ಞರು ಮತ್ತು ಸಂಸ್ಥೆಗಳ ನೆರವನ್ನು ಕೂಡಾ ಭಾರತ ಪಡೆಯುತ್ತಿದೆ. ವಿಶೇಷವಾಗಿ ಸೈಬರ್ ಅಪರಾಧಿಗಳು ಮತ್ತು ಭಯೋತ್ಪಾದಕರು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸುವ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ, ಸ್ವದೇಶಿ ಸಾಮರ್ಥ್ಯ ವೃದ್ಧಿಯ ಜೊತೆಗೆ ವಿದೇಶಿ ನೆರವು ಪಡೆಯುವುದು ಭಾರತಕ್ಕೆ ಅನಿವಾರ್ಯವಾಗಿದೆ.

ಭೂಗಡಿ, ಕರಾವಳಿ ಗಡಿ ರಕ್ಷಣೆಯಂತೆ ಬಾಹ್ಯಾಕಾಶದಲ್ಲಿರುವ ಉಪಗ್ರಹಗಳ ರಕ್ಷಣೆ ಕ್ಷೇತ್ರದಲ್ಲಿ ಕೂಡಾ ವಿವಿಧ ಸುರಕ್ಷತಾ ತಂತ್ರಜ್ಞಾನಗಳು, ತಂತ್ರಾಂಶಗಳನ್ನು ಭಾರತ ಬಳಸುತ್ತಿದೆ. ಸಮುದ್ರದ ಆಳದಲ್ಲಿ ಸದ್ದಿಲ್ಲದಂತೆ ಸಂಚರಿಸುವ ಮಾನವ ರಹಿತ ನೌಕೆಗಳನ್ನು ಬಳಸಿ ಯಾವುದೇ ದೇಶದ ಮೇಲೆ ಗೂಢಚರ್ಯೆ ನಡೆಸುವ ಪ್ರಯತ್ನಗಳು ನಡೆಯುತ್ತಿವೆ ಎನ್ನುವುದನ್ನು ಇಲ್ಲಿ ಗಮನಿಸಬೇಕು.

ರಾಷ್ಟ್ರದ ಬಾಹ್ಯ ಮತ್ತು ಆಂತರಿಕ ಭದ್ರತೆಯ ದೃಷ್ಟಿಯಿಂದ ಬಳಸುವ ತಂತ್ರಜ್ಞಾನಗಳು, ತಂತ್ರಾಂಶಗಳು ಮತ್ತು ಕೆಲಸ ಮಾಡುವ ತಜ್ಞರು, ವಿಜ್ಞಾನಿಗಳ ವಿವರಗಳನ್ನು ಯಾವುದೇ ದೇಶ ಸಾರ್ವಜನಿಕವಾಗಿ ಬಹಿರಂಗಪಡಿಸುವುದಿಲ್ಲ. ಒಂದು ಸಂಸ್ಥೆಯ ತಂತ್ರಾಂಶವನ್ನು ಬಳಸಿ, ಕೋಟ್ಯಾಂತರ ಪ್ರಜೆಗಳ ವೈಯಕ್ತಿಕ ಮಾಹಿತಿ ಮತ್ತು ಡಿಜಿಟಲ್ ಮಾಹಿತಿಯನ್ನು ಪಡೆದು ಕೊಳ್ಳುವುದು ಮತ್ತು ದುರ್ಬಳಕೆ ಮಾಡಿಕೊಳ್ಳುವುದು ಸಾಧ್ಯವಾಗಿದ್ದರೆ, ಅನೇಕ ದೇಶಗಳು ಈ ಉದ್ದೇಶಕ್ಕಾಗಿ ಇಂತಹ ತಂತ್ರಾಂಶವನ್ನು ಬಳಸುತ್ತಿದ್ದವು. ವೈರಿ ದೇಶದ ಗೂಢಚಾರರು, ಅಪರಾಧಿಗಳು ಮತ್ತು ತೀವ್ರವಾದಿಗಳ ಮೇಲೆ ನಿಗಾ ಇಡಲು ಕೂಡಾ ಒಂದಲ್ಲ ಹಲವಾರು ತಂತ್ರಾಂಶಗಳನ್ನು ಮತ್ತು ತಂತ್ರಜ್ಞಾನಗಳನ್ನು ಬಳಸಬೇಕಾಗುತ್ತದೆ.

ಇನ್ನು ಸರ್ಕಾರಕ್ಕೆ ಮಾತ್ರ ತಮ್ಮ ತಂತ್ರಾಂಶ ಮತ್ತು ತಂತ್ರಜ್ಞಾನವನ್ನು ಬಳಸಲು ಅನುಮತಿ ನೀಡುತ್ತೇವೆ ಎನ್ನುವ ಸಂಸ್ಥೆಗಳು, ಬಳಸಲು ಪರವಾನಗಿ ಮಾತ್ರ ನೀಡುತ್ತವೆ. ಸರ್ಕಾರದ ಅಧಿಕಾರಿಗಳಿಗೆ ಇಂತಹ ತಂತ್ರಜ್ಞಾನ ಅಥವಾ ತಂತ್ರಾಂಶದಲ್ಲಿ ಸಣ್ಣ ಬದಲಾವಣೆಯನ್ನು ಮಾಡಲು ಅವಕಾಶವಿರುವುದಿಲ್ಲ; ಒಂದು ವೇಳೆ ಈ ತಂತ್ರಾಂಶ ಅಥವಾ ತಂತ್ರಜ್ಞಾನ ಬಳಕೆಯನ್ನು ಮೂಲ ಉದ್ದೇಶದ ಹೊರತಾಗಿ ಬೇರೆ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ ಎಂದು ಗೊತ್ತಾದಾಗ, ಬಳಸಲು ನೀಡಿರುವ ಪರವಾನಗಿ ರದ್ದು ಮಾಡುವುದರ ಜೊತೆಗೆ ಸರ್ಕಾರದಿಂದ ಸಾವಿರಾರು ಕೋಟಿ ಡಾಲರ್ ಪರಿಹಾರವನ್ನು ಕೂಡಾ ಇಂತಹ ಸಂಸ್ಥೆಗಳು ಕೇಳಬಹುದು.

ಮಾಹಿತಿ ಸುರಕ್ಷತೆ, ಸೈಬರ್ ಸುರಕ್ಷತೆ ಮತ್ತು ಸೈಬರ್ ಭಯೋತ್ಪಾದನೆ ವಿರುದ್ಧ ಹೋರಾಟದಲ್ಲಿ ಜನಸಾಮಾನ್ಯರು ಮಹತ್ವದ ಪಾತ್ರ ವಹಿಸಬೇಕಾಗಿದೆ. ಉದಾಹರಣೆಗೆ, ಸಾವಿರಾರು ರೂಪಾಯಿ ಕೊಟ್ಟು ಖರೀದಿಸುವ ಮೊಬೈಲ್ ಫೋನ್ ಹೇಗೆ ಸುರಕ್ಷಿತವಾಗಿ ಬಳಸಬೇಕು ಎಂದು ಹೆಚ್ಚು ಜನರಿಗೆ ಗೊತ್ತಿರುವುದಿಲ್ಲ. ಈಗಿನ ವರ್ಕ್ ಫ್ರಮ್ ಹೋಮ್, ಲರ್ನ್ ಫ್ರಮ್ ಹೋಮ್ ಪರಿಸ್ಥಿತಿಯಲ್ಲಿ ಮನೆಯಲ್ಲಿ ಬಳಸುವ ಇಂಟರ್‌ನೆಟ್, ಕಂಪ್ಯೂಟರ್, ಮೊಬೈಲ್ ಫೋನ್‌ಗಳ ಸುರಕ್ಷಿತ ಬಳಕೆ ಕುರಿತು ಹೆಚ್ಚು ಜಾಗೃತಿ ಅಗತ್ಯವಿದೆ. ಸಾಮಾಜಿಕ ಜಾಲತಾಣಗಳಲ್ಲಿ ನಮ್ಮ ಹೆಸರಿನಲ್ಲಿ ನಕಲಿ ಖಾತೆ ತೆರೆದು ವಂಚಿಸುತ್ತಿದ್ದಾರೆ ಎಂದು ಗಾಬರಿಯಾಗುವ ನಾವು, ಈ ಕುರಿತು ಸೈಬರ್ ಪೋಲಿಸರಿಗೆ ದೂರು ನೀಡುವುದು ಕಡಿಮೆ.


ಸೈಬರ್ ಭಯೋತ್ಪಾದನೆ, ಮಾಹಿತಿ ತಂತ್ರಜ್ಞಾನ ಪರಿಣತರನ್ನು ಒಳಗೊಂಡ ಉಗ್ರವಾದಿ ಸಂಘಟನೆಗಳು ಮತ್ತು ಅಪರಾಧಿ ಮಾಫಿಯಾದ ಅಪಾಯವನ್ನು ಎದುರಿಸಲು ಈಗ ಭಾರತದಲ್ಲಿರುವ ಸೈಬರ್ ಕಾನೂನುಗಳ ಪರಿಷ್ಕರಣೆ ಅಗತ್ಯ. ಹೀಗೆ ಮಾಡುವಾಗ, ಜನಸಾಮಾನ್ಯರ ವೈಯಕ್ತಿಕ ಮಾಹಿತಿ ಸುರಕ್ಷತೆ ಕುರಿತು ಇರುವ ಆತಂಕಗಳಿಗೂ ಪರಿಹಾರ ನೀಡಬಹುದು. ಮಾಹಿತಿ ಸುರಕ್ಷತೆ, ಸೈಬರ್ ಸುರಕ್ಷತೆಯ ವಿಷಯದಲ್ಲಿ ಜನಸಾಮಾನ್ಯರು ಕೂಡಾ ಸರ್ಕಾರದ ಜೊತೆಯಲ್ಲಿ ಕೈಜೋಡಿಸುವುದು ಅತ್ಯಗತ್ಯವಿದೆ.

ಲೇಖಕ: ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಮತ್ತು ಸೈಬರ್ ಸುರಕ್ಷತೆ ತಜ್ಞ

ಪದಬಂಧ 4722
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇವ ಪೂಜಾ ತಂತ್ರವನ್ನು ತಿಳಿಸುವ ಶಾಸ್ತ್ರ (3)
3.ತಾರೀಕು ಇಲ್ಲಿ ನಮೂದಾಗಿದೆ(3)
4.ಬಿಡದಿ ಹತ್ತಿರವಿರುವ ಹೆಂಡತಿ (3)
6.ಕ್ರೀಡೆಗೊಂದು ಪರ್ಯಾಯ ಪದ (2)
7.ವನದಲ್ಲಿ ತಿರುಗಿದರೆ ಹೊಸದು ಕಂಡೀತು! (2)
9.ಹಾವು ವಾಸ ಮಾಡುವ ಸ್ಥಳ (2)
13.ಈತ ಮದುವೆಯಾಗುತ್ತಿರುವ ಗಂಡು (2)
14.ಬಾಗಿಲಿಗೆ ಹಾಕುವ ಕೊಂಡಿ (3)
15.ಜೋಪಾನ ಎಂದು ಹೀಗೆನ್ನಿ(3)
16.ಇದೊಂದು ಚರ್ಮವಾದ್ಯ (3)

ಮೇಲಿಂದ ಕೆಳಕ್ಕೆ
1.ಆಳು ಹೊಡೆದುಕೊಂಡು ಬಂದಿರುವ ಹಸು (3)
2.ಮಾತೆ ತೋರುವ ಪ್ರೀತಿ (3)
3.ದಿಟ್ಟತನದಿಂದ ನುಡಿದ ಸತ್ಯ (2)
5.ಇಪ್ಪತ್ನಾಲ್ಕು ಗಂಟೆಗಳ ಕಾಲ (2)
6.ಉದ್ದವಾದ ತೋಳು (5)
8.ಬಣ್ಣಗುಂದುವಿಕೆಯನ್ನು ಹೀಗೆನ್ನಿ (5)
10.ಮನಸ್ಸು ಇಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)
11.ಮುದ್ರೆ ಒತ್ತುವುದು (3)
12.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
13.ವರ್ತಮಾನದಲ್ಲೇ ಅರಣ್ಯವನ್ನು ನೋಡಿ! (2)



4721ನೇ ಪದಬಂಧದ ಉತ್ತರ
ಎಡದಿಂದ ಬಲಕ್ಕೆ:
1.ಅಲೆಮಾರಿ
3.ಆಘ್ರಾಣಿಸು5.ದಿವ್ಯ
7.ತಿಕ್ಕಲ8.ಹಂತ9.ಸತ್ವ
10.ಅಸುರ12.ಕರ
14.ಯಮಸುತ15.ಪರಸ್ಪರ
ಮೇಲಿಂದ ಕೆಳಕ್ಕೆ:
1.ಅಷ್ಟಪದಿ
2.ರಿಯಾಯಿತಿ
3.ಆದುಂಬೊಲ
4.ಸುರಕ್ಷಿತ6.ವ್ಯಕ್ತಿತ್ವ
8.ಹಂತಕ9.ಸಮುದಾಯ
10.ಅನುಚಿತ
11.ರಜನಿಪ13.ರತ್ನಾಕರ

ಸುಡೊಕು 5108

			8		1	9		
								1
3		1	2		9		5	
	1	7			8	3		
				2			8	4
8		3	9				6	
1			7		2	4		3
		8		4			1	
	3		1		5			8

5107 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕೆಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿನೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕೆಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ
ಶನಿವಾರ ಸೆಪ್ಟೆಂಬರ್ 18, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ದ್ವಾದಶಿ ಗಂ. 1-6 (ಬೆ. 6-41) ಉಪರಿ ತ್ರಯೋದಶಿ ಗಂ. 57-17 (ಬೆ.ಝಾ. 5-36) ಶನಿವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 54-39 (ರಾ. 4-06) ಸುಕರ್ಮ ನಾಮ ಯೋಗ ಗಂ. 34-54 ಬಾಲವ ಕರಣ ಗಂ. 1-6 ಉಪರಿ ಕೌಲವ ಕರಣ ಗಂ. 28-38 ವಿಷ ಗಂ. 5-45 ಅಮೃತ ಗಂ 29-23: ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 9

ಮೇಷ: ಕೆಲಸ–ಕಾರ್ಯಗಳಲ್ಲಿ ಸಹೋದರರಿಂದ ಸಹಕಾರ. ಸಂಸಾರದಲ್ಲಿ ಕಿರಿಕಿರಿ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ. ವಸ್ತ್ರಾಭರಣ ಖರೀದಿ ಮಾಡಲಿದ್ದೀರಿ. ಆರೋಗ್ಯದ ಬಗ್ಗೆ ನಿಗಾ ಇರಲಿ.

ವೃಷಭ: ಸಹೋದ್ಯೋಗಿಗಳೊಂದಿಗೆ ವಿನಾಕಾರಣ ಮನಸ್ತಾಪ. ಮಹಿಳೆಯರಿಂದ ಸಂಪೂರ್ಣ ಸಹಕಾರ ಸಿಗಲಿದೆ. ವಿಶೇಷ ವಸ್ತುಗಳ ಖರೀದಿಯ ಸಾಧ್ಯತೆ. ವೃತ್ತಿಯಲ್ಲಿನ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಿಕೊಳ್ಳುವಿರಿ.

ಮಿಥುನ: ವೃತ್ತಿಯಲ್ಲಿ ಅಮಿತವಾದ ಒತ್ತಡ ಉಂಟಾಗಲಿದ್ದು ತಾಳ್ಮೆಯಿಂದ ವ್ಯವಹರಿಸಿ. ಆಸ್ತಿ ಖರೀದಿ ವ್ಯವಹಾರವನ್ನು ಮುಂದೂಡುವುದು ಸೂಕ್ತ. ಬಂಧುಗಳಿಂದ ಸಕಾಲಿಕ ಸಲಹೆ ನೆರವು ದೊರೆಯಲಿದೆ.

ಕರ್ಕಾಟಕ: ಶ್ರದ್ಧೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಬಂಧುಗಳೊಂದಿಗಿನ ಸಂಬಂಧ ಗಟ್ಟಿಗೊಳ್ಳಲಿದೆ. ಬಹುಕಾಲದ ಬಯಕೆಗಳು ಈಡೇರುವ ಸಾಧ್ಯತೆ. ದೂರ ಪ್ರಯಾಣವೊಂದಕ್ಕೆ ಸಂಕಲ್ಪ.

ಸಿಂಹ: ಕೃಷಿ ಚಟುವಟಿಕೆಗಳನ್ನು ನಡೆಸುವ ಬಗ್ಗೆ ಮನೆಯವರೊಂದಿಗೆ ಚರ್ಚೆ ನಡೆಸಲಿದ್ದೀರಿ. ಯಂತ್ರೋಪಕರಣಗಳ ಸುಸ್ಥಿತಿಯಿಂದಾಗಿ ಯಾಂತ್ರೀಕೃತ ಕೆಲಸಗಳು ಸುಗಮವಾಗುವವು. ಆತ್ಮೀಯರ ಆಗಮನ.

ಕನ್ಯಾ: ಸಾಮಾಜಿಕ ಸೇವೆಯಿಂದಾಗಿ ಜನಪ್ರಿಯತೆ. ದಾಂಪತ್ಯ ಜೀವನವು ಸುಖಮಯವಾಗಲಿದೆ. ಆಕಸ್ಮಿಕ ಪ್ರಯಾಣವೊಂದು ನಿರ್ಧರಿಸಲ್ಪಡಬಹುದು. ಮನೆಯಲ್ಲಿ ಸಂತಸವಿರುವುದು.

ತುಲಾ: ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ. ಹಣಕಾಸು ವ್ಯವಹಾರದಲ್ಲಿ ಎಚ್ಚರಿಕೆಯಿಂದಿರಬೇಕಾದ ಅನಿವಾರ್ಯ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಯಶಸ್ಸು.

ವೃಶ್ಚಿಕ: ಮಹಿಳೆಯರಿಗೆ ಮಾನಸಿಕ ಇಷ್ಟಾರ್ಥಗಳು ನೆರವೇರಲಿವೆ. ಹಮ್ಮಿಕೊಂಡಿರುವ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಅನಿರೀಕ್ಷಿತ ಧನಾಗಮನ. ಕುಟುಂಬದವರೊಂದಿಗೆ ಧಾರ್ಮಿಕ ಕ್ಷೇತ್ರ ದರ್ಶನ.

ಧನು: ಸಮಾಜಮುಖಿಯಾದ ಉತ್ತಮ ಕೆಲಸಗಳನ್ನು ಮಾಡಲಿದ್ದೀರಿ. ಸಂಗಾತಿಯಿಂದ ಸಹಕಾರ ದೊರೆಯುವುದರ ಜೊತೆಗೆ ಸಾಮಾಜಿಕ ಗೌರವಾದರಗಳು ಪ್ರಾಪ್ತವಾಗಲಿವೆ.

ಮಕರ: ಹೆಚ್ಚಿನ ಕೆಲಸದ ಒತ್ತಡದಿಂದಾಗಿ ಮಾನಸಿಕ ಹಿಡಿತ ತಪ್ಪದಂತೆ ತಾಳ್ಮೆ ವಹಿಸುವುದು ಅಗತ್ಯ. ಹೊಸ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ. ರಾಜಕೀಯದಲ್ಲಿ ಯಶಸ್ಸು.

ಕುಂಭ: ಸ್ವಂತ ಉದ್ಯಮದಲ್ಲಿರುವವರಿಗೆ ಸ್ಪರ್ಧೆಗಳು ಎದುರಾದರೂ ಅನುಕೂಲ. ಹಿರಿಯರ ಆರೋಗ್ಯದಲ್ಲಿ ಸುಧಾರಣೆ. ದುಡುಕಿನಿಂದಾಗಿ ವಿನಾ ಕಾರಣ ಸಹವರ್ತಿಗಳೊಂದಿಗೆ ಮನಸ್ತಾಪ.

ಮೀನ: ನಿರುದ್ಯೋಗಿಗಳಿಗೆ ಉದ್ಯೋಗದ ಬಾಗಿಲು ತೆರೆಯಲಿದೆ. ಸರ್ಕಾರದ ಉನ್ನತ ಹುದ್ದೆಯಲ್ಲಿರುವವರಿಗೆ ಬಿಡುವಿಲ್ಲದ ಕಾರ್ಯಕ್ರಮ. ರಾಜಕಾರಣಿಗಳಿಂದ ಕಿರಿಕಿರಿ. ಬರವಣಿಗೆಯಿಂದ ಕೀರ್ತಿಲಾಭ.

ನಿಮ್ಮ ಜನ್ಮದಿನ 18-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ಹೊಸ ಆರ್ಥಿಕ ಸಂಪನ್ಮೂಲಗಳು ಗೋಚರವಾಗುವವು. ಸಂಗಾತಿಯ ಕಡೆಯಿಂದಲೂ ಆಸ್ತಿ ಲಾಭವಾಗುವ ಸಾಧ್ಯತೆ. ಪಿತ್ರಾರ್ಜಿತ ಆಸ್ತಿಯಿಂದ ಧನಾಗಮ. ಭೂ ಖರೀದಿ ವ್ಯವಹಾರದಲ್ಲಿ ತೊಡಗಿದವರಿಗೆ ಉತ್ತಮ ಲಾಭ. ಉದ್ಯೋಗ ನಿಮಿತ್ತ ದೂರದ ಊರುಗಳಿಗೆ ವಲಸೆ ಹೋಗಬೇಕಾದೀತು.

ಖಾಸಗಿ ಮಸೂದೆ ಸಂವಿಧಾನಬಾಹಿರ ಎಂದ ಅಡ್ವೊಕೇಟ್ ಜನರಲ್

ಸರ್ಕಾರಿ ಶಾಲೆ ಕಡ್ಡಾಯ ಅಸಾಧ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಯಲ್ಲಿ ಓದಿಸುವುದನ್ನು ಕಡ್ಡಾಯಗೊಳಿಸಲು 'ಕರ್ನಾಟಕ ಶಿಕ್ಷಣ ಕಾಯ್ದೆ–1983'ಕ್ಕೆ ತಿದ್ದುಪಡಿ ತರಲು ಖಾಸಗಿ ಮಸೂದೆ ಮಂಡಿಸಲು ವಿಧಾನ ಪರಿಷತ್ ಸದಸ್ಯ ಜಿ. ರಘು ಆಚಾರ್ ಸಲ್ಲಿಸಿದ್ದ ಪ್ರಸ್ತಾವ‌ವನ್ನು ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ ಮುಕ್ತಾಯಗೊಳಿಸಿದೆ.

ಸಮಿತಿಯ ಅಧ್ಯಕ್ಷರೂ ಆಗಿರುವ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ತಮ್ಮ ವರದಿಯಲ್ಲಿ ಈ ಕುರಿತು ಸದನಕ್ಕೆ ಮಾಹಿತಿ ನೀಡಿದರು. 'ಶಿಕ್ಷಣದ ಕುರಿತು ಈ ರೀತಿ ಕಾಯ್ದೆ ರೂಪಿಸುವುದು ಸಂವಿಧಾನಬಾಹಿರ ನಡೆಯಾಗುತ್ತದೆ' ಎಂದು ಅಡ್ವೊಕೇಟ್ ಜನರಲ್ ಅಭಿಪ್ರಾಯ ನೀಡಿದ್ದಾರೆ. ಅದನ್ನು ಆಧರಿಸಿ ತೀರ್ಮಾನ ಕೈಗೊಂಡಿರುವ ಸಮಿತಿ, 'ಈ ಮಸೂದೆಯನ್ನು ಮಂಡಿಸುವುದು ನ್ಯಾಯಸಮ್ಮತವಲ್ಲ' ಎಂದು ಹೇಳಿದೆ.

'ಸಾರ್ವಜನಿಕ ನೌಕರ' ಎಂದರೆ ಸರ್ಕಾರಿ ನೌಕರರ ಜತೆಗೆ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರಿಂದ ಗ್ರಾಮ ಪಂಚಾಯಿತಿ ಸದಸ್ಯರವರೆಗೆ ಎಲ್ಲರೂ ಸೇರುತ್ತಾರೆ. ಹಾಲಿ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿಯೂ ಈ ವ್ಯಾಪ್ತಿಗೆ ಬರುತ್ತಾರೆ ಎಂದು ಅಡ್ವೊಕೇಟ್ ಜನರಲ್ ಹೇಳಿದ್ದರು.

'ಸಾರ್ವಜನಿಕ ನೌಕರರ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಯಲ್ಲಿ ಓದಬೇಕು ಎಂದು ಕಾನೂನಿಗೆ ತಿದ್ದುಪಡಿ ತರಬೇಕೆಂಬ ಪ್ರಸ್ತಾವದ ಕುರಿತು ಸಮಿತಿಯು ಅಡ್ವೊಕೇಟ್ ಜನರಲ್ ಹಾಗೂ ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಂದ ಅಭಿಪ್ರಾಯ ಪಡೆದಿದೆ. ಈ ರೀತಿಯ ತಿದ್ದುಪಡಿಯು ಸಂವಿಧಾನದಲ್ಲಿ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಜೀವಿಸುವ ಹಕ್ಕುಗಳಿಗೆ ವಿರುದ್ಧವಾದುದು ಎಂಬ ಅಭಿಪ್ರಾಯವನ್ನು ಅಡ್ವೊಕೇಟ್ ಜನರಲ್ ನೀಡಿದ್ದಾರೆ' ಎಂಬ ಉಲ್ಲೇಖ ಸಮಿತಿಯ ವರದಿಯಲ್ಲಿದೆ.

ಸುಪ್ರೀಂಕೋರ್ಟ್ ನೀಡಿರುವ ತೀರ್ಪುಗಳನ್ನೂ ಸಮಿತಿ ಅಧ್ಯಯನ ಮಾಡಿದೆ. 'ಸರ್ಕಾರಿ ನೌಕರರ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಯಲ್ಲೇ ಪ್ರವೇಶ ಪಡೆಯಬೇಕು ಎಂಬುದು ಸಂವಿಧಾನ ಬಾಹಿರ ತೀರ್ಮಾನವಾಗುತ್ತದೆ' ಎಂದು ನ್ಯಾಯಾಲಯ ಹೇಳಿರುವುದನ್ನು ಗಮನಿಸಲಾಗಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಕಾರ್ಯದರ್ಶಿಯವರ ಇದೇ ರೀತಿಯ ಅಭಿಪ್ರಾಯ ನೀಡಿದ್ದರು ಎಂದು ವರದಿಯಲ್ಲಿ ತಿಳಿಸಲಾಗಿದೆ.

'ಈ ತಿದ್ದುಪಡಿ ಮಸೂದೆಯು ಸಂವಿಧಾನದ ಉಲ್ಲಂಘನೆಯಾಗುತ್ತದೆ. ಮೂಲಭೂತ ಹಕ್ಕಿಗೆ ವಿರುದ್ಧವಾದ ಅಂಶಗಳನ್ನೂ ಒಳಗೊಂಡಿದೆ. ಸಂವಿಧಾನದ 19 ಮತ್ತು 21ನೇ ವಿಧಿಗಳಿಗೆ ವಿರುದ್ಧವಾಗಿರುವ ಈ ಖಾಸಗಿ ಮಸೂದೆಯನ್ನು ಮಂಡಿಸುವುದು ಕಾನೂನು ಸಮ್ಮತವಾಗುವುದಿಲ್ಲ' ಎಂಬ ಅಭಿಪ್ರಾಯಕ್ಕೆ ಬಂದಿರುವ ಸಮಿತಿ, ಪ್ರಸ್ತಾವವನ್ನು ಮುಕ್ತಾಯಗೊಳಿಸಿದೆ.

ಶಿಕ್ಷಣ ಕಾಯ್ದೆಗೆ ತಿದ್ದುಪಡಿ ತರುವುದಕ್ಕೆ ಪೂರಕವಾಗಿ ಖಾಸಗಿ ಮಸೂದೆ ಮಂಡಿಸಲು ಅವಕಾಶ ಕೋರಿ ರಘು ಆಚಾರ್ 2020ರ ಸೆಪ್ಟೆಂಬರ್ 8ರಂದು ಪ್ರಸ್ತಾವ ಸಲ್ಲಿಸಿದ್ದರು.

'ಯಡಿಯೂರಪ್ಪ ಇನ್ನೊಬ್ಬ ಉಕ್ಕಿನ ಮನುಷ್ಯ'

ಕಲಬುರ್ಗಿ: 'ಹೈದರಾಬಾದ್ ಕರ್ನಾಟಕದ ವಿಮೋಚನೆಗೆ ಕಾರಣರಾದ ಸರ್ದಾರ್ ವಲ್ಲಭಭಾಯಿ ಪಟೇಲರು ಪ್ರಥಮ ಉಕ್ಕಿನ ಮನುಷ್ಯರಾದರೆ, ಈ ಭಾಗಕ್ಕೆ ಕಲ್ಯಾಣ ಕರ್ನಾಟಕ ಎಂದು ನಾಮಕರಣ ಮಾಡಿದ ಬಿ.ಎಸ್. ಯಡಿಯೂರಪ್ಪ ಇನ್ನೊಬ್ಬ ಉಕ್ಕಿನ ಮನುಷ್ಯ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

ಶುಕ್ರವಾರ ಇಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯಲ್ಲಿ ಪಾಲ್ಗೊಂಡು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.



ಪರಿಷತ್‌ನಲ್ಲಿ ಚರ್ಚೆ... ವಿಧಾನಪರಿಷತ್‌ನಲ್ಲಿ ಶುಕ್ರವಾರ ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿದರು. ಸಚಿವರಾದ ಕೆ.ಎಸ್. ಈಶ್ವರಪ್ಪ, ಕೋಟ ಶ್ರೀನಿವಾಸ ಪೂಜಾರಿ, ಸದಸ್ಯರಾದ ಆಯನೂರು ಮಂಜುನಾಥ್ ಇದ್ದರು

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ

ಅನುದಾನ ಬಳಕೆ: ಪಾರದರ್ಶಕತೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯಲ್ಲಿ ಅನುದಾನ ಬಳಕೆಯಲ್ಲಿ ಸಂಪೂರ್ಣ ಪಾರದರ್ಶಕತೆ ತರಲಾಗುವುದು. ಅಧಿಕಾರಿಗಳು ಬೇಕಾಬಿಟ್ಟಿಯಾಗಿ ಅನುದಾನ ವೆಚ್ಚ ಮಾಡುವುದಕ್ಕೆ ಸಂಪೂರ್ಣ ನಿಯಂತ್ರಣ ಹೇರಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.



ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಸಮಾಜ ಕಲ್ಯಾಣ ಇಲಾಖೆ ಅಧೀನದ ಎಲ್ಲ ನಿಗಮಗಳಲ್ಲೂ ಪಾರದರ್ಶಕ ಆಡಳಿತಕ್ಕೆ ಒತ್ತು ನೀಡಲಾಗುವುದು. ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ (ಎಸ್‌ಸಿಎಸ್‌ಪಿ) ಅನುದಾನ ಬಳಕೆಯಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದರು.

ಎಸ್‌ಸಿಎಸ್‌ಪಿ ಅನುದಾನದಲ್ಲಿ ನೇರವಾಗಿ ಸಮಾಜ ಕಲ್ಯಾಣ ಇಲಾಖೆ ಅಥವಾ ನಿಗಮಗಳ ಅಧಿಕಾರಿಗಳೇ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳುವಂತಿಲ್ಲ. ಸ್ಥಳೀಯ ಶಾಸಕರು ಮತ್ತು ಜಿಲ್ಲಾಧಿಕಾರಿಯವರ ಮೂಲಕ ಈ ಯೋಜನೆಯನ್ನು ಜಾರಿಗೊಳಿಸಲು ನಿರ್ಧರಿಸಲಾಗಿದೆ. ಇಲಾಖೆಯ ವಸತಿ ಶಾಲೆಗಳು ಮತ್ತು ವಿದ್ಯಾರ್ಥಿ ನಿಲಯಗಳಿಗೆ ಖರೀದಿಸಬೇಕಿರುವ ವಸ್ತುಗಳ ಅಂದಾಜು ಪಟ್ಟಿಯನ್ನು ಮೊದಲೇ ಸಲ್ಲಿಸಲು ಸೂಚಿಸಲಾಗಿದೆ. ಮನಬಂದಂತೆ ಖರೀದಿ ಮಾಡುವುದನ್ನು ನಿರ್ಬಂಧಿಸಲಾಗುವುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಸೆಕ್ಷನ್ 4–ಜಿ ಅಡಿಯಲ್ಲಿ ವಿನಾಯಿತಿ ನೀಡುವುದನ್ನೂ ಕಡಿಮೆ ಮಾಡಲಾಗುವುದು ಎಂದು ತಿಳಿಸಿದರು.

'ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಸುವವರನ್ನು ನಾನು ಸಹಿಸುವುದಿಲ್ಲ. ದೀರ್ಘ ಕಾಲದಿಂದ ಒಂದೇ ಕಡೆ ಇರುವವರನ್ನು ಸ್ಥಾನಪಲ್ಲಟ ಮಾಡಲಾಗುವುದು.ಕೆಲವೇದಿನಗಳೊಳಗೆ ಇಲಾಖೆಯಲ್ಲಿ ಮೇಲ್ನೋಟಕ್ಕೆ ಕಾಣಿಸುವಂತಹ ಬದಲಾವಣೆಗಳನ್ನು ತರಬೇಕು ಎಂಬುದು ನನ್ನ ಗುರಿ' ಎಂದರು.

ಎಫ್‌ಐಆರ್ ದಾಖಲು: ಡಾ.ಬಿ.ಆರ್. ಅಂಬೇಡ್ಕರ್ ಅಬಿವೃದ್ಧಿ ನಿಗಮದ ಕಿರು ಸಾಲ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಸಿದ ಆರೋಪದ ಮೇಲೆ ನಿಗಮದ ತುಮಕೂರು ಜಿಲ್ಲಾ ವ್ಯವಸ್ಥಾಪಕ ಜಯಣ್ಣ ಮತ್ತು ಕಚೇರಿ ಅಧೀಕ್ಷಕಿ ಕೆ. ವೆನಿಲ್ಲಾ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಸಚಿವರು ಉತ್ತರ ನೀಡಿದರು.

'ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕೆಲವು ಅಧಿಕಾರಿಗಳು ಪರಿಶಿಷ್ಟ ಜಾತಿಯ ಬಡವರಿಗೆ ತಲುಪಬೇಕಾದ ಅನುದಾನವನ್ನು ಲೂಟಿ ಮಾಡುತ್ತಿದ್ದಾರೆ. ನಿಗಮದ 22 ಅಧಿಕಾರಿಗಳ ವಿರುದ್ಧ ಆರೋಪವಿದೆ. ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಹರಿಪ್ರಸಾದ್ ಆಗ್ರಹಿಸಿದರು.

4,606 ಭವನಗಳ ಕಾಮಗಾರಿ ಬಾಕಿ

ಸಮಾಜ ಕಲ್ಯಾಣ ಇಲಾಖೆಯು 2008–09ರಿಂದ ಈವರೆಗೆ 7,352 ಡಾ.ಬಿ. ಆರ್. ಅಂಬೇಡ್ಕರ್ ಭವನ, ಬಾಬು ಜಗಜೀವನ್ ರಾಂ ಭವನ ಮತ್ತು ಮಹರ್ಷಿ ವಾಲ್ಮೀಕಿ ಭವನಗಳ ಕಾಮಗಾರಿಗೆ ಮಂಜೂರಾತಿ ನೀಡಿತ್ತು. ಅವುಗಳಲ್ಲಿ 2,746 ಭವನಗಳ ನಿರ್ಮಾಣ ಮುಗಿದಿದ್ದು, 4,606 ಬಾಕಿ ಇವೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಕಾಂಗ್ರೆಸ್‌ನ ಆರ್. ಧರ್ಮಸೇನ ಪ್ರಶ್ನೆಗೆ ಉತ್ತರಿಸಿದ ಅವರು, 'ಭವನಗಳ ನಿರ್ಮಾಣಕ್ಕೆ ಬೃಹತ್ ಪ್ರಮಾಣದ ಅನುದಾನ ಅಗತ್ಯವಿದೆ. ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು' ಎಂದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 1.22 ಕೋಟಿ ಜನರಿದ್ದಾರೆ. ಅವರಲ್ಲಿ 5.5 ಲಕ್ಷ ಕುಟುಂಬಗಳಿಗೆ ಸ್ವಂತ ಮನೆ ಇಲ್ಲ. 4.5 ಲಕ್ಷ ಕುಟುಂಬಗಳ ಬಳಿ ಸ್ವಂತ ನಿವೇಶನವೂ ಇಲ್ಲ. ಈ ಕುಟುಂಬಗಳಿಗೆ ವಸತಿ ವ್ಯವಸ್ಥೆ ಕಲ್ಪಿಸುವುದಕ್ಕೆ ಇಲಾಖೆ ಆದ್ಯತೆ ನೀಡಲಿದೆ ಎಂದು ತಿಳಿಸಿದರು.ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬಾಕಿ ಉಳಿದಿರುವ ಭವನಗಳ ಕಾಮಗಾರಿ ಪೂರ್ಣಗೊಳಿಸುವಂತೆ ಆಗ್ರಹಿಸಿದ ಧರ್ಮಸೇನ, 'ಎಸ್‌ಸಿಎಸ್‌ಪಿ ಯೋಜನೆಯಲ್ಲಿ ಒಂದು ಬಾರಿಗೆ ಹೆಚ್ಚು ಅನುದಾನವನ್ನು ಈ ಉದ್ದೇಶಕ್ಕೆ ನೀಡಿ. ಅನುದಾನ ನೀಡಲು ಸಾಧ್ಯವಾಗದಿದ್ದರೆ ಅರ್ಧ ಕಾಮಗಾರಿ ಆಗಿರುವ ಕಟ್ಟಡಗಳನ್ನು ನೆಲಸಮಗೊಳಿಸಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೃಷಿ ವಿ.ವಿ: ಶೇ 50ರಷ್ಟು ಹುದ್ದೆ ಭರ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಾಲ್ಕು ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳಲ್ಲಿ 864 ಬೋಧಕ ಮತ್ತು 2,604 ಬೋಧಕೇತರ ಹುದ್ದೆಗಳು ಖಾಲಿ ಇವೆ. ಈ ಪೈಕಿ ಶೇಕಡ 50ರಷ್ಟು ಹುದ್ದೆಗಳ ಭರ್ತಿಗೆ ಪ್ರಯತ್ನ ಮಾಡಲಾಗುತ್ತಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಕಾಂಗ್ರೆಸ್‌ನ ಬಸವರಾಜ ಪಾಟೀಲ್ ಇಟಗಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ 212, ಧಾರವಾಡ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ 225, ರಾಯಚೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ 245 ಮತ್ತು ಶಿವಮೊಗ್ಗ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ 182 ಬೋಧಕರ ಹುದ್ದೆಗಳು ಖಾಲಿ ಇವೆ' ಎಂದರು.

ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ನೇಮಕಾತಿ ವಿಳಂಬವಾಗಿದೆ. ಶೇ 50ರಷ್ಟು ಹುದ್ದೆಗಳನ್ನಾದರೂ ತ್ವರಿತವಾಗಿ ಭರ್ತಿ ಮಾಡಲು ಪ್ರಯತ್ನಿಸಲಾಗುತ್ತಿದೆ. ಈ ಕುರಿತು ಎಲ್ಲ ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಆಗಸ್ಟ್ 27ರಂದು ಪತ್ರ ಬರೆದಿದ್ದು, ಕೆಲವು ಮಾಹಿತಿಗಳನ್ನು ಒದಗಿಸುವಂತೆ ಕೋರಲಾಗಿದೆ ಎಂದರು.

'ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಿನ ಹುದ್ದೆಗಳು ಖಾಲಿ ಇವೆ. ಬೋಧನೆ ಮತ್ತು ಸಂಶೋಧನೆಗೆ ತೀವ್ರ ಅಡಚಣೆಯಾಗಿದೆ. ಆದರೆ, ನೇಮಕಾತಿಗೆ ಸರ್ಕಾರ ಒಲವು ತೋರುತ್ತಿಲ್ಲ. ಧಾರವಾಡ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ 6 ತಿಂಗಳ ಹಿಂದೆ ಸದನದಲ್ಲಿ ನೀಡಿದ್ದ ಉತ್ತರವನ್ನೇ ಮತ್ತೆ ಒದಗಿಸಲಾಗಿದೆ. ಯಾವ ಬದಲಾವಣೆಯೂ ಆಗಿಲ್ಲ' ಎಂದು ಬಸವರಾಜ ಪಾಟೀಲ್ ಅಸಮಾಧಾನ ವ್ಯಕ್ತಪಡಿಸಿದರು.

ಸಹಾಯಧನ ಮುಂದುವರಿಕೆ: ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಪ್ರಶ್ನೆಗೆ ಉತ್ತರಿಸಿದ ಕೃಷಿ ಸಚಿವರು, 'ತುಂತುರು ನೀರಾವರಿ ಅಳವಡಿಕೆಗೆ ಕೇಂದ್ರ ಸರ್ಕಾರದ ನೆರವಿನಲ್ಲಿ ಸಹಾಯಧನ ನೀಡಲಾಗುತ್ತಿದೆ.ಕೇಂದ್ರ ಮತ್ತು ರಾಜ್ಯ ಸರ್ಕಾರ ಶೇ 90ರಷ್ಟು ಮೊತ್ತ ಭರಿಸುತ್ತಿದ್ದು, ರೈತರು ಶೇ 10ರಷ್ಟು ಮಾತ್ರ ವೆಚ್ಚ ಮಾಡಬೇಕು. ಈ ಯೋಜನೆ ಸ್ಥಗಿತಕ್ಕೆ ಆರ್ಥಿಕ ಇಲಾಖೆ ಸೂಚಿಸಿತ್ತು. ಆದರೆ, 5 ಎಕರೆ ವಿಸ್ತೀರ್ಣದವರೆಗಿನ ಜಮೀನು ಹೊಂದಿರುವ ಅತಿ ಸಣ್ಣ ಮತ್ತು ಸಣ್ಣ ರೈತರಿಗೆ ಸೀಮಿತವಾಗಿ ಸಹಾಯಧನ ಮುಂದುವರಿಸಲಾಗಿದೆ' ಎಂದರು.

ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ಸ್ಥಾಪನೆ ಮಸೂದೆಗೆ ಒಪ್ಪಿಗೆ

ಕೈದಿಗಳಿಂದ ಸಂಪತ್ತು ಸೃಷ್ಟಿಗೆ ಹೊಸ ಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈಲುಗಳಲ್ಲಿ ಕೈದಿಗಳ ಮಾನವ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ವಿವಿಧ ಉತ್ಪನ್ನಗಳ ತಯಾರಿಕೆ ಹೆಚ್ಚಿಸುವುದು ಮತ್ತು ಆ ಮೂಲಕ ಕೈದಿಗಳ ಗಳಿಕೆ ಪ್ರಮಾಣ ಹೆಚ್ಚಿಸುವ ಉದ್ದೇಶದ 'ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ' ಸ್ಥಾಪನೆಯ ಮಸೂದೆಗೆ ವಿಧಾನಸಭೆ ಶುಕ್ರವಾರ ಒಪ್ಪಿಗೆ ನೀಡಿತು.

ಗೃಹ ಸಚಿವ ಆರಗ ಜ್ಞಾನೇಂದ್ರ ಮಂಡಿಸಿದ ಮಸೂದೆಯ ಮೇಲೆ ವಿವಿಧ ಪಕ್ಷಗಳ ಸದಸ್ಯರು ಸುದೀರ್ಘ ಚರ್ಚೆ ನಡೆಸಿದರು.

ಸಚಿವ ಜ್ಞಾನೇಂದ್ರ ಮಸೂದೆಯ ಉದ್ದೇಶವನ್ನು ವಿವರಿಸಿ, ಕೈದಿಗಳ ಮಾನವ ಶಕ್ತಿ ಸಂಪನ್ಮೂಲ ವ್ಯರ್ಥವಾಗಬಾರದು. ಅವರು ಮನಸ್ಸು ಸೃಜನಾತ್ಮಕ ಚಟುವಟಿಕೆಯಲ್ಲಿ ತೊಡಗಿಸುವ ಮೂಲಕ ಮನಪರಿವರ್ತನೆಗೂ ಕಾರಣವಾಗುವ ಸ್ಥಿತಿ ಸೃಷ್ಟಿಸಬೇಕು. ಇದರಿಂದ ಹೊಸ ಜೀವನ ಆರಂಭಿಸಲು ಅವರಿಗೆ ಸಹಾಯಕಾರಿಯಾಗುತ್ತದೆ ಎಂದು ಹೇಳಿದರು.

'ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಅಲ್ಲಿನ ಬಂದೀಖಾನೆಗಳಲ್ಲಿ ವರ್ಷಕ್ಕೆ ಸುಮಾರು ₹600 ಕೋಟಿ ಮೌಲ್ಯದ ವಿವಿಧ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಇದರಿಂದ ಕೈದಿಗಳು ಹೆಚ್ಚು ಸಂಪಾದನೆ ಮಾಡುತ್ತಾರೆ. ಅವರು ಶಿಕ್ಷೆ ಮುಗಿಸಿ ಹೊರಗೆ ಹೋಗುವಾಗ, ಹಣವನ್ನು ಉಳಿಸಿಕೊಂಡು ಹೋಗಲು ಸಾಧ್ಯವಾಗುತ್ತದೆ. ನಮ್ಮ ರಾಜ್ಯದಲ್ಲಿ ಜಮೀನು ಇದೆ, ಉಪಕರಣಗಳು ಇವೆ. ಇವೆಲ್ಲವನ್ನೂ ಸುವ್ಯವಸ್ಥಿತ ರೀತಿಯಲ್ಲಿ ನಡೆಸಲು ಮಂಡಳಿ ಅಗತ್ಯವಿದೆ' ಎಂದು ಅವರು ಹೇಳಿದರು.

ಕಾಂಗ್ರೆಸ್‌ನ ಯು.ಟಿ.ಖಾದರ್ ಮಾತನಾಡಿ, ಜೈಲಿನ ಒಳಗಿನ ವ್ಯವಸ್ಥೆ ಸರಿಪಡಿಸಬೇಕಾಗಿದೆ. ಅಪರಾಧ ಕೃತ್ಯ ಎಸಗುವವರಿಗೆ ಜೈಲಿನ ಬಗ್ಗೆ ಭಯವೇ ಇಲ್ಲವಾಗಿದೆ. ಜೈಲಿನ ಒಳಗೆ ಬೇಕಾಗಿದ್ದೆಲ್ಲ ಸಿಗುತ್ತದೆ ಎಂಬ ಕಾರಣದಿಂದ ಜೈಲಿಗೆ ಹೋಗುವುದು ಆಕರ್ಷಣೀಯ ಎನಿಸಿದೆ. ಕಳ್ಳನಿಗೆ ಹೊಡೆದರೆ ಮಾನವ ಹಕ್ಕುಗಳ ಕಾರ್ಯಕರ್ತರು ಗಲಾಟೆ ಮಾಡುತ್ತಾರೆ. ಸಣ್ಣ ಅಪರಾಧ ಮಾಡಿ ಜೈಲಿಗೆ ಹೋದವನು ಹೊರ ಬರುವಾಗ ದೊಡ್ಡ ಕ್ರಿಮಿನಲ್ ಆಗಿ ಬರುತ್ತಾನೆ ಎಂದು ಹೇಳಿದರು. ಜೆಡಿಎಸ್‌ನ ಕೆ.ಅನ್ನದಾನಿ, ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್, ರಾಮಲಿಂಗಾರೆಡ್ಡಿ, ತನ್ವೀರ್ ಸೇಠ್, ಬಿಜೆಪಿಯ ಕೆ.ಜಿ.ಬೋಪಯ್ಯ, ಸತೀಶ್ ರೆಡ್ಡಿ ಮಾತನಾಡಿದರು.

ಮಂಡಳಿಗೆ ಗೃಹ ಸಚಿವರೇ ಅಧ್ಯಕ್ಷರು: ಬಂದೀಖಾನೆ ಮಂಡಳಿಗೆ ಗೃಹ ಸಚಿವರೇ ಅಧ್ಯಕ್ಷರಾಗಿರುತ್ತಾರೆ. ಬಂದೀಖಾನೆಗಳಲ್ಲಿ ಕೈದಿಗಳ ಕೌಶಲಾಭಿವೃದ್ಧಿ, ಉದ್ಯಮಗಳ ಸ್ಥಾಪನೆಗೆ ಒತ್ತು ನೀಡಲಾಗುವುದು. ಅಲ್ಲದೆ, ಕೈದಿಗಳ ಜೀವನ ಸ್ಥಿತಿಯನ್ನು ಪರಿಶೀಲಿಸಿ, ಸುಧಾರಿಸಲು ಮಾರ್ಗಸೂಚಿಗಳನ್ನು ರೂಪಿಸಲಿದೆ ಎಂದು ಸಚಿವ ಜ್ಞಾನೇಂದ್ರ ತಿಳಿಸಿದರು.

ಕೈದಿಯಾಗಿ ಸಂಡಾಸ್ ಎತ್ತಿದ್ದೆ: ಆರಗ

'ತುರ್ತುಪರಿಸ್ಥಿತಿ ಸಂದರ್ಭದಲ್ಲಿ ನಾನೂ ಬಳ್ಳಾರಿ ಜೈಲಿನಲ್ಲಿ ಕೈದಿಯಾಗಿದ್ದೆ. ಆ ಸಂದರ್ಭದಲ್ಲಿ ಕುಡಿಕೆಯಲ್ಲಿ ಸಂಡಾಸ್ ಮಾಡಿ ಅದನ್ನು ಹೊರಗೆ ಎಸೆದು ಬರುವ ಹೀನಾಯ ಸ್ಥಿತಿಯನ್ನೂ ಎದುರಿಸಿದ್ದೆ' ಎಂದು ಆರಗ ಜ್ಞಾನೇಂದ್ರ ಹೇಳಿದರು.

'ಅಲ್ಲಿದ್ದಾಗ ಜೈಲಿನ ಕೈದಿಗಳ ಪರಿಸ್ಥಿತಿ ಏನು ಎಂಬುದನ್ನು ಚೆನ್ನಾಗಿ ಅರಿತಿದ್ದೇನೆ. ಹೀಗಾಗಿ ಮಸೂದೆ ರೂಪಿಸುವಾಗ ಆ ಅನುಭವಗಳನ್ನು ಗಮನದಲ್ಲಿಟ್ಟುಕೊಂಡಿದ್ದೆ. ಇಂತಹ ಅನುಭವ ಕೊಟ್ಟಿದ್ದಕ್ಕೆ ಇಂದಿರಾಗಾಂಧಿಯವರಿಗೆ ಧನ್ಯವಾದ ಹೇಳಬೇಕು. ಬೇರೆ ರೀತಿಯ ಅಪರಾಧಕ್ಕಾಗಿ ಹೋಗಿದ್ದಲ್ಲ. ಈ ಮೊದಲು ಜೈಲಿನಲ್ಲಿದ್ದವರು ಯಾರೂ ಗೃಹ ಮಂತ್ರಿ ಆಗಿರಲಿಲ್ಲ' ಎಂದರು.

'ಜೈಲಿನ ಅಧಿಕಾರಿಗಳು ಹೇಗಿರುತ್ತಾರೆ ಎಂಬುದಕ್ಕೆ ಮೊತ್ತೊಂದು ಘಟನೆ ನೆನಪಿಗೆ ಬರುತ್ತದೆ. ಒಮ್ಮೆ ನಮ್ಮ ಕಡೆಯವರು ಬಂಧನಕ್ಕೆ ಒಳಗಾಗಿದ್ದರು. ಅವರನ್ನು ಬಿಡಿಸಿಕೊಂಡು ಬರಲು ನಾವು ಒಂದು ಬಸ್ ಜನ ಹೋಗಿದ್ದೆವು. ಬಿಡುಗಡೆಗೆ ಮ್ಯಾಜಿಸ್ಟ್ರೇಟರು ಆದೇಶ ನೀಡಿದ್ದರು. ಆದರೆ, ಜೈಲು ಅಧಿಕಾರಿ ಬಿಡಲು ಒಪ್ಪಲಿಲ್ಲ. ಬಳಿಕ ಯಾರೋ ಹೇಳಿದರು, ಆತ ಹಣ ಕೊಡದೇ ಬಿಡುವುದಿಲ್ಲ ಎಂದು. ಆಗ ನನ್ನ ಬಳಿ ಇದ್ದದ್ದು ₹8,000 ಮಾರನೇ ದಿನದವರೆಗೆ ಕಾಯುವ ಸ್ಥಿತಿ ಇರಲಿಲ್ಲ. ಆ ಹಣವನ್ನು ಅವರ ಎದೆಯ ಮೇಲೆ ಹಾಕಿ ಬಿಡಿಸಿಕೊಂಡು ಬಂದೆವು' ಎಂದು ಹೇಳಿದರು.

ಪ್ರಜಾವಾಣಿ ಶನಿವಾರ, 18 ಸೆಪ್ಟೆಂಬರ್ 2021

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ




ನಂಗೆ ಮದ್ವೇನೆ ಬೇಡಪ್ಪ!

ಯುವತಿಯರಲ್ಲಿ ಹೆಚ್ಚಾಗಿರುವ 'ನೋ ಮ್ಯಾರೇಜ್' ಟ್ರೆಂಡ್

ರೇಷ್ಮಾ

ದೂರದ ಆಸ್ಟ್ರೇಲಿಯಾದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಪ್ರಣವಿ ರಾವ್‌ಗೆ ಕೈ ತುಂಬಾ ಸಂಬಳ. ಅಮ್ಮ-ಅಪ್ಪ ಇಬ್ಬರೂ ನಿವೃತ್ತ ಶಿಕ್ಷಕರು. ಒಬ್ಬಳೇ ಮಗಳಾದ ಪ್ರಣವಿ ಹೆಸರಿನಲ್ಲಿ ಆಸ್ತಿ, ಮನೆ ಎಲ್ಲವೂ ಇದೆ. ಅವಳಿಗೆ ಈಗ ವಯಸ್ಸು 30 ಮೀರಿದೆ. ಪೋಷಕರಿಗೆ ಅವಳ ಮದುವೆಯ ಚಿಂತೆ. ಆದರೆ ಪ್ರಣವಿ ಮದುವೆ ಎಂದರೆ ಅಲರ್ಜಿ ಎನ್ನುವ ಹಾಗೇ ವರ್ತಿಸುತ್ತಾಳೆ. ಮಗಳಿಗೆ ವಯಸ್ಸು ಮೀರುತ್ತಿದೆ.. ಹೀಗೆ ಇದ್ದರೆ ಹೇಗೆ ಎಂಬ ಚಿಂತೆ ಪೋಷಕರನ್ನು ಸದಾ ಕಾಡುತ್ತಿರುತ್ತದೆ. ಆದರೆ ಮಗಳು ಮಾತ್ರ ಮದುವೆ ಬಗ್ಗೆ ಚಕಾರ ಎತ್ತುತ್ತಿಲ್ಲ. ಮಾಡುವ ಪ್ರಯತ್ನವೆಲ್ಲಾ ಮಾಡಿ ಕೈಚೆಲ್ಲಿದ್ದಾರೆ ಪ್ರಣವಿ ತಂದೆ-ತಾಯಿ.



ಪ್ರಣವಿಯಂತೆ ಹಲವು ಹೆಣ್ಣುಮಕ್ಕಳು ಇತ್ತೀಚೆಗೆ 'ನೋ ಮ್ಯಾರೇಜ್ ಟ್ರೆಂಡ್' ನತ್ತ ಒಲವು ಮೂಡಿಸಿಕೊಳ್ಳುತ್ತಿದ್ದಾರೆ. ಮಿಲೇನಿಯಲ್ ಜಮಾನದ ಯುವತಿಯರು ಮದುವೆಯಾಗಲು ಹಿಂದೇಟು ಹಾಕುತ್ತಿದ್ದಾರೆ. ಜಂಟಿಯಾಗುವುದಕ್ಕಿಂತ ಒಂಟಿ ಜೀವನವೇ ಬೆಸ್ಟ್ ಎನ್ನುವ ಯುವತಿಯರು ಮದುವೆಗೆ ನೋ ಎನ್ನುತ್ತಿದ್ದಾರೆ. ಮದುವೆ, ಸಂಸಾರ, ಗಂಡ, ಮನೆ, ವೃತ್ತಿ ಇವನ್ನೆಲ್ಲಾ ನಿಭಾಯಿಸಲು ಒಲ್ಲೆ ಎನ್ನುವ ಇವರು ಮದುವೆಯಾಗಿ ಗೃಹಿಣಿಯಾಗುವುದಕ್ಕಿಂತ ಹಾಗೇ ಇರುವುದು ಬೆಸ್ಟ್ ಎನ್ನುತ್ತಿದ್ದಾರೆ.

'ಮದುವೆ ಎಂದರೆ ಬಂಧನ ಎನ್ನುವುದಕ್ಕಿಂತ ನಾನು ನನ್ನ ಜೀವನವನ್ನು ಹೀಗೇ ರೂಪಿಸಿಕೊಂಡು ಬದುಕಬೇಕು ಎಂದು ಕನಸು ಕಂಡವಳು. ಇಲ್ಲಿಯವರೆಗೆ ಹಾಗೆ ಬದುಕಿದ್ದೇನೆ ಕೂಡ. ಆದರೆ ಮದುವೆಯಾದ ಮೇಲೆ ನನ್ನ ಕನಸಿನ ಬದುಕು ನನಗೆ ಸಿಗುತ್ತದೆ ಎನ್ನುವ ನಂಬಿಕೆ ಇಲ್ಲ. ನಮ್ಮನ್ನು ಎಷ್ಟೇ ಅರ್ಥ ಮಾಡಿಕೊಳ್ಳುವವರು ಸಿಕ್ಕರೂ ನಮ್ಮೆಲ್ಲಾ ಆಸೆ- ಕನಸುಗಳಿಗೆ ಅವರು ಸಹಕಾರ ನೀಡುತ್ತಾರೆ ಎಂಬ ನಂಬಿಕೆ ನನಗಿಲ್ಲ. ಹಾಗಂತ ಒಂಟಿಯಾಗಿಯೇ ಇದ್ದು ಬಿಡುತ್ತೇನೆ ಎಂಬ ಭಂಡ ಧೈರ್ಯವೂ ನನ್ನದಲ್ಲ. ಆದರೆ ಮದುವೆ ಸದ್ಯ ಬೇಡ ಎಂಬ ಗಟ್ಟಿ ನಿರ್ಧಾರ ಮಾಡಿದ್ದೇನೆ' ಎನ್ನುತ್ತಾರೆ ಕಾಲೇಜ್ ಒಂದರಲ್ಲಿ ಪ್ರಾಧ್ಯಾಪಕಿ ಆಗಿರುವ ಸಹನಾ ಗೌಡ.

ಕೋವಿಡ್ ಶುರುವಾದ ಮೇಲೆ ಮದುವೆ ಎಂದರೆ ಬಂಧನ ಎನ್ನುವ ಸ್ವೇಚ್ಛೆಯ ಮನೋಭಾವಕ್ಕಿಂತ ಕೆಲವೊಂದು ಭಾವನಾತ್ಮಕ ಕಾರಣಗಳಿಂದಲೂ ಹೆಣ್ಣುಮಕ್ಕಳು ಮದುವೆಯ ವಿಚಾರದಲ್ಲಿ ಹಿಂದೆ- ಮುಂದೆ ನೋಡುತ್ತಿದ್ದಾರೆ. ಹೆಣ್ಣುಮಕ್ಕಳು ಮದುವೆ ಬೇಡ ಎಂಬ ನಿರ್ಧಾರದ ಹಿಂದೆ ಈ ಕೆಲವು ಕಾರಣಗಳು ಪ್ರಮುಖವಾಗಿವೆ.

> ಹಿಂದೆಲ್ಲಾ ಹೆಣ್ಣುಮಕ್ಕಳು ಕುದುರೆ ಮೇಲೆ ಬರುವ ರಾಜಕುಮಾರನನ್ನು ಮದುವೆ ಆಗಬೇಕು ಎಂಬ ಕನಸು ಕಾಣುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಮದುವೆ ಎಂದರೆ ಹಿಂದೇಟು ಹಾಕುವ ಹೆಣ್ಣುಮಕ್ಕಳು 'ನೋ ಮ್ಯಾರೇಜ್ ಟ್ರೆಂಡ್'ಗೆ ಸೈ ಎನ್ನುತ್ತಿದ್ದಾರೆ.

ಆರ್ಥಿಕ ಸಮಸ್ಯೆ

ಭಾರತದಲ್ಲಿ ಹಲವು ಹೆಣ್ಣುಮಕ್ಕಳು ಕುಟುಂಬದಲ್ಲಿನ ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಮದುವೆ ಬೇಡ ಎನ್ನುತ್ತಿದ್ದಾರೆ. ಮನೆಯಲ್ಲಿ ತಮಗಿಂತ ದೊಡ್ಡವರ ಮದುವೆಯ ಖರ್ಚುಗಳನ್ನೆಲ್ಲಾ ನೋಡಿದ ಅವರು, ಮದುವೆಯಾಗಿ ತಂದೆ-ತಾಯಿಗೆ ತಾನು ಇನ್ನಷ್ಟು ಹೊರೆಯಾಗಬಾರದು ಎಂದು ಮದುವೆ ಬೇಡ ಎಂಬ ನಿರ್ಧಾರಕ್ಕೆ ಬರುತ್ತಿದ್ದಾರೆ.

ಕೌಟುಂಬಿಕ ಜವಾಬ್ದಾರಿಗಳು

ಇತ್ತೀಚಿನ ಬಡ ಹಾಗೂ ಮಧ್ಯಮ ವರ್ಗದ ಕುಟುಂಬದ ಹೆಣ್ಣುಮಕ್ಕಳು ಕುಟುಂಬದ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಬಡತನ, ಇನ್ನಾವುದೋ ಸಂಕಷ್ಟ, ತಂದೆ ಅಥವಾ ತಾಯಿಯ ಮರಣ ಈ ಎಲ್ಲಾ ಕಾರಣಗಳಿಂದ ಮನೆಯ ಸಂಪೂರ್ಣ ಜವಾಬ್ದಾರಿ ಅವಳ ಹೆಗಲ ಮೇಲಿರುತ್ತದೆ. ಹಲವು ಮನೆಗಳಲ್ಲಿ ಹೆಣ್ಣುಮಗಳು ಮನೆಯ ಮಗನಂತೆ ಮುಂದೆ ನಿಂತು ಮನೆಯ ಜವಾಬ್ದಾರಿ ನಿಭಾಯಿಸುತ್ತಿರುತ್ತಾಳೆ. ಅಂತಹ ಸಂದರ್ಭದಲ್ಲಿ ತಾನು ಮದುವೆಯಾಗಿ ಗಂಡನ ಮನೆಗೆ ಹೋದರೆ ತನ್ನ ಮನೆ ಪರಿಸ್ಥಿತಿ ಹದಗೆಡುತ್ತದೆ ಎಂದು ಹೆದರಿ ಮದುವೆ ಬೇಡ ಎನ್ನುತ್ತಾಳೆ.

ಭಾವನಾತ್ಮಕ ಕಾರಣಗಳು

ಕೋವಿಡ್ ಸಂದರ್ಭದಲ್ಲಿ ಹಲವರು ತಂದೆ-ತಾಯಿ, ಅಕ್ಕ-ತಮ್ಮ, ಅಣ್ಣ-ತಂಗಿ, ಪತಿ-ಪತ್ನಿ ಹೀಗೆ ಸಂಬಂಧಿಕರನ್ನು ಕಳೆದುಕೊಂಡಿದ್ದಾರೆ. ಮದುವೆ ಆಗಿ ವರ್ಷದೊಳಗೇ ಗಂಡನನ್ನು ಕಳೆದುಕೊಂಡವರೂ ಇದ್ದಾರೆ. ಈ ಕಳೆದುಕೊಳ್ಳುವ ನೋವು ಹಾಗೂ ಆತಂಕ ಕೂಡ ಹೆಣ್ಣುಮಕ್ಕಳು ಮದುವೆ ಬೇಡ ಎನ್ನಲು ಪ್ರಮುಖ ಕಾರಣವಾಗಿದೆ. ಇಷ್ಟಪಟ್ಟವರನ್ನು ಕಳೆದುಕೊಂಡು ಒಂಟಿಯಾಗಿ ನೋವು ಅನುಭವಿಸುತ್ತಾ ಬದುಕುವುದಕ್ಕಿಂತ ಒಂಟಿಯಾಗಿಯೇ ಇರುವುದು ಉತ್ತಮ ಎನ್ನುವ ಮನೋಭಾವ ಹಲವರದ್ದು ಎನ್ನುತ್ತಾರೆ ಮನಶ್ಶಾಸ್ತ್ರಜ್ಞರು.

ಬದ್ಧತೆಗೆ ಒಲ್ಲೆ...

ಮದುವೆ ಎಂಬ ಸುಂದರ ಸಂಬಂಧದಲ್ಲಿ ಬದ್ಧತೆ ಬಹಳ ಮುಖ್ಯ. ಮದುವೆ ಎಂಬ ಮೂರಕ್ಷರದ ನಂಟು ನಿಂತಿರುವುದೇ ಬದ್ಧತೆಯ ಮೇಲೆ. ಆದರೆ ಇತ್ತೀಚಿನ ಹೆಣ್ಣುಮಕ್ಕಳು ಸಂಬಂಧದಲ್ಲಿ ಬದ್ಧತೆ ನಮ್ಮಿಂದ ಸಾಧ್ಯವಿಲ್ಲ ಎನ್ನುತ್ತಿದ್ದಾರೆ. ಯಾವುದೇ ಸಂಬಂಧವಾಗಲಿ ಆ ಸಂಬಂಧಕ್ಕೆ ಬದ್ಧರಾಗಿದ್ದು ಸಾಮಾಜಿಕ ಬದ್ಧತೆಯನ್ನೂ ಪಾಲಿಸುವುದು ತಮ್ಮಿಂದ ಸಾಧ್ಯವಿಲ್ಲ ಎನ್ನುವ ಮನಸ್ಥಿತಿಯೂ ಮದುವೆಗೆ ಹಿಂದೇಟು ಹಾಕಲು ಕಾರಣ ಎನ್ನಬಹುದು.

ಲಿವಿಂಗ್‌ಗೆ ಸೈ

ಮದುವೆ ಎಂಬ ಬಂಧನದಲ್ಲಿ ಸಿಲುಕಿ ಮದುವೆ, ಮಕ್ಕಳು ಸಂಸಾರದ ಜಂಟಾಟ ಬೇಡ ಎನ್ನುವವರು ಸಹಜೀವನ ಅಥವಾ ಲಿವಿಂಗ್ ರಿಲೇಷನ್‌ಶಿಪ್‌ಗೆ ಸೈ ಎನ್ನುತ್ತಿದ್ದಾರೆ. ಲಿವಿಂಗ್‌ನಲ್ಲಿ ಇದ್ದರೆ ಯಾವುದೇ ರಗಳೆ ಇಲ್ಲ. ಇರುವಷ್ಟು ದಿನ ಇರಬಹುದು, ಬೇಡವೆಂದಾಗ ಬಿಟ್ಟು ಒಂಟಿ ಜೀವನ ನಡೆಸಬಹುದು ಎಂಬುದು ಇಂದಿನ ಮಿಲೇನಿಯಲ್ ಯುವತಿಯರ ಅಭಿಮತ.

ಮಾನಸಿಕ ವ್ಯಥೆ

ಪ್ರೀತಿ-ಪ್ರೇಮದ ವಿಚಾರದಲ್ಲಿ ಹೆಣ್ಣುಮಕ್ಕಳು ಬಹಳ ಭಾವನಾತ್ಮಕವಾಗಿ ವರ್ತಿಸುತ್ತಾರೆ. ತಾನು ಪ್ರೀತಿಸಿದ ವ್ಯಕ್ತಿ ತನಗೆ ಮಾತ್ರ ಸ್ವಂತ ಎಂದು ಭವಿಷ್ಯದ ಕನಸು ಕಟ್ಟಿಕೊಂಡು ಬದುಕುತ್ತಿರುತ್ತಾರೆ. ಆದರೆ ಪ್ರೇಮಿಸಿದ ಹುಡುಗನ ಮರಣ ಅಥವಾ ಆ ಹುಡುಗ ತನಗೆ ಮೋಸ ಮಾಡಿ ಬೇರೆಯವರೊಂದಿಗೆ ಮದುವೆಯಾಗುವುದು.. ಇದರಿಂದ ಕೂಡ ಹೆಣ್ಣುಮಕ್ಕಳು ಬೇರೆ ಗಂಡಿನೊಂದಿಗೆ ಮದುವೆಯಾಗಲು ಒಪ್ಪದೇ ಒಂಟಿಯಾಗಿ ಉಳಿದು ಬಿಡುವ ಸಾಧ್ಯತೆ ಇದೆ.

ದಪ್ಪ ಗರ್ಭಕೋಶಕ್ಕೆ ಕಾರಣವೇನು?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನಗೆ 37 ವರ್ಷ. ಮದುವೆ ತಡವಾಗಿದೆ. ನನಗೆ ಪ್ರತಿ ತಿಂಗಳು ಮುಟ್ಟು ಸರಿಯಾಗಿ ಆಗುತ್ತದೆ. ಸ್ಕ್ಯಾನಿಂಗ್ ವರದಿಯಲ್ಲಿ ಬಲ್ಕಿ ಯುಟೆರಸ್ ಮತ್ತು ಫ್ಯಾಟಿಲಿವರ್ ಆಗಿದೆ ಅಂತ ಬಂದಿದೆ. ನನಗೆ ಮಗು ಆಗುತ್ತದೆಯೇ?**

ಹೆಸರು, ಊರು ತಿಳಿಸಿಲ್ಲ

ನಿಮಗೆ 37 ವರ್ಷ ಈಗಾಗಲೇ ಆಗಿದೆ. ಅಂದರೆ ಆದಷ್ಟು ಬೇಗ ತಜ್ಞ ವೈದ್ಯರ ಹತ್ತಿರ ಸಲಹೆ, ಚಿಕಿತ್ಸೆ ತೆಗೆದುಕೊಂಡು ಮಗುವನ್ನು ಪಡೆಯಲು ಪ್ರಯತ್ನಿಸಿ. ಗರ್ಭಕೋಶ ನಿಮಗೆ ದಪ್ಪಗಿರುವುದು ಹಾರ್ಮೋನುಗಳ ಅಸಮತೋಲನದಿಂದ ಇರಬಹುದು. ಜೊತೆಗೆ ನಿಮಗೆ ಫ್ಯಾಟಿಲಿವರ್ ಇದೆಯೆಂದು ತಿಳಿಸಿದ್ದೀರಾ. ಆದರೆ ಇಂತಹ ಫ್ಯಾಟಿಲಿವರ್ ಸಮಸ್ಯೆ ಮದ್ಯ ವ್ಯಸನಿಗಳಲ್ಲಿ ಹೆಚ್ಚು. ಅದಲ್ಲದೇ ಬೊಜ್ಜು ದೇಹ ಉಳ್ಳವರಿಗೂ ಇರುತ್ತದೆ. ಅನಾರೋಗ್ಯಕರ ಕುರುಕಲು ತಿಂಡಿ ತಿನ್ನುವವರಿಗೆ, ಸಕ್ಕರೆ ಕಾಯಿಲೆ, ಥೈರಾಯಿಡ್ ಸಮಸ್ಯೆ, ಕೆಲವೊಮ್ಮೆ ವಂಶವಾಹಿ ಕಾರಣದಿಂದ ತೆಳ್ಳಗಿರುವವರಲ್ಲೂ ಕಂಡುಬರಬಹುದು. ಮೊದಲು ವಿದೇಶದಲ್ಲಿ ಹೆಚ್ಚಿದ್ದ ಈ ಫ್ಯಾಟಿಲಿವರ್ ಸಮಸ್ಯೆ ಈಗ ಭಾರತದಲ್ಲೂ ಹೆಚ್ಚಾಗುತ್ತಿದೆ. ಇದನ್ನ ನಿರ್ಲಕ್ಷಿಸಿ ಹಾಗೆಯೇ ಬಿಟ್ಟರೆ ಸಿರೋಸಿಸ್‌ನಂತಹ ಸರಿಪಡಿಸಲಾಗದ ಹಂತಕ್ಕೆ ಮುಂದುವರಿಯಬಹುದು. ಆಗ ಯಕೃತ್ ಕಸಿ ಮಾಡುವುದೊಂದೆ ಚಿಕಿತ್ಸೆಯಾಗಿ ಉಳಿಯುತ್ತದೆ. ಆ ಹಂತಕ್ಕೆ ಹೋಗಲು ಬಿಡದೆ ಆರಂಭಿಕ ಹಂತದಲ್ಲೇ ಅತಿಯಾದ ತೂಕವಿದ್ದರೆ ಕಡಿಮೆ ಮಾಡಿಕೊಳ್ಳಿ, ರಕ್ತದಲ್ಲಿನ ಸಕ್ಕರೆ ಪ್ರಮಾಣ ಹಾಗೂ ಕೊಲೆಸ್ಟ್ರಾಲ್ ಮಟ್ಟ ನಿಯಂತ್ರಣದಲ್ಲಿಟ್ಟು, ನಿಯಮಿತ ದೈಹಿಕ ಚಟುವಟಿಕೆಯಿಂದ ಫ್ಯಾಟಿಲಿವರ್ ಅನ್ನು ಸರಿಪಡಿಸಬಹುದು. ಯಾವುದಕ್ಕೂ ತಜ್ಞರನ್ನು ಭೇಟಿಮಾಡಿ.

- **ನನಗೆ ಮುಟ್ಟು ನಿಂತು ಒಂದು ವರ್ಷವಾಗಿತ್ತು. ಆದರೆ 1 ವರ್ಷದ ನಂತರ ಮತ್ತೆ ಪೀರಿಯಡ್ಸ್ ಆಗಿದೆ. ಯಾಕೆ ಹೀಗೆ ಅಂತಾ ಗೊತ್ತಾಗಲಿಲ್ಲ. ನನ್ನ ವಯಸ್ಸು 48. ಮದುವೆ ಆಗಿಲ್ಲ. ಆದರೆ ಈಗ ನನಗೆ ಮದುವೆ ಮಾಡಲು ಮನೆಯಲ್ಲಿ ಮಾತಾಡುತ್ತಿದ್ದಾರೆ. ನನಗೆ ಸೆಕ್ಸ್ ಬಗ್ಗೆ ಭಯವಿದೆ. ದಯವಿಟ್ಟು ಪರಿಹಾರ ಹೇಳಿ.**

ಹೆಸರು ತಿಳಿಸಿಲ್ಲ, ಮೈಸೂರು

ಈಗಲೂ ಕಾಲ ಮಿಂಚಿಲ್ಲ. ನಿಮಗೆ ಸರಿಹೋಗುವ ಸೂಕ್ತ ವರ ಸಿಕ್ಕರೆ ಮದುವೆ ಆಗಿ. 48 ವರ್ಷದ ನಂತರವೂ ಸೆಕ್ಸ್ ಬಗ್ಗೆ ಭಯ, ಆತಂಕ ಆಗೋದು ಬೇಡ. ನೀವು ಸೂಕ್ತ ತಜ್ಞವೈದ್ಯರ ಸಲಹೆ ಪಡೆದುಕೊಂಡು ಮುಂದುವರೆಯಿರಿ. ನಿಮಗೆ ಒಳ್ಳೆಯದಾಗಲಿ.

- **ನನಗೆ ಹೆರಿಗೆಯಾದ ಒಂದು ವರ್ಷಕ್ಕೆ ಸರಿಯಾಗಿ ಮುಟ್ಟು ಆಗಿದೆ. ಈಗ ಕಳೆದ ತಿಂಗಳು ಮುಟ್ಟು ಆಗಿ, 15 ದಿನಗಳ ನಂತರ ಮತ್ತೆ ರಕ್ತಸ್ರಾವ ಆಗುತ್ತಿದೆ. ಕಾರಣ ತಿಳಿಸಿ?**

ಲಕ್ಷ್ಮಿ, ಊರು ತಿಳಿಸಿಲ್ಲ

ಕೆಲವೊಮ್ಮೆ ಹೆರಿಗೆಯಾದ ನಂತರ ತಡವಾಗಿ ಮುಟ್ಟು ಆರಂಭವಾಗಿ ಬೇಗನೆ ಮುಟ್ಟು ಕಾಣಿಸಿಕೊಳ್ಳಬಹುದು. ಅಂಡೋತ್ಪತ್ತಿಯಾಗದೆ ಇರುವ ಋತುಚಕ್ರದಲ್ಲಿ ಈ ರೀತಿಯಾಗಬಹುದು.

- **ನನಗೆ 2 ವರ್ಷದ ಒಂದು ಮಗುವಿದೆ. ಈಗ ಎರಡನೇ ಮಗು ಬೇಕೆಂದು ಯತ್ನಿಸುತ್ತಿದ್ದೇವೆ. 36 ದಿನವಾದರೂ ಪೀರಿಯಡ್ ಆಗಿಲ್ಲ ಏನು ಮಾಡೋದು ಮೇಡಂ ಹೇಳಿ?**

ಹೆಸರು, ಊರು ತಿಳಿಸಿಲ್ಲ

ಮೊದಲನೆಯದಾಗಿ ಈಗ ಗರ್ಭ ಧರಿಸಿದ್ದಿರೋ ಇಲ್ಲವೋ ಎಂದು ಮೂತ್ರ ಪರೀಕ್ಷೆ ಮಾಡಿಕೊಳ್ಳಿ (ಗ್ರಾವಿಂಡೆಕ್ಸ್). ಗರ್ಭ ಧರಿಸಿದ್ದರೆ ಮೂರು ತಿಂಗಳವರೆಗೆ ತಜ್ಞರ ಸಲಹೆಯ ಮೇರೆಗೆ ಫೋಲಿಕ್‌ಆಸಿಡ್ ಮಾತ್ರೆಯನ್ನ ತೆಗೆದುಕೊಳ್ಳಿ. ನಂತರವೂ ನಿಗದಿತ ತಪಾಸಣೆ ಮಾಡಿಕೊಂಡು ಆರೋಗ್ಯವಂತ ಮಗುವನ್ನು ಪಡೆದುಕೊಳ್ಳಿ.

- **ವಯಸ್ಸು 31. ನನಗೆ ಮತ್ತು ನನ್ನ ಪತಿಗೆ ಜನನಾಂಗದಲ್ಲಿ ಫಂಗಸ್ ಸೋಂಕು ಆಗಿದ್ದು ಸಾಕಷ್ಟು ಆಸ್ಪತ್ರೆಗೆ ತೋರಿಸಿದರೂ ವಾಸಿಯಾಗುತ್ತಿಲ್ಲ. ಇದರಿಂದ ಮಗು ಆಗಲು ಏನಾರೂ ಸಮಸ್ಯೆಯಾಗುತ್ತದೆಯೇ? ಇನ್ನೂ ನಮಗೆ ಮಕ್ಕಳಾಗಿಲ್ಲ.**

ಶೋಭಾ, ಕೊಪ್ಪಳ

ಫಂಗಸ್ ಸೋಂಕು ಡರ್ಮಟೋಫೈಟ್ ಎಂಬ ಸೂಕ್ಷ್ಮಾಣು ಜೀವಿಗಳಿಂದ ಉಂಟಾಗುವ ಸೋಂಕಾಗಿದ್ದು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಇದಕ್ಕೆ ನೀವು ಮತ್ತು ನಿಮ್ಮ ಪತಿ ಇಬ್ಬರೂ ಕೂಡಾ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆ ತೆಗೆದುಕೊಳ್ಳಿ. ಮಗು ಆಗಲು ಫಂಗಸ್ ಸೋಂಕಿನಿಂದ ಏನೂ ಸಮಸ್ಯೆಯಾಗುವುದಿಲ್ಲ. ಚಿಕಿತ್ಸೆ ಶುರು ಮಾಡಿದ ತಕ್ಷಣ ಫಂಗಸ್ ಸೋಂಕು ಸ್ವಲ್ಪ ಗುಣವಾದ ಹಾಗೇ ಅನಿಸುತ್ತದೆ. ಇದರಿಂದ ಹೆಚ್ಚಿನವರು ಚಿಕಿತ್ಸೆಯನ್ನು ಅರ್ಧಕ್ಕೆ ನಿಲ್ಲಿಸಿಬಿಡುತ್ತಾರೆ. ಇದರಿಂದ ಪದೇ ಪದೇ ಸೋಂಕಾಗುವುದು, ದೀರ್ಘಾವಧಿಯವರೆಗೂ ಸೋಂಕು ಗುಣವಾಗದೇ ಇರುವುದು. ಚಿಕಿತ್ಸೆ ತೆಗೆದುಕೊಂಡರೂ ನಿಮಗೆ ಈ ಸೋಂಕು ಕಡಿಮೆ ಆಗದೆ ಇರುವುದಕ್ಕೆ ಇದೇ ಕಾರಣ ಇರಬಹುದು. ಚಿಕಿತ್ಸೆಯಿಂದ ಫಂಗಸ್ ಸೂಕ್ಷ್ಮಾಣು ಜೀವಿಯು ನಾಶವಾಗಲು ಕನಿಷ್ಠ ಆರು ವಾರವಾದರೂ ಬೇಕೇ ಬೇಕು ಮತ್ತು ತೊಡೆಸಂದಿಯಲ್ಲಿ ತೇವಾಂಶವು ಇರದ ಹಾಗೇ ನೋಡಿಕೊಳ್ಳಬೇಕು, ತೊಡೆಸಂದಿಯಲ್ಲಿ ಗಾಳಿ ಆಡುವ ಹಾಗೇ ನೋಡಿಕೊಳ್ಳಬೇಕು. ಸೂಕ್ತ ಚಿಕಿತ್ಸೆಯನ್ನು ಸೂಕ್ತ ಅವಧಿಯವರೆಗೆ ತೆಗೆದುಕೊಂಡಾಗ ಮಾತ್ರ ಫಂಗಸ್ ಸೋಂಕನ್ನು ಗುಣಪಡಿಸಿಕೊಳ್ಳಬಹುದು.

- **ನನಗೆ ವಯಸ್ಸು 20. ಇನ್ನೂ ಮದುವೆ ಆಗಿಲ್ಲ. ಸರಿಯಾಗಿ ಮುಟ್ಟು ಆಗುವುದಿಲ್ಲ. ಕಳೆದ ಏಪ್ರಿಲ್ 10ಕ್ಕೆ ಆಗಿದ್ದು ನಂತರ ಆಗೇ ಇಲ್ಲ. ಪ್ರತಿ ಸಲ ಹೀಗೇ ಆಗುತ್ತದೆ. 2 ಬಾರಿ ಆಸ್ಪತ್ರೆಗೆ ತೋರಿಸಿದ್ದೆ. ಆವಾಗ ಸರಿ ಆಗಿತ್ತು. ಈಗ ಮತ್ತದೇ ಸಮಸ್ಯೆ.**

ತೃಪ್ತಿ, ಊರು ತಿಳಿಸಿಲ್ಲ

ನಿಮಗೆ ಪಿಸಿಒಡಿ ಸಮಸ್ಯೆ ಇರಬಹುದು ಕಳೆದ ಸಂಚಿಕೆಯಲ್ಲಿ ಅದರ ನಿರ್ವಹಣೆಯ ಬಗ್ಗೆ ತಿಳಿಸಿದ್ದೇವೆ. ಅದನ್ನು ಅನುಸರಿಸಿ.

- **ವಯಸ್ಸು 32. ನನ್ನ ಮದುವೆಯಾಗಿ 2 ತಿಂಗಳಾಗಿದೆ. ಮದುವೆ ಆದ ನಂತರ ನನಗೆ 18-20 ದಿನಕ್ಕೆ ಮುಟ್ಟು ಆಗುತ್ತಿದೆ ಮತ್ತು ಮುಟ್ಟು ತುಂಬಾ ಕಡಿಮೆ ಆಗುತ್ತಿದೆ. ಗರ್ಭ ಧರಿಸಬೇಕೆಂದು ಬಹಯಕೆಯಿದ್ದು, ಸಂತಾನ ಪ್ರಾಪ್ತಿ ಆಗಬಹುದೇ?**

ಪವಿತ್ರ, ಊರು ತಿಳಿಸಿಲ್ಲ

ನೀವು ತಜ್ಞವೈದ್ಯರನ್ನು ಸಂಪರ್ಕಿಸಿ ಸಲಹೆ, ಚಿಕಿತ್ಸೆ ಪಡೆದುಕೊಳ್ಳಿ. ನಿಮಗೆ ಪಿಸಿಒಡಿ ಸಮಸ್ಯೆ ಇರಬಹುದು. ಕಳೆದ ಸಂಚಿಕೆಯಲ್ಲಿ ಜೀವನಶೈಲಿ ಬದಲಾವಣೆ ಹಾಗೂ ಪಿಸಿಒಡಿ ಬಗ್ಗೆ ಬರೆದಿದ್ದು, ಓದಿಕೊಳ್ಳಿ.

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಕೈ ಬಳೆ ಅಂದಕೆ...

ಮನಸ್ವಿ



ಡಾ. ಸಿ ವಿನೋದ್ ಹಯಗ್ರೀವ

ಬಟ್ಟೆ, ಒಡವೆಗಳೆಂದರೆ ಹೆಣ್ಣುಮಕ್ಕಳಿಗೆ ಅದೇನೋ ಒಲವು. ಕುತ್ತಿಗೆ ತುಂಬಾ ಹಾರ, ನೆಕ್ಲೇಸ್, ಕಿವಿಯೋಲೆ, ಉಂಗುರ, ಬಳೆ ಹೀಗೆ ಮೈಮೇಲೆ ಆಭರಣಗಳನ್ನು ಧರಿಸಿ ಖುಷಿ ಪಡುತ್ತಾರೆ. ಅದರಲ್ಲೂ ಬಳೆಗಳಿಗೂ ಹೆಣ್ಣುಮಕ್ಕಳಿಗೂ ಅವಿನಾಭಾವ ಸಂಬಂಧ. ಹಿಂದಿನಿಂದಲೂ ವಿವಿಧ ವಿನ್ಯಾಸದ ಬಂಗಾರದ ಬಳೆಗಳು ಹೆಣ್ಣುಮಕ್ಕಳ ಕೈಯನ್ನು ಅಲಂಕರಿಸುತ್ತಿದ್ದವು. ಇತ್ತೀಚೆಗೆ ಹೊಸ ಹೊಸ ವಿನ್ಯಾಸ ಹಾಗೂ ಆಕಾರದ ಬಳೆಗಳು ಬಂಗಾರದ ಮಳಿಗೆಗಳಲ್ಲಿ ಮಹಿಳೆಯರನ್ನು ಸೆಳೆಯುತ್ತಿವೆ. ಅವುಗಳಲ್ಲಿ ಲಕ್ಷ್ಮೀ, ಗಣೇಶ, ಗಂಡಭೇರುಂಡ ಹೀಗೆ ದೇವರ ಚಿತ್ತಾರವಿರುವ ವಿನ್ಯಾಸದ ಬಳೆಗಳು ಆಭರಣ ಪ್ರಿಯರನ್ನು ಹೆಚ್ಚು ಸೆಳೆಯುತ್ತಿವೆ.

'ಸರ, ನೆಕ್ಲೇಸ್, ಕಿವಿಯೋಲೆ ಯಾವುದೇ ಇರಲಿ ಬಳೆಗಳ ವಿಷಯಕ್ಕೆ ಬಂದರೆ ಅದಕ್ಕೆ ಅದರದ್ದೇ ಆದ ಬೇಡಿಕೆ ಈಗಲೂ ಇದೆ. ಬಳೆ ಕಾಣಿಸುವ ಥರ ಬೇರೆ ಯಾವುದೂ ಕಾಣಿಸುವುದಿಲ್ಲ. ಜೊತೆಗೆ ಬಳೆಗಳನ್ನು ಧರಿಸಿದಾಗ ಅವುಗಳನ್ನು ಹತ್ತಿರದಿಂದ ನೋಡಬಹುದು. ಹಾಗಾಗಿ ಬಳೆಯ ವಿನ್ಯಾಸ ಚೆನ್ನಾಗಿದ್ದು ಪರಿಪೂರ್ಣವಾಗಿರಬೇಕು' ಎನ್ನುತ್ತಾರೆ ಶ್ರೀ ಕೃಷ್ಣಯ್ಯ ಚೆಟ್ಟಿ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಸಿ ವಿನೋದ್ ಹಯಗ್ರೀವ



ಶ್ರೀ ಕೃಷ್ಣಯ್ಯ ಚೆಟ್ಟಿ ಆಭರಣ ಮಳಿಗೆಯವರು ವಿನ್ಯಾಸ ಮಾಡಿದ ಗಂಢಬೇರುಂಡ ವಿನ್ಯಾಸದ ಬಳೆ

ಆ್ಯಂಟಿಕ್‌ನಲ್ಲಿ...

ದೇವರ ಚಿತ್ತಾರದ ಕಿವಿಯೋಲೆ, ನೆಕ್ಲೇಸ್ ಹಾಗೂ ಪದಕ ಮೊದಲಿನಿಂದಲೂ ಬಳಕೆಯಲ್ಲಿತ್ತು. 1990 ಹಾಗೂ 2000ರ ಸಮಯದಲ್ಲಿ ಈ ರೀತಿಯ ನೆಕ್ಲೇಸ್, ಕಿವಿಯೋಲೆಗಳಿಗೆ ಬೇಡಿಕೆಯೂ ಹೆಚ್ಚಿತ್ತು. ಈಗ ಅದೇ ಟ್ರೆಂಡ್ ಬಳೆಗಳಲ್ಲಿ ಶುರುವಾಗಿದೆ. ಆ್ಯಂಟಿಕ್ ಆಭರಣಗಳು ಬೇಡಿಕೆ ಹೆಚ್ಚಿಸಿಕೊಂಡ ಮೇಲೆ ದೇವರ ಚಿತ್ತಾರದ ಬಳೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆ್ಯಂಟಿಕ್‌ನಲ್ಲಿ ದೇವರು ಹಾಗೂ ದೇವಿಯ ವಿನ್ಯಾಸದ ಬಳೆಗಳು ಹೆಚ್ಚು ಬೇಡಿಕೆ ಪಡೆದುಕೊಂಡಿವೆ.

ಸರ, ಕಿವಿಯೋಲೆಯೊಂದಿಗೆ..

ಸರ ಅಥವಾ ಕಿವಿಯೋಲೆಗೆ ಹೊಂದುವಂತಹ ಅದೇ ವಿನ್ಯಾಸವಿರುವ ಬಳೆಗಳನ್ನು ಧರಿಸಬಹುದು. ಇದು ಐಷಾರಾಮಿ ನೋಟ ಸಿಗುವಂತೆ ಮಾಡುವುದಲ್ಲದೇ ಅಂದವನ್ನು ಹೆಚ್ಚಿಸುತ್ತದೆ. ವಿವಿಧ ವಿನ್ಯಾಸವಲ್ಲದೇ ಬಣ್ಣ (ಎನಾಮಲ್) ದಲ್ಲೂ ಈ ವಿನ್ಯಾಸವನ್ನು ಮಾಡುವುದು ಈಗ ವಿಶೇಷ. ಜೆಮ್ ಸ್ಟೋನ್ ಒಳಗೆ ಕೆತ್ತನೆ ವಿನ್ಯಾಸವು ಬಳೆಗಳಲ್ಲಿ ಲಭ್ಯವಿದೆ.

ತಂತ್ರಜ್ಞಾನದ ವರ

'ಬಂಗಾರದಲ್ಲಿ ನಾರ್ಮಲ್ ಅಥವಾ ಹಳದಿ ಚಿನ್ನ, ಆಕ್ಸಿಡೈಜೇಷನ್ ಹೀಗೆ ವಿಧಗಳಿವೆ. ಆಕ್ಸಿಡೈಸ್ಡ್ ಮಾಡಿರುವುದು ಹಳೆ ಕಾಲದ ಚಿನ್ನದಂತೆ ಕಾಣಿಸುತ್ತದೆ. ಇದಕ್ಕೆ 'ಪಟೀನಾ' ಎಂದೂ ಕರೆಯುಲಾಗುತ್ತದೆ. ಇದು ನೋಡಲು ಡಲ್ ಆಗಿರುತ್ತದೆ. ಆದರೆ ಧರಿಸಿದಾಗ ಐಷಾರಾಮಿ ನೋಟ ಸಿಗುವುದಲ್ಲದೇ ಇದು ಸದ್ಯದ ಟ್ರೆಂಡ್ ಕೂಡ ಹೌದು. ಹಿಂದೆಲ್ಲಾ ಕೈಯಲ್ಲೇ ವಿನ್ಯಾಸ ಮಾಡುವ ರೂಢಿ ಇತ್ತು. ಆದರೆ ಈಗ ಕ್ಯಾಡ್ (ಕಂಪ್ಯೂಟರ್ ಡಿಸೈನ್) ಮೂಲಕ ಚಿತ್ತಾರ ಮಾಡಲಾಗುತ್ತದೆ. ಇದರಲ್ಲಿ 3 ಡಿ ಪ್ರಿಟಿಂಗ್ ಕೂಡ ಇದ್ದು ಮಷೀನ್ ಮೂಲಕ ಫಿನಿಶಿಂಗ್ ಮಾಡಲಾಗುತ್ತದೆ. ತಂತ್ರಜ್ಞಾನ ಬಳಸಿಕೊಂಡು ಕೈಯಲ್ಲಿ ಫಿನಿಶಿಂಗ್ ಟಚ್ ಕೊಟ್ಟರೆ ಬಳೆಯ ಅಂದ ಹೆಚ್ಚುತ್ತದೆ' ಎನ್ನುತ್ತಾರೆ ವಿನೋದ್.

ಗೌಡ್ರು ಸ್ಪೆಷಲ್ ನಾಟಿಕೋಳಿ ಸಾರು

ಹೇಮಲತಾ ಆರ್.ಕೆ.

ನಳಪಾಕ

ನಾಟಿ ಶೈಲಿ ಚಿಕನ್ ಚಾಪ್ಸ್



ಬೇಕಾಗುವ ಸಾಮಗ್ರಿಗಳು: ಚಿಕನ್ - 1 ಕೆಜಿ, ಈರುಳ್ಳಿ - 1, ಟೊಮೆಟೊ - 1, ಬೆಳ್ಳುಳ್ಳಿ - 15, ಗೋಡಂಬಿ - 20, ಹಸಿಮೆಣಸಿನಕಾಯಿ - 8, ಕಾಳುಮೆಣಸು -1 ಟೀ ಚಮಚ, ಕೊತ್ತಂಬರಿ - 1 ಟೇಬಲ್ ಚಮಚ, ಪುದಿನಾ ಹಾಗೂ ಕೊತ್ತಂಬರಿ ಸೊಪ್ಪು ಸ್ವಲ್ಪ, ಚಕ್ಕೆ – 1 ಇಂಚು, ಲವಂಗ – 6, ಏಲಕ್ಕಿ – 2, ಉಪ್ಪು ರುಚಿಗೆ ತಕ್ಕಷ್ಟು, ಎಣ್ಣೆ 2 ಚಮಚ, ಅರಿಸಿನ – ಅರ್ಧ ಚಮಚ, ಕರಿಬೇವು ಸ್ವಲ್ಪ.

ತಯಾರಿಸುವ ವಿಧಾನ: ಈರುಳ್ಳಿ ಹಾಗೂ ಕರಿಬೇವನ್ನು ಬಿಟ್ಟು ಉಳಿದ ಎಲ್ಲಾ ಪದಾರ್ಥಗಳನ್ನು ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಕುಕರ್‌ಗೆ 2 ಚಮಚ ಎಣ್ಣೆ ಹಾಕಿ, ಕಾದ ನಂತರ ಈರುಳ್ಳಿ ಹಾಗೂ ಕರಿಬೇವನ್ನು ಹಾಕಿ ಹುರಿದುಕೊಳ್ಳಿ. ಅದಕ್ಕೆ ರುಬ್ಬಿದ ಮಸಾಲೆ ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು, ಅರಿಸಿನ ಹಾಕಿ. ಎಣ್ಣೆ ಬಿಡುವವರೆಗೂ ಹುರಿದುಕೊಂಡು, ನಂತರ ಚಿಕನ್ ಸೇರಿಸಿ ಐದು ನಿಮಿಷ ಬಾಡಿಸಿ. ಬೇಕಾಗುವಷ್ಟು ನೀರು ಹಾಕಿ ಮುಚ್ಚಳ ಮುಚ್ಚಿ ಒಂದು ಕೂಗು ಕೂಗಿಸಿದರೆ, ನಾಟಿ ಶೈಲಿಯ ಚಿಕನ್ ಚಾಪ್ಸ್ ರೆಡಿ.

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಪ್ರಜಾವಾಣಿ ನೋಡಿಯೊ

ಚಿಕನ್ ಲಿವರ್ ಪೆಪ್ಪರ್ ಡ್ರೈ

ಬೇಕಾಗುವ ಸಾಮಗ್ರಿಗಳು: ಚಿಕನ್ ಲಿವರ್ – ಅರ್ಧ ಕೆಜಿ, ಈರುಳ್ಳಿ – 1, ಟೊಮೆಟೊ – 1, ಹಸಿಮೆಣಸಿನಕಾಯಿ – 3, ಕರಿಬೇವು - ಸ್ವಲ್ಪ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ – 1 ಟೇಬಲ್ ಚಮಚ, ಕಾಳುಮೆಣಸಿನಪುಡಿ – 1 ಚಮಚ, ಕೆಂಪು ಮೆಣಸಿನಕಾಯಿಪುಡಿ ಅರ್ಧ ಚಮಚ, ಧನಿಯಾ ಪುಡಿ – 1 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಅರಿಸಿನ – ಕಾಲು ಚಮಚ, ಕೊತ್ತಂಬರಿ ಸೊಪ್ಪು - ಸ್ವಲ್ಪ

ತಯಾರಿಸುವ ವಿಧಾನ: ಒಂದು ಬಾಣಲೆಯನ್ನು ಬಿಸಿಗಿಟ್ಟು, ಅದಕ್ಕೆ 2 ಚಮಚ ಎಣ್ಣೆಯನ್ನು ಹಾಕಿ ಈರುಳ್ಳಿ, ಟೊಮೆಟೊ, ಹಸಿಮೆಣಸಿನಕಾಯಿ, ಕರಿಬೇವು ಸೇರಿಸಿ ಚೆನ್ನಾಗಿ ಹುರಿದುಕೊಳ್ಳಿ. ನಂತರ ಚಿಕನ್ ಲಿವರ್ ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು, ಅರಿಸಿನ, ಕೆಂಪುಮೆಣಸಿನ ಪುಡಿ, ಕೊತ್ತಂಬರಿ ಪುಡಿ ಹಾಕಿ ಚಿಕನ್ ಲಿವರ್ ಅನ್ನು ಬಾಡಿಸಿಕೊಳ್ಳಿ. ಇದಕ್ಕೆ ನೀರು ಸೇರಿಸುವ ಅವಶ್ಯಕತೆ ಇಲ್ಲ. ಲಿವರ್ ಬೆಂದ ನಂತರ ಕಾಳುಮೆಣಸಿನ ಪುಡಿ, ಗರಂಮಸಾಲೆ ಸೇರಿಸಿ ಮತ್ತೆ 2 ನಿಮಿಷ ಬಾಡಿಸಿಕೊಂಡು ಕೊನೆಯದಾಗಿ ಕೊತ್ತಂಬರಿಯನ್ನು ಸೇರಿಸಿದರೆ ಚಿಕನ್ ಲಿವರ್ ಪೆಪ್ಪರ್ ಡ್ರೈ ಸಿದ್ಧ.





ಗೌಡ್ರು ಸ್ಪೆಷಲ್ ನಾಟಿಕೋಳಿ ಸಾರು

ರುಬ್ಬಲು ಬೇಕಾಗುವ ಸಾಮಗ್ರಿಗಳು: ಈರುಳ್ಳಿ – 1, ಬೆಳ್ಳುಳ್ಳಿ – 20, ಶುಂಠಿ – 1 ಇಂಚು, ಕೆಂಪು ಮೆಣಸಿನಕಾಯಿ – 6, ಮೆಣಸು – 1 ಟೀ ಚಮಚ, ಹುರಿಗಡಲೆ – 1 ಟೀ ಚಮಚ, ಗಸೆಗಸೆ – 1 ಟೀ ಚಮಚ, ಚಕ್ಕೆ – 1 ಇಂಚು, ಲವಂಗ – 6, ಕೊತ್ತಂಬರಿ ಪುಡಿ – 2 ಟೇಬಲ್ ಚಮಚ, ಕೊತ್ತಂಬರಿ ಸೊಪ್ಪು – ಸ್ವಲ್ಪ, ತೆಂಗಿನತುರಿ – ಅರ್ಧ ಹೋಳು (ಈ ಎಲ್ಲಾ ಪದಾರ್ಥಗಳನ್ನು ಒಂದು ಟೀ ಚಮಚ ಎಣ್ಣೆ ಹಾಕಿ ಹುರಿದು, ನುಣ್ಣಗೆ ರುಬ್ಬಿಕೊಳ್ಳಿ). 1 ಟೇಬಲ್ ಚಮಚ ಹುಚ್ಚೆಳ್ಳನ್ನು ಅರ್ಧ ಗಂಟೆ ನೀರಿನಲ್ಲಿ ನೆನೆಸಿ ರುಬ್ಬಿದ ನಂತರ, ಸೋಸಿ ಹಾಲು ತೆಗೆದಿಟ್ಟುಕೊಳ್ಳಿ.

ತಯಾರಿಸುವ ವಿಧಾನ: ಕುಕರ್‌ಗೆ 2 ಟೇಬಲ್ ಚಮಚ ಎಣ್ಣೆ ಹಾಕಿ ಬಿಸಿಯಾದ ಮೇಲೆ ಈರುಳ್ಳಿ, ಟೊಮೆಟೊ, ಸ್ವಲ್ಪ ಮೆಂತ್ಯ ಸೊಪ್ಪು, ಸೇರಿಸಿ ಚೆನ್ನಾಗಿ ಹುರಿದುಕೊಳ್ಳಿ. ನಾಟಿ ಕೋಳಿಯನ್ನು ಸೇರಿಸಿ. ರುಚಿಗೆ ತಕ್ಕಷ್ಟು ಉಪ್ಪು, ಅರ್ಧ ಚಮಚ ಅರಿಸಿನ ಪುಡಿ ಹಾಕಿ 5 ನಿಮಿಷ ಬಾಡಿಸಿಕೊಳ್ಳಿ. ಇದಕ್ಕೆ ರುಬ್ಬಿದ ಮಸಾಲೆ ಸೇರಿಸಿ ನೀರು ಹಾಕಿ ಕುಕರ್ ಮುಚ್ಚಿ 5 ವಿಷಲ್ ಕೂಗಿಸಿ. ನಂತರ ಇದಕ್ಕೆ ರುಬ್ಬಿಕೊಂಡ ಹುಚ್ಚೆಳ್ಳಿನ ಹಾಲನ್ನು ಸೇರಿಸಿ ಒಂದು ಕುದಿ ಕುದಿಸಿದರೆ ಗೌಡ್ರು ಸ್ಪೆಷಲ್ ನಾಟಿಕೋಳಿ ಸಾರು ಮುದ್ದೆಯೊಂದಿಗೆ ಸವಿಯಲು ಸಿದ್ದ.

(ಲೇಖಕಿ: ಹೇಮಾಸ್ ಕುಕಿಂಗ್ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಶಾಂಘೈ ಸಹಕಾರ ಸಂಘಟನೆಯ ವಾರ್ಷಿಕ ಶೃಂಗಸಭೆ

ತಾಲಿಬಾನ್‌ಗೆ ಮಾನ್ಯತೆ: ತಳ್ಳಿಹಾಕಿದ ಪ್ರಧಾನಿ

ನವದೆಹಲಿ: ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ನೇತೃತ್ವದ ಸರ್ಕಾರಕ್ಕೆ ಮಾನ್ಯತೆ ನೀಡುವ ಸಾಧ್ಯತೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ತಳ್ಳಿಹಾಕಿದ್ದಾರೆ. ಶಾಂಘೈ ಸಹಕಾರ ಸಂಘಟನೆ ಶೃಂಗಸಭೆಯನ್ನು (ಎಸ್‌ಸಿಒ) ಉದ್ದೇಶಿಸಿ ಅವರು ಮಾತನಾಡಿದರು.

ಅಫ್ಗಾನಿಸ್ತಾನದಲ್ಲಿ ಹೊಸ ಆಡಳಿತಕ್ಕೆ ಮಾನ್ಯತೆ ನೀಡುವ ಮುನ್ನ ಜಾಗತಿಕ ಸಮುದಾಯ ಜಾಗರೂಕತೆಯಿಂದ ನಡೆದುಕೊಳ್ಳಬೇಕು ಎಂದು ಮೋದಿ ಒತ್ತಾಯಿಸಿದ್ದಾರೆ.

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ನೇತೃತ್ವದ ಹೊಸ ಆಡಳಿತವು ಎಲ್ಲರನ್ನೂ ಒಳಗೊಂಡ ಸ್ವರೂಪದಲ್ಲಿ ರಚನೆಯಾಗಿಲ್ಲ. ಹೀಗಾಗಿ ಅದರ ನ್ಯಾಯಬದ್ಧತೆಯು ಪ್ರಶ್ನಾರ್ಹವಾಗಿದೆ ಎಂದು ಭಾರತ ಶುಕ್ರವಾರ ಮೊದಲ ಬಾರಿಗೆ ಸ್ಪಷ್ಟವಾಗಿ ಹೇಳಿದೆ.

ಅಫ್ಗಾನಿಸ್ತಾನದ ಎಲ್ಲ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡುವ, ಮಹಿಳೆ ಹಾಗೂ ಮಕ್ಕಳ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ರಚನೆಯಾದಲ್ಲಿ, ಅದಕ್ಕೆ ಮಾನ್ಯತೆ ನೀಡುವ ಬಗ್ಗೆ ಆಲೋಚನೆ ಮಾಡುವುದಾಗಿ ಈ ಮೊದಲು ಭಾರತ ತನ್ನ ನಿಲುವು ತಿಳಿಸಿತ್ತು. ಆದರೆ ತೀವ್ರವಾದಿಗಳಿಂದಲೇ ತುಂಬಿರುವ, ಮಹಿಳೆಯರನ್ನು ಹೊರಗಿಟ್ಟು ತಾಲಿಬಾನ್ ಸರ್ಕಾರ ರಚಿಸಿದೆ.

ಭಯೋತ್ಪಾದನೆ ಮತ್ತು ತೀವ್ರವಾದದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಶಾಂಘೈ ಸಹಕಾರ ಸಂಘಟನೆಯು ಸ್ಪಷ್ಟ ಮಾದರಿಯೊಂದನ್ನು ರೂಪಿಸಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ್ದಾರೆ. ಭಯೋತ್ಪಾದನೆಯ ಸವಾಲುಗಳು ಪ್ರಾದೇಶಿಕವಾಗಿ ಹೆಚ್ಚಾಗುತ್ತಿವೆ. ಅಫ್ಗಾನಿಸ್ತಾನದ ಇತ್ತೀಚಿನ ಬೆಳವಣಿಗೆಯೇ ಇದಕ್ಕೆ ತಾಜಾ ನಿದರ್ಶನ ಎಂದು ಅವರು ಹೇಳಿದರು.

‘ಈ ಪ್ರದೇಶದಲ್ಲಿ ಶಾಂತಿ, ಭದ್ರತೆ ಮತ್ತು ನಂಬಿಕೆಯ ಕೊರತೆಗಳೇ ನಮಗೆ ದೊಡ್ಡ ಸವಾಲು ಎಂದು ನನಗೆ ಅನಿಸುತ್ತಿದೆ. ಇವೆಲ್ಲವೂ ಒಟ್ಟಾಗಿ ತೀವ್ರವಾದದ ಹೆಚ್ಚಳಕ್ಕೆ ನೀರೆರೆಯುತ್ತವೆ. ಅಫ್ಗನ್‌ನ ಈಚಿನ ಬೆಳವಣಿಗೆಗಳಲ್ಲಿ ಇದು ಪ್ರತಿಬಿಂಬಿತವಾಗಿದೆ’ ಎಂದಿದ್ದಾರೆ.

‘ಇಸ್ಲಾಮ್‌ಗೆ ಸಂಬಂಧಿಸಿದ ಉದಾರವಾದಿ, ಸಹಿಷ್ಣುತಾವಾದಿ ಮತ್ತು ಎಲ್ಲರನ್ನೂ ಒಳಗೊಳ್ಳುವ ಸಂಸ್ಥೆಗಳು ಮತ್ತು ಸಂಪ್ರದಾಯಗಳ ನಡುವೆ ಬಲವಾದ ಜಾಲವನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಶಾಂಘೈ ಸಹಕಾರ ಸಂಘಟನೆಯು ಮಾಡಬೇಕು’ ಎಂದು ಮೋದಿ ಹೇಳಿದರು.

ಸಂಘಟನೆಯ 20ನೇ ವರ್ಷಾಚರಣೆಯು ಭವಿಷ್ಯದ ಬಗ್ಗೆ ಚಿಂತನೆ ನಡೆಸಲು ಅತ್ಯಂತ ಸೂಕ್ತ ಸಮಯ ಎಂದು ಮೋದಿ ಹೇಳಿದರು. ಸಂಘಟನೆಯು ಯಶಸ್ವಿಯಾಗಲು ಮುಖ್ಯ ಕಾರಣವೆಂದರೆ, ಅದು ಪ್ರಾದೇಶಿಕ ಆದ್ಯತೆ ಹೊಂದಿರುವುದೇ ಆಗಿದೆ ಎಂದರು.

ಶಾಂಘೈ ಸಹಕಾರ ಸಂಘಟನೆ ಮತ್ತು ಅದರ ಅಂಗಸಂಸ್ಥೆಯಾದ ಪ್ರಾದೇಶಿಕ ಭಯೋತ್ಪಾದನಾ ನಿಗ್ರಹ ವ್ಯವಸ್ಥೆ (ಆರ್‌ಎಟಿಎಸ್) ಜತೆ ಪ್ರಬಲ ಭದ್ರತಾ ಸಹಕಾರ ಹೊಂದಲು ಭಾರತ ಉತ್ಸಾಹ ತೋರಿದೆ. ಈ ಸಂಸ್ಥೆಯು ಪ್ರಾದೇಶಿಕ ಭದ್ರತೆ ಮತ್ತು ರಕ್ಷಣೆ ವಿಷಯಗಳನ್ನು ವಿಶೇಷವಾಗಿ ನಿರ್ವಹಿಸುತ್ತದೆ.

ಶಾಂಘೈ ಸಹಕಾರ ಸಂಘಟನೆಯು ಆರ್ಥಿಕ ಹಾಗೂ ಭದ್ರತಾ ಸಂಸ್ಥೆಯಾಗಿದ್ದು, ಇದು ಬೃಹತ್ ಅಂತರರಾಷ್ಟ್ರೀಯ ಸಂಘಟನೆಗಳಲ್ಲಿ ಒಂದಾಗಿದೆ.


ಶಾಂಘೈ ಸಹಕಾರ ಸಂಘಟನೆ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು–ಪಿಟಿಐ ಚಿತ್ರ

ತೀವ್ರವಾದದ ವಿರುದ್ಧದ ಹೋರಾಟವು ಪ್ರಾದೇಶಿಕ ಭದ್ರತೆಯ ಖಾತರಿ ನೀಡುವುದರ ಜತೆಗೆ, ಈ ಪ್ರದೇಶದ ಯುವಜನರಿಗೆ ಉಜ್ವಲ ಭವಿಷ್ಯ ರೂಪಿಸಬೇಕು
ನರೇಂದ್ರ ಮೋದಿ, ಪ್ರಧಾನಿ

ಯಾವುದೇ ನೆಪದಲ್ಲಿ ಬಾಹ್ಯ ಶಕ್ತಿಗಳು ಯಾವುದೇ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ನೀಡಬಾರದು
ಷಿ ಜಿನ್‌ಪಿಂಗ್, ಚೀನಾ ಅಧ್ಯಕ್ಷ

ಶಾಂತಿಯುತ ಮತ್ತು ಸ್ಥಿರ ಅಫ್ಗಾನಿಸ್ತಾನವನ್ನು ಪಾಕ್ ಬಯಸುತ್ತದೆ. ಇದಕ್ಕಾಗಿ ಬೆಂಬಲ ನೀಡುತ್ತಲೇ ಇರುತ್ತದೆ. ಅಫ್ಗಾನಿಸ್ತಾನವನ್ನು ಹೊರಗಿನಿಂದ ನಿಯಂತ್ರಿಸಲಾಗುವುದಿಲ್ಲ
ಇಮ್ರಾನ್ ಖಾನ್, ಪಾಕಿಸ್ತಾನದ ಪ್ರಧಾನಿ

ಸ್ಥಳೀಯ ಪರಿಸ್ಥಿತಿಯನ್ನು ಪರಿಗಣಿಸಿ, ವಿವಿಧ ದೇಶಗಳ ಬ್ಯಾಂಕ್‌ಗಳಲ್ಲಿರುವ ಅಫ್ಗಾನಿಸ್ತಾನದ ಖಾತೆಗಳನ್ನು ಸಕ್ರಿಯಗೊಳಿಸಲು ವಿಶ್ವ ಸಮುದಾಯದ ಮನವೊಲಿಸಬೇಕು
ಶವ್ಕತ್ ಮಿರ್ಜಿಯೊಯೆವ್, ಉಜ್ಬೇಕಿಸ್ತಾನದ ಅಧ್ಯಕ್ಷ

ದೃಷ್ಟಿಕೋನ: ಭಾರತದ ನಿಲುವು ಒಪ್ಪಿದ ಚೀನಾ

ಭಾರತದೊಂದಿಗಿನ ತನ್ನ ಸಂಬಂಧವನ್ನು ಮೂರನೇ ರಾಷ್ಟ್ರದ ದೃಷ್ಟಿಕೋನದಲ್ಲಿ ಚೀನಾ ನೋಡಬಾರದು ಎಂಬ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ಪ್ರತಿಪಾದನೆಯನ್ನು ಚೀನಾ ಒಪ್ಪಿಕೊಂಡಿದೆ. ‘ಚೀನಾ-ಭಾರತ ಸಂಬಂಧ ತನ್ನದೇ ಆದ ‘ಆಂತರಿಕ ತರ್ಕ’ವನ್ನು ಹೊಂದಿವೆ ಎಂದು ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಹೇಳಿದ್ದಾರೆ.

ದುಶಾಂಬೆಯಲ್ಲಿ ವಾಂಗ್ ಯಿ ಅವರನ್ನು ಭೇಟಿ ಮಾಡಿದ ಜೈಶಂಕರ್, ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಉಳಿದಿರುವ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲು ಎರಡೂ ಕಡೆಯವರು ಕೆಲಸ ಮಾಡಬೇಕು ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

ಎರಡೂ ದೇಶಗಳು ಪರಸ್ಪರ ಗೌರವದ ಆಧಾರದ ಮೇಲೆ ಸಂಬಂಧವನ್ನು ಸ್ಥಾಪಿಸುವ ಅಗತ್ಯವಿದೆ ಎಂದು ಚೀನಾದ ವಿದೇಶಾಂಗ ಸಚಿವರಿಗೆ ಅವರು ಹೇಳಿದರು.

‘ಚೀನಾ-ಭಾರತ ಗಡಿ ಸಮಸ್ಯೆಗೆ ಸರಿಯಾದ ಪರಿಹಾರವನ್ನು ಪಡೆಯಲು ಚೀನಾ ಯಾವಾಗಲೂ ಸಕಾರಾತ್ಮಕವಾಗಿದೆ’ ಎಂದು ಚೀನಾದ ವಿದೇಶಾಂಗ ಸಚಿವಾಲಯ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ವಾಂಗ್ ಯಿ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಜೈಶಂಕರ್ ಅಭಿಪ್ರಾಯವನ್ನು ಪ್ರಸ್ತಾಪಿಸಿದಾಗ, ‘ಭಾರತದ ನಿಲುವನ್ನು ಒಪ್ಪುತ್ತೇವೆ’ ಎಂದು ಸಚಿವಾಲಯದ ವಕ್ತಾರ ಜಾವೊ ಲಿಜಿಯಾನ್ ಉತ್ತರಿಸಿದರು.

ಜೈಶಂಕರ್ ಅವರು ರಷ್ಯಾದ ವಿದೇಶಾಂಗ ಸಚಿವರಾದ ಸೆರ್ಗೆ ಲಾವ್ರೊವ್ ಅವರೊಂದಿಗೆ ಅಫ್ಗಾನಿಸ್ತಾನ ಸೇರಿದಂತೆ ಸಮಕಾಲೀನ ವಿಷಯಗಳ ಕುರಿತು ಫಲಪ್ರದ ಚರ್ಚೆ ನಡೆಸಿದರು. ಇರಾನಿನ ಅಧ್ಯಕ್ಷ ಇಬ್ರಾಹಿಂ ರೈಸಿಯೊಂದಿಗೆ ಜಾಗತಿಕ ವ್ಯವಹಾರಗಳ ದೃಷ್ಟಿಕೋನಗಳನ್ನು ಹಂಚಿಕೊಂಡರು. ಇಬ್ಬರೂ ನಾಯಕರೊಂದಿಗೆ ಪ್ರತ್ಯೇಕ ಅನೌಪಚಾರಿಕ ಸಭೆಗಳನ್ನು ನಡೆಸಿದರು.

ಸೂಫಿ ಹಿರಿಮೆ ಪ್ರಸ್ತಾಪ

ಸೂಫಿ ಪಂಥ, ಮಧ್ಯ ಏಷ್ಯಾದ ಸಾಂಸ್ಕೃತಿಕ ಹಿರಿಮೆಯ ಬಗ್ಗೆ ಮಾತನಾಡಿದ ಪ್ರಧಾನಿ ಮೋದಿ, ಈ ಐತಿಹಾಸಿಕ ಪರಂಪರೆಯನ್ನು ಕಾಪಾಡಿಕೊಳ್ಳಬೇಕಾದರೆ, ತೀವ್ರವಾದದ ವಿರುದ್ಧದ ಮಾದರಿ ಹೋರಾಟ ಅಗತ್ಯ ಎಂದು ಪ್ರತಿಪಾದಿಸಿದರು.

‘ಮಧ್ಯ ಏಷ್ಯಾ ಭಾಗವು ಶತಮಾನಗಳಿಂದ ಪ್ರಗತಿಪರ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಜಗತ್ತಿನಾದ್ಯಂತ ಹಂಚಿರುವುದು ಇತಿಹಾಸವನ್ನು ಗಮನಿಸಿದರೆ ತಿಳಿಯುತ್ತದೆ. ಸೂಫಿ ಪಂಥವು ಇದಕ್ಕೆ ಶ್ರೇಷ್ಠ ನಿದರ್ಶನ’ ಎಂದರು.

ಮಧ್ಯ ಏಷ್ಯಾದ ಜೊತೆ ಸಂಪರ್ಕವನ್ನು ಬಲಪಡಿಸುವ ನಿಲುವಿಗೆ ಭಾರತ ಬದ್ಧವಾಗಿದೆ ಎಂದ ಪ್ರಧಾನಿ, ಯಾವುದೇ ಸಂಪರ್ಕ ಕಾರ್ಯಕ್ರಮವು ಏಕಮುಖವಾಗಿರಬಾರದು. ಅದು ಸಮಾಲೋಚನೆ, ಪಾರದರ್ಶಕತೆ ಮತ್ತು ಭಾಗವಹಿಸುವಿಕೆಯ ಜೊತೆ ಮಿಳಿತವಾಗಿರಬೇಕು ಎಂದು ಅಭಿಪ್ರಾಪಟ್ಟರು.

‘ಭಯೋತ್ಪಾದನೆಯ ಕಾರಣದಿಂದಲೇ ಈ ಭಾಗದ ಆರ್ಥಿಕ ಅವಕಾಶಗಳ ಬಾಗಿಲು ತೆರೆದಿಲ್ಲ. ಮಧ್ಯ ಏಷ್ಯಾದ ರಾಷ್ಟ್ರಗಳಲ್ಲಿರುವ ಅಪನಂಬಿಕೆಯಿಂದಾಗಿ ಅವುಗಳ ನಡುವಿನ ಸಂಪರ್ಕ ಸಾಧ್ಯವಾಗಿಲ್ಲ. ಭಾರತದ ವಿಶಾಲ ಮಾರುಕಟ್ಟೆಯೊಂದಿಗೆ ಸಂಪರ್ಕ ಸಾಧಿಸುವ ಮೂಲಕ ಮಧ್ಯ ಏಷ್ಯಾದ ದೇಶಗಳು ಅಪಾರ ಲಾಭ ಪಡೆಯಬಹುದು’ ಎಂದು ಪ್ರಧಾನಿ ತಿಳಿಸಿದರು.

ಮೈಸೂರಿನಲ್ಲಿ ಮತ್ತೊಂದು ಅತ್ಯಾಚಾರ; ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ಫಾರಂಹೌಸ್‌ವೊಂದರಲ್ಲಿ ಗುರುವಾರ 6 ವರ್ಷದ ಬಾಲಕಿಯ ಮೇಲೆ ಅದೇ ಫಾರಂಹೌಸ್‌ನ ನೌಕರನೊಬ್ಬ ಅತ್ಯಾಚಾರ ನಡೆಸಿದ್ದಾನೆ.

ಜಿಲ್ಲೆಯ ಠಾಣೆಯೊಂದರಲ್ಲಿ ದೂರು ದಾಖಲಾಗುತ್ತಿದ್ದಂತೆ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅತ್ಯಾಚಾರ ನಡೆದಿರುವ ಹಾಗೂ ಆರೋಪಿಯನ್ನು ಬಂಧಿಸಿರುವ ವಿಚಾರವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಅವರು ‘ಪ್ರಜಾವಾಣಿ’ಗೆ ಖಚಿತಪಡಿಸಿದರು.

ಕರ್ನಾಟಕ ಹೈಕೋರ್ಟ್‌ಗೆ ಅವಸ್ಥಿ ಸಿಜೆ?

ಒಂದನೇ ಪುಟದಿಂದ

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಕೊಲಿಜಿಯಂ, ವಿವಿಧ ಹೈಕೋರ್ಟ್‌ಗಳ 28 ನ್ಯಾಯಮೂರ್ತಿಗಳ ವರ್ಗಾವಣೆಗೂ ಶಿಫಾರಸು ಮಾಡಿದೆ. ಗುರುವಾರ ಸಂಜೆ ಈ ಶಿಫಾರಸುಗಳನ್ನು ಮಾಡಲಾಗಿದೆ.

ಆದರೆ, ಈ ಬಗ್ಗೆ ಅಧಿಕೃತ ಘೋಷಣೆ ಇನ್ನಷ್ಟೇ ಆಗಬೇಕಿದೆ. ಕರ್ನಾಟಕ, ಅಲಹಾಬಾದ್, ಕಲ್ಕತ್ತಾ, ಛತ್ತೀಸಗಡ, ಗುಜರಾತ್, ಹಿಮಾಚಲ ಪ್ರದೇಶ, ಸಿಕ್ಕಿಂ ಮತ್ತು ತೆಲಂಗಾಣ ಹೈಕೋರ್ಟ್‌ನಲ್ಲಿ ಈಗ ಹಂಗಾಮಿ ಮುಖ್ಯ ನ್ಯಾಯಮೂರ್ತಿಗಳಿದ್ದಾರೆ.

ಐಎಸ್ ಚಟುವಟಿಕೆ: ಮಾಹಿತಿ ನೀಡಲು ಎನ್‌ಐಎ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಸ್ಲಾಮಿಕ್ ಸ್ಟೇಟ್ (ಐಎಸ್) ಸಂಘಟನೆ ಪರವಾಗಿ ಉಗ್ರವಾದಿ ಚಟುವಟಿಕೆ ಮತ್ತು ನೇಮಕಾತಿ ಪ್ರಯತ್ನಗಳ ಬಗ್ಗೆ ಮಾಹಿತಿ ನೀಡುವಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಸಾರ್ವಜನಿಕರಿಗೆ ಮನವಿ ಮಾಡಿದೆ.

ಆನ್‌ಲೈನ್‌ನಲ್ಲಿ ನಿರಂತರ ಪ್ರಚಾರದ ಮೂಲಕ ಐಎಸ್ ತನ್ನ ಕಾರ್ಯಸೂಚಿಯನ್ನು ಭಾರತದಲ್ಲಿ ಹರಡಲು ಪ್ರಯತ್ನಿಸುತ್ತಿದೆ ಎಂಬುದು ತನಿಖೆಯಿಂದ ತಿಳಿದು ಬಂದಿದೆ ಎಂದು ಎನ್‌ಐಎ ತಿಳಿಸಿದೆ.

ಭಾರತದಲ್ಲಿ ಐಎಸ್ ಚಟುವಟಿಕೆಗಳ ಬಗ್ಗೆ ಯಾವುದೇ ಮಾಹಿತಿ ಇರುವವರು 011-24368800ಗೆ ಸಂಪರ್ಕಿಸಿ ಎಂದು ಎನ್‌ಐಎ ತಿಳಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಮೋಸದ ಜಾಲಕ್ಕೆ ಬೀಳುವ ಯುವಕರನ್ನು ಗುರಿಯಾಗಿಸಲಾಗುತ್ತಿದೆ. ಫೇಸ್‌ಬುಕ್, ಟ್ವಿಟರ್ ಮತ್ತು ಇನ್‌ಸ್ಟಾಗ್ರಾಮ್‌ನಂತಹ ಮುಕ್ತ ಸಾಮಾಜಿಕ ಮಾಧ್ಯಮ ವೇದಿಕೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ಒಬ್ಬ ವ್ಯಕ್ತಿಯು ಒಮ್ಮೆ ಆಸಕ್ತಿ ತೋರಿಸಿದರೆ, ಆ ವ್ಯಕ್ತಿಯ ಜೊತೆ ವಿದೇಶದಲ್ಲಿರುವ ಆನ್‌ಲೈನ್ ಹ್ಯಾಂಡ್ಲರ್‌ಗಳು ಗೂಢಲಿಪಿ ವೇದಿಕೆಗಳ ಮೂಲಕ ಸಂವಹನ ನಡೆಸುತ್ತಾರೆ ಎಂದು ಎನ್‌ಐಎ ಹೇಳಿದೆ.

ವ್ಯಕ್ತಿಯ ವಿಶ್ವಾಸಾರ್ಹತೆಗೆ ಅನುಗುಣವಾಗಿ ಕೆಲಸಗಳನ್ನು ನೀಡಲಾಗುತ್ತದೆ. ಆನ್‌ಲೈನ್ ವಿಷಯವನ್ನು ಅಪ್‌ಲೋಡ್ ಮಾಡುವುದು, ಸ್ಥಳೀಯ ಭಾಷೆಗೆ ಐಎಸ್ ಪತ್ರಗಳನ್ನು ಅನುವಾದ ಮಾಡುವುದು, ಪಿತೂರಿ ಮಾಡುವುದು, ಮಾಡ್ಯೂಲ್ ತಯಾರಿಕೆ, ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ಸಂಗ್ರಹ, ಸ್ಫೋಟಕ ತಯಾರಿಕೆ, ಭಯೋತ್ಪಾದನಾ ಚಟುವಟಿಕೆಗಳಿಗೆ ನಿಧಿ ಸಂಗ್ರಹ ಮತ್ತು ಭಯೋತ್ಪಾದಕ ದಾಳಿಗಳನ್ನು ನಡೆಸಲು ಅವರನ್ನು ಬಳಸಿಕೊಳ್ಳಲಾಗುತ್ತದೆ.

ಇಲ್ಲಿಯವರೆಗೆ ಎನ್‌ಐಎ ತನಿಖೆ ನಡೆಸಿದ 37 ಭಯೋತ್ಪಾದಕ ದಾಳಿ ಪ್ರಕರಣಗಳಲ್ಲಿ ದಾಳಿಯ ಹಿಂದೆ ಐಎಸ್ ಸಿದ್ಧಾಂತ ಪ್ರೇರಣೆಯಾಗಿದೆ. ಈ ಪ್ರಕರಣಗಳಲ್ಲಿ ಒಟ್ಟು 168 ಆರೋಪಿಗಳನ್ನು ಬಂಧಿಸಲಾಗಿದೆ. 31 ಪ್ರಕರಣಗಳಲ್ಲಿ ಚಾರ್ಜ್ ಶೀಟ್ ಸಲ್ಲಿಸಲಾಗಿದೆ. ವಿಚಾರಣೆಯ ನಂತರ 27 ಆರೋಪಿಗಳನ್ನು ಶಿಕ್ಷಿಸಲಾಗಿದೆ.

‘ಅಧಿಕಾರಿಗಳ ತಪ್ಪಿನಿಂದ ದೇವಸ್ಥಾನ ತೆರವು’

ಪ್ರಜಾವಾಣಿ ವಾರ್ತೆ


ನಳಿನ್ ಕುಮಾರ್ ಕಟೀಲ್

ಮೂಡುಬಿದಿರೆ: ‘ನಂಜನಗೂಡು ದೇವಸ್ಥಾನ ತೆರವು ವಿಚಾರದಲ್ಲಿ ಅಧಿಕಾರಿಗಳು ತಪ್ಪು ಹೆಜ್ಜೆ ಇಟ್ಟಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

‘ಬಿಜೆಪಿ ನೇತೃತ್ವದ ಸರ್ಕಾರವು ಧಾರ್ಮಿಕ ಕ್ಷೇತ್ರಗಳು ಮತ್ತು ಧರ್ಮದ ರಕ್ಷಣೆಗೆ ಬದ್ಧವಾಗಿದೆ. ನಂಜನಗೂಡಿನಲ್ಲಿ ಕೆಡವಲಾದ ದೇವಸ್ಥಾನದ ಮರುನಿರ್ಮಾಣಕ್ಕೆ ಸರ್ಕಾರ ಚಿಂತನೆ ನಡೆಸಿದೆ’ ಎಂದು ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ತಿಳಿಸಿದರು.

‘ಸುಪ್ರೀಂ ಕೋರ್ಟ್ ಆದೇಶ ಪಾಲನೆಗಾಗಿ ಅಧಿಕಾರಿಗಳು ಈ ರೀತಿ ಮಾಡಿದ್ದಾರೆ. ದೇವಸ್ಥಾನ ತೆರವು ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಈಗಾಗಲೇ ಅಧಿಕಾರಿಗಳಿಗೆ ಕೆಲವು ಸೂಚನೆಗಳನ್ನು ನೀಡಿದ್ದಾರೆ. ದೇವಾಲಯಗಳನ್ನು ಉಳಿಸಲು ಕಾನೂನು ಹೋರಾಟ ಕೈಗೊಳ್ಳುವ ವಿಚಾರವಾಗಿ ಪಕ್ಷದ ಸಭೆ ಹಾಗೂ ಶಾಸಕಾಂಗ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ’ ಎಂದು ನಳಿನ್ ಕುಮಾರ್ ಹೇಳಿದರು.

ದೇವಸ್ಥಾನ ಒಡೆದಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿದವರು ಹಿಂದೂ ತಾಲಿಬಾನಿಗಳು. ರೈತರ ಆತ್ಮಹತ್ಯೆ, ನಿರುದ್ಯೋಗ, ಬೆಲೆ ಏರಿಕೆ ವಿರುದ್ಧ ದನಿಯೆತ್ತದ ಕೆಲವರು, ಇದೀಗ ದೇಗುಲ ಒಡೆದ ಹೆಸರಿನಲ್ಲಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಹೊರಟಿದ್ದಾರೆ
ಮಹೇಶ್ಚಂದ್ರಗುರು, ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ

ದೇಗುಲ ಕಟ್ಟಡ ತೆರವು ಸರಿಯಲ್ಲ



ಮೈಸೂರು: ‘ದೇವಾಲಯಗಳ ಕಟ್ಟಡ ತೆರವು ಮಾಡಿದ್ದು ಸರಿಯಲ್ಲ. ಈ ಬಗ್ಗೆ ಮೊದಲು ಚರ್ಚೆ ಮಾಡಬೇಕಿತ್ತು. ಯಾವುದೇ ಕಾರಣಕ್ಕೂ ತೆರವು ಮಾಡಬಾರದು’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಲ್ಲಿ ಶುಕ್ರವಾರ ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಬಿ.ವೈ.ವಿಜಯೇಂದ್ರ ಸದ್ಯಕ್ಕೆ ಯಾವುದೇ ಉಪಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಮುಂದೆ ಅವರು ಸ್ಪರ್ಧಿಸುವ ಕ್ಷೇತ್ರವೂ ಅಂತಿಮವಾಗಿಲ್ಲ’ ಎಂದರು.

ಭಾವನೆಗಳಿಗೆ ನೋವುಂಟು ಮಾಡಿದರೆ ಒಳ್ಳೆಯದಾಗುವುದಿಲ್ಲ



ಉಡುಪಿ: ‘ಯಾವುದೇ ಸಮುದಾಯ ಅಥವಾ ಧರ್ಮದ ಅನುಯಾಯಿಗಳಿಗೆ ನೋವು ಉಂಟುಮಾಡಿದರೆ ನಮಗೆ ಒಳ್ಳೆಯದಾಗುವುದಿಲ್ಲ’ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನಲ್ಲಿ ದೇವಸ್ಥಾನ ಧ್ವಂಸ, ಹಿಂದೂ ಸಂಘಟನೆಗಳ ಪ್ರತಿಭಟನೆ ವಿಚಾರವಾಗಿ ಶುಕ್ರವಾರ ಅವರು ಪ್ರತಿಕ್ರಿಯೆ ನೀಡಿದರು. ‘ಶ್ರದ್ಧಾ ಕೇಂದ್ರಗಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಅಕ್ರಮವಾಗಿ ಶ್ರದ್ಧಾಕೇಂದ್ರಗಳು ನಿರ್ಮಾಣವಾಗಿದ್ದರೆ ಸಂಬಂಧಪಟ್ಟವರಿಗೆ ಪೂರ್ವ ಸೂಚನೆ ನೀಡಬೇಕು. ಏಕಾಏಕಿ ತೆರವುಗೊಳಿಸುವುದು ಸಲ್ಲದು’ ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮ ದಿನಾಚರಣೆ ಅಂಗವಾಗಿ ಸೂರತ್‌ನಲ್ಲಿ ಮಕ್ಕಳು ಮೋದಿ ಅವರ ಮುಖವಾಡ ಧರಿಸಿ ಶುಕ್ರವಾರ ಸಂಭ್ರಮಿಸಿದರು –ಪಿಟಿಐ ಚಿತ್ರ

‘ಇಂಡೊ– ಪೆಸಿಫಿಕ್ ಪ್ರದೇಶದ ಭದ್ರತೆ ಒತ್ತು’

ನವದೆಹಲಿ (ಪಿಟಿಐ): ‘ಇಂಡೊ– ಪೆಸಿಫಿಕ್ ಪ್ರದೇಶದ ಭದ್ರತೆ ಮತ್ತು ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ನಾವು ‘ಔಕಸ್’ ತ್ರಿಪಕ್ಷೀಯ ಭದ್ರತಾ ಮೈತ್ರಿಕೂಟವನ್ನು ಸೇರಿದ್ದೇವೆ’ ಎಂದು ಆಸ್ಟ್ರೇಲಿಯಾ ಶುಕ್ರವಾರ ಹೇಳಿದೆ.

ಇಂಡೊ– ಪೆಸಿಫಿಕ್ ಪ್ರದೇಶದಲ್ಲಿ ಹೆಚ್ಚುತ್ತಿರುವ ಚೀನಾದ ಪ್ರಾಬಲ್ಯವನ್ನು ಎದುರಿಸಲು ಅಮೆರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯಾ ಭದ್ರತಾ ಮೈತ್ರಿಯನ್ನು ಮಾಡಿಕೊಂಡಿದೆ. ಈ ಮೈತ್ರಿಯಡಿ ಅಮೆರಿಕ, ಬ್ರಿಟನ್ ಪರಮಾಣು– ಚಾಲಿತ ಜಲಾಂತರ್ಗಾಮಿಗಳ ಅಭಿವೃದ್ಧಿಗೆ ಆಸ್ಟ್ರೇಲಿಯಾಗೆ ನೆರವು ನೀಡಲಿದೆ.

‘ಈ ಮೂಲಕ ಇಂಡೊ– ಪೆಸಿಫಿಕ್ ಪ್ರದೇಶದ ಶಾಂತಿ ಮತ್ತು ಭದ್ರತೆಗೆ ಧಕ್ಕೆ ತರುವ ನಡವಳಿಕೆಯನ್ನು ತಡೆಯಲು ಭಾರತ ಮತ್ತು ಇತರ ರಾಷ್ಟ್ರಗಳ ಜತೆಗೆ ಆಸ್ಟ್ರೇಲಿಯಾವು ಕೊಡುಗೆ ನೀಡಬಹುದು’ ಎಂದು ಆಸ್ಟ್ರೇಲಿಯಾ ತಿಳಿಸಿದೆ.

‘ಅಣಶಕ್ತಿ ಜಲಾಂತರ್ಗಾಮಿಯು ಸಮೃದ್ಧ ಮತ್ತು ಸುರಕ್ಷಿತ ಇಂಡೊ– ಪೆಸಿಫಿಕ್ ಪ್ರದೇಶಕ್ಕೆ ಆಸ್ಟ್ರೇಲಿಯಾ ನೀಡುತ್ತಿರುವ ಕೊಡುಗೆಯಾಗಿದೆ’ ಎಂದು ಭಾರತದಲ್ಲಿನ ಆಸ್ಟ್ರೇಲಿಯಾದ ಹೈ ಕಮಿಷನರ್ ಬೆರಿ ಒ’ಫಾರೆಲ್ ಮಾಹಿತಿ ನೀಡಿದರು.

‘ಔಕಸ್’ ಪಾಲುದಾರಿಕೆಯನ್ನು ಘೋಷಿಸುವ ಮುನ್ನ ಆಸ್ಟ್ರೇಲಿಯಾದ ಪ್ರಧಾನಿ, ವಿದೇಶಾಂಗ ಸಚಿವರು ಮತ್ತು ರಕ್ಷಣಾ ಸಚಿವರು ಭಾರತದ ಸಹವರ್ತಿಗಳೊಂದಿಗೆ ಈ ಬಗ್ಗೆ ಮಾತುಕತೆ ನಡೆಸಿದ್ದರು ಎಂದು ಅವರು ಹೇಳಿದರು.

ನಿರುದ್ಯೋಗ ದಿನಾಚರಣೆ; ಕಾಂಗ್ರೆಸ್ ಕಾರ್ಯಕರ್ತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ದಿನವನ್ನು ‘ರಾಷ್ಟ್ರೀಯ ನಿರುದ್ಯೋಗ ದಿನ’ವನ್ನಾಗಿ ಆಚರಿಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು, ನಗರದಲ್ಲಿ ಶುಕ್ರವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿದ ಕಾರ್ಯಕರ್ತರು, ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಕೆಲವರು, ಪದವೀಧರರ ಪೋಷಾಕು ತೊಟ್ಟು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

‘ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿದ್ದು, ಯುವಜನತೆ ಕಂಗಾಲಾಗಿದ್ದಾರೆ. ಪದವೀಧರರು, ಎಲ್ಲಿಯೂ ಕೆಲಸವಿಲ್ಲದೇ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಾದ ಕೇಂದ್ರ ಸರ್ಕಾರ, ತನ್ನ ಜನ ವಿರೋಧಿ ನೀತಿಗಳಿಂದ ನಿರುದ್ಯೋಗವನ್ನು ಮತ್ತಷ್ಟು ಹೆಚ್ಚಿಸುತ್ತಿದೆ’ ಎಂದು ಪ್ರತಿಭಟನಕಾರರು ದೂರಿದರು.

‘ಕೋವಿಡ್ ಲಾಕ್‌ಡೌನ್ ಹಾಗೂ ಕೇಂದ್ರ ಸರ್ಕಾರದ ನೀತಿಗಳಿಂದ ಜನ ಬೀದಿಗೆ ಬಿದ್ದಿದ್ದಾರೆ. ಇಂಥ ಸಂದರ್ಭದಲ್ಲಿ ನರೇಂದ್ರ ಮೋದಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ. ಹೀಗಾಗಿ, ಇದೇ ದಿನವನ್ನು ‘ರಾಷ್ಟ್ರೀಯ ನಿರುದ್ಯೋಗ ದಿನ’ವನ್ನಾಗಿ ಆಚರಿಸಲಾಗುತ್ತಿದೆ. ಈ ಮೂಲಕ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ರವಾನಿಸಲಾಗುತ್ತಿದೆ’ ಎಂದೂ ಹೇಳಿದರು.


‘ರಾಷ್ಟ್ರೀಯ ನಿರುದ್ಯೋಗ ದಿನ’ ಆಚರಿಸಿ ಸ್ವಾತಂತ್ರ್ಯ ಉದ್ಯಾನ ಎದುರು ಶುಕ್ರವಾರ ಪ್ರತಿಭಟನೆ ನಡೆಸುತ್ತಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಎಳೆದೊಯ್ದು ವಾಹನ ಹತ್ತಿಸಿದರು – ಪ್ರಜಾವಾಣಿ ಚಿತ್ರ

ವಿಪರೀತ ಸಂಚಾರ ದಟ್ಟಣೆ

ಯುವ ಕಾಂಗ್ರೆಸ್ ಪ್ರತಿಭಟನೆಯಿಂದಾಗಿ ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ವಿಪರೀತ ಸಂಚಾರ ದಟ್ಟಣೆ ಉಂಟಾಯಿತು. ಬಸ್, ಕಾರು, ಬೈಕ್ ಹಾಗೂ ಇತರೆ ವಾಹನಗಳಲ್ಲಿ ಹೊರಟಿದ್ದವರಿಗೆ ತೊಂದರೆಯಾಯಿತು.

ರೈಲು ನಿಲ್ದಾಣದಿಂದ ಮೆರವಣಿಗೆ ಆರಂಭವಾಗುತ್ತಿದ್ದಂತೆ ಮೇಲ್ಸೇತುವೆಯಲ್ಲಿ ಸಾರ್ವಜನಿಕ ವಾಹನಗಳ ಸಂಚಾರ ನಿರ್ಬಂಧಿಸಲಾಯಿತು. ಓಕಳಿಪುರ ಬಳಿಯೇ ವಾಹನಗಳ ಮಾರ್ಗ ಬದಲಾವಣೆ ಮಾಡಿ, ಶೇಷಾದ್ರಿಪುರ, ಸಂಪಿಗೆ ರಸ್ತೆಯತ್ತ ಕಳುಹಿಸಲಾಯಿತು.

ಈ ಮಾರ್ಗದಲ್ಲೂ ದಟ್ಟಣೆ ಉಂಟಾಗಿ, ವಾಹನಗಳು ಸಾಲುಗಟ್ಟಿ ನಿಂತಿದ್ದವು. ಕೆ.ಆರ್. ವೃತ್ತ, ನೃಪತುಂಗ ರಸ್ತೆಯಲ್ಲಿ ದಟ್ಟಣೆ ಕಂಡುಬಂತು.

ಕಾರ್ಯಕರ್ತರು ವಶಕ್ಕೆ, ಬಿಡುಗಡೆ: ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮುಂದುವರಿಸಿದರು. ವಾಹನ ಸಂಚಾರ ತಡೆದು ವಿಧಾನಸೌಧದತ್ತ ಹೋಗಲು ಮುಂದಾದರು. ಅವರನ್ನು ಪೊಲೀಸರು ತಡೆದರು. ಪರಸ್ಪರ ಮಾತಿನ ಚಕಮಕಿ ನಡೆಯಿತು.

ಪರಿಸ್ಥಿತಿ ಬಿಗಡಾಯಿಸುತ್ತಿದ್ದಂತೆ 50ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು, ಎಳೆದೊಯ್ದು ವಾಹನದಲ್ಲಿ ಹತ್ತಿಸಿ ಕರೆದೊಯ್ದರು. ಕೆಲ ಹೊತ್ತಿನ ಬಳಿಕ ಬಿಡುಗಡೆ ಮಾಡಿದರು.

ತಂದೆಯ ಪಿಸ್ತೂಲ್ ಕದ್ದು ತಂದಿದ್ದ ರಾಹುಲ್

ಗುಂಡು ಹೊಡೆದುಕೊಂಡು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜಯನಗರ ಬಸ್ ತಂಗುದಾಣ ಬಳಿ ರಾಹುಲ್ ಭಂಡಾರಿ (18) ಎಂಬಾತ ತಲೆಗೆ ಪಿಸ್ತೂಲ್‌ನಿಂದ ಗುಂಡು ಹೊಡೆದುಕೊಂಡು ಶುಕ್ರವಾರ ಬೆಳಿಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಿವೃತ್ತ ಸೇನಾಧಿಕಾರಿ ಭಗತ್ ಸಿಂಗ್ ಹಾಗೂ ಬಾಬ್ನಾ ದಂಪತಿ ಮಗನಾಗಿದ್ದ ರಾಹುಲ್, ಸೇನೆ ಶಾಲೆಯಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದ. ಪಾದಚಾರಿ ಮಾರ್ಗದಲ್ಲಿ ಶುಕ್ರವಾರ ಬೆಳಿಗ್ಗೆ ಆತನ ಮೃತದೇಹ ಪತ್ತೆಯಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಾನಸಿಕವಾಗಿ ನೊಂದಿದ್ದ ಎನ್ನಲಾದ ರಾಹುಲ್ ವರ್ತನೆಯಲ್ಲಿ ಇತ್ತೀಚೆಗೆ ಸಾಕಷ್ಟು ಬದಲಾವಣೆ ಆಗಿತ್ತು. ತಂದೆಯ ಪರವಾನಗಿ ಪಡೆದಿದ್ದ ಪಿಸ್ತೂಲ್ ಸಮೇತ ಮನೆಯಿಂದ ಹೊರಬಂದಿದ್ದ ರಾಹುಲ್, ಸಂಜಯನಗರ ಬಸ್ ತಂಗುದಾಣ ಬಳಿ ತಲೆಗೆ ಗುಂಡು ಹೊಡೆದುಕೊಂಡಿದ್ದ. ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾನೆ’ ಎಂದೂ ತಿಳಿಸಿವೆ.

ತನ್ನ ಫೋಟೊ ಕೇಳಿದ್ದ: ‘ಆರ್.ಟಿ.ನಗರ ನಿವಾಸಿ ಭಗತ್ ಸಿಂಗ್, ಬೇಕರಿ ನಡೆಸುತ್ತಿದ್ದಾರೆ. ಓದುವುದರಲ್ಲಿ ಮುಂದಿದ್ದ ರಾಹುಲ್‌ನನ್ನು ಸೇನೆ ಶಾಲೆಗೆ ಸೇರಿಸಿದ್ದರು. ನಿತ್ಯವೂ ನಸುಕಿನಲ್ಲಿ ಎದ್ದು ಆತ ಓದುತ್ತಿದ್ದ. ಈ ಬಗ್ಗೆ ಪೋಷಕರು ಹೇಳಿಕೆ ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶುಕ್ರವಾರವೂ ನಸುಕಿನ 3 ಗಂಟೆಗೆ ಎದ್ದಿದ್ದ ರಾಹುಲ್, ತನ್ನ ಹಳೆಯ ಫೋಟೊಗಳನ್ನು ಕೊಡುವಂತೆ ತಾಯಿ ಹಾಗೂ ಅಕ್ಕನನ್ನು ಕೇಳಿದ್ದ. ಫೋಟೊ ಇಲ್ಲವೆಂದು ತಾಯಿ–ಅಕ್ಕ ಹೇಳಿದ್ದರು. ಕೋಪಗೊಂಡಿದ್ದ ರಾಹುಲ್, ವಾಯುವಿಹಾರಕ್ಕೆ ಹೋಗುವುದಾಗಿ ಬ್ಯಾಗ್ ಸಮೇತ ಮನೆಯಿಂದ ಹೊರಗೆ ಬಂದಿದ್ದ. ಸಂಜಯನಗರದಲ್ಲಿ ಕೆಲವೆಡೆ ಸುತ್ತಾಡಿದ್ದ.’

‘ಬೆಳಿಗ್ಗೆ 5 ಗಂಟೆ ಸುಮಾರಿಗೆ ಪಾದಚಾರಿ ಮಾರ್ಗದಲ್ಲಿ ನಿಂತು ರಾಹುಲ್ ತಲೆಗೆ ಗುಂಡು ಹೊಡೆದುಕೊಂಡಿದ್ದ. ಸ್ಥಳದಲ್ಲಿ ಆತನ ಮೃತದೇಹ ನೋಡಿದ್ದ ಸ್ಥಳೀಯರು, ಠಾಣೆಗೆ ಮಾಹಿತಿ ನೀಡಿದ್ದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

‘ತಾನು ಹೇಳಿದಂತೆ ಕೇಳಬೇಕೆನ್ನುತ್ತಿದ್ದ...’

‘ತಾನು ಹೇಳಿದ ಕೆಲಸಗಳನ್ನು ಎಲ್ಲರೂ ಮಾಡಬೇಕು. ತಾನು ಹೇಳಿದಂತೆ ಎಲ್ಲರೂ ಕೇಳಬೇಕೆಂದು ರಾಹುಲ್ ಹೇಳುತ್ತಿದ್ದ. ಆತನ ವರ್ತನೆ ದಿನದಿಂದ ದಿನಕ್ಕೆ ಬದಲಾಗಿತ್ತು. ಕೆಲ ಬಾರಿ ಜಗಳವನ್ನೂ ಮಾಡಿದ್ದ. ಸಹಪಾಠಿ ಹಾಗೂ ಸ್ನೇಹಿತರ ಜೊತೆ ಹೆಚ್ಚು ಮಾತನಾಡುತ್ತಿರಲಿಲ್ಲ. ಕುಟುಂಬದವರಿಂದಲೂ ದೂರವಿರಲು ಇಚ್ಛಿಸುತ್ತಿದ್ದ. ಆತನಿಗೆ ಕೇಳಿದಾಗಲೆಲ್ಲ ತಂದೆ ಹಣ ನೀಡುತ್ತಿದ್ದರು. ಒಬ್ಬನೇ ಗಂಡು ಮಗನಾಗಿದ್ದರಿಂದ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ಥಳದಲ್ಲಿ ಪಿಸ್ತೂಲ್ ಹಾಗೂ ರಾಹುಲ್ ಬ್ಯಾಗ್ ಸಿಕ್ಕಿದೆ. ದ್ವಿತೀಯ ಪಿಯುಸಿ ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆ, ಚಾಕೊಲೇಟ್ ಹಾಗೂ ಜೀವಂತ ಗುಂಡು ಬ್ಯಾಗ್‌ನಲ್ಲಿ ಸಿಕ್ಕಿದೆ’ ಎಂದೂ ತಿಳಿಸಿವೆ.

ಸಿಕ್ಸರ್‌ಗಳಿಗೆ ಡಾಟ್‌ಬಾಲ್ ಸವಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ವೆಂಟಿ-20 ಕ್ರಿಕೆಟ್ ಮಾದರಿಯೆಂದರೆ ಬೌಲರ್‌ಗಳಿಗೆ ದುಃಸ್ವಪ್ನವೆಂಬ ಮಾತಿತ್ತು. ಸಿಕ್ಸರ್, ಬೌಂಡರಿಗಳ ಭರಾಟೆಯಲ್ಲಿ ಬೌಲರ್‌ಗಳ ಕೌಶಲಗಳು ಸಮಾಧಿಯಾಗುತ್ತವೆ ಎಂಬ ಆತಂಕದ ಮಾತುಗಳು ಆರಂಭದ ಕೆಲ ವರ್ಷಗಳಲ್ಲಿ ಕೇಳಿಬಂದಿದ್ದವು. ಆದರೆ, ಕಾಲಕ್ರಮೇಣ ಬೌಲರ್‌ಗಳೂ ಪುಟಿದೆದ್ದರು. ತಮ್ಮ ಎಸೆತಗಳಲ್ಲಿ ವಿಭಿನ್ನತೆ ರೂಢಿಸಿಕೊಂಡರು. ಅಬ್ಬರದ ಬ್ಯಾಟ್ಸ್‌ಮನ್‌ಗಳಿಗೆ ಕಡಿವಾಣ ಹಾಕುವಲ್ಲಿ ಸಫಲರಾದರು.

ಅದರಲ್ಲೂ ಕಳೆದ ಮೂರು ಋತುಗಳ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಇತಿಹಾಸವನ್ನು ಕೆದಕಿದರೆ ಬೌಲರ್‌ಗಳೂ ಕಮ್ಮಿಯೇನಿಲ್ಲ. ಡಾಟ್‌ಬಾಲ್‌ಗಳನ್ನು ಬಹಳಷ್ಟು ಸಂಖ್ಯೆಯಲ್ಲಿ ಪ್ರಯೋಗಿಸುತ್ತಿದ್ದಾರೆ. ಅಫ್ಗಾನಿಸ್ತಾನದ ಸ್ಪಿನ್ನರ್ ರಶೀದ್ ಖಾನ್, ಭಾರತದ ಮಧ್ಯಮವೇಗಿ ಮೊಹಮ್ಮದ್ ಶಮಿ, ಪ್ರಸಿದ್ಧ ಕೃಷ್ಣ ಇದರಲ್ಲಿ ಪ್ರಮುಖರು. ಒಂದೆಡೆ ಬ್ಯಾಟ್ಸ್‌ಮನ್‌ಗಳು ಸಿಕ್ಸರ್‌ಗಳು ರಂಗೇರಿದರೆ ಅವರ ಕಡಿವಾಣ ಹಾಕುವ ಪ್ರಯತ್ನದಲ್ಲಿ ಬೌಲರ್‌ಗಳೂ ಕಠಿಣ ಪೈಪೋಟಿಯೊಡ್ಡುತ್ತಿದ್ದಾರೆ.

14ನೇ ಆವೃತ್ತಿ ಐಪಿಎಲ್‌ನ ಪ್ರಥಮಾರ್ಧದ ಅಂಕಿ ಸಂಖ್ಯೆಗಳನ್ನೇ ನೋಡಿ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರ ನಡುವೆಯೂ ತೀವ್ರ ಸ್ಪರ್ಧೆ ಏರ್ಪಟ್ಟಿದೆ. ನಿಕ್, ರಿವರ್ಸ್ ಸ್ವಿಂಗ್, ಫಿಂಗರ್ ಸ್ಪಿನ್, ವೈಡ್ ಮತ್ತು ಸ್ಲೋವರ್ ಎಸೆತಗಳ ಭರಾಟೆಯೂ ಹೆಚ್ಚುತ್ತಿದೆ. ಆದ್ದರಿಂದಲೇ ಈ ಮಾದರಿ ಮತ್ತು ಟೂರ್ನಿ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ.




ಪ್ರಸಿದ್ಧ ಕೃಷ್ಣ

ಹೆಚ್ಚು ಡಾಟ್‌ಬಾಲ್ ಹಾಕಿದವರು

ಬೌಲರ್	ಪಂದ್ಯ	ಓವರ್	ರನ್	ವಿಕೆಟ್	ಡಾಟ್‌ಬಾಲ್
ಮೊಹಮ್ಮದ್ ಶಮಿ	8	28.4	234	8	76
ಮೊಹಮ್ಮದ್ ಸಿರಾಜ್	7	26	191	6	74
ಟ್ರೆಂಟ್ ಬೌಲ್ಟ್	7	26.2	223	8	73
ಆವೇಶ್ ಖಾನ್	8	30	231	14	72
ಪ್ರಸಿದ್ಧಕೃಷ್ಣ	8	26.3	243	8	69

1916 ಟೂರ್ನಿಯಲ್ಲಿ ಇದುವರೆಗೆ ಒಟ್ಟು ಡಾಟ್‌ಬಾಲ್‌ಗಳು



ಮೊಹಮ್ಮದ್ ಸಿರಾಜ್


ಆವೇಶ್ ಖಾನ್


ಟ್ರೆಂಟ್ ಬೌಲ್ಟ್


ಮೊಹಮ್ಮದ್ ಶಮಿ


ಕೆ.ಎಲ್. ರಾಹುಲ್


ಆ್ಯಂಡ್ರೆ ರಸೆಲ್


ಜೋಸ್ ಬಟ್ಲರ್


ಜಾನಿ ಬೆಸ್ಟೊ


ಅಂಬಟಿ ರಾಯುಡು

ಹೆಚ್ಚು ಸಿಕ್ಸರ್ ಬಾರಿಸಿದವರು

ಬ್ಯಾಟ್ಸ್‌ಮನ್	ಪಂದ್ಯ	ರನ್	ಶ್ರೇಷ್ಠ	ಸಿಕ್ಸರ್
ಕೆ.ಎಲ್. ರಾಹುಲ್	7	331	91*	16
ಜಾನಿ ಬೆಸ್ಟೊ	7	248	63*	15
ಅಂಬಟಿ ರಾಯುಡು	7	136	72*	13
ಜೊಸ್ ಬಟ್ಲರ್	7	254	124	13
ಆ್ಯಂಡ್ರೆ ರಸೆಲ್	7	163	54	13

380 ಟೂರ್ನಿಯಲ್ಲಿ ಇದುವರೆಗೆ ದಾಖಲಾಗಿರುವ ಒಟ್ಟು ಸಿಕ್ಸರ್

ಮಾಹಿತಿ: ಐಪಿಎಲ್ ವೆಬ್‌ಸೈಟ್

ಭದ್ರತೆಯ ಕಾರಣ ನೀಡಿ ಪಾಕ್ ಪ್ರವಾಸ ಮೊಟಕುಗೊಳಿಸಿದ ನ್ಯೂಜಿಲೆಂಡ್ ತಂಡ

ರಾವಲ್ಪಿಂಡಿ (ಪಿಟಿಐ): ಮೊದಲ ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ ಆರಂಭವಾಗುವ ಮೊದಲೇ ನ್ಯೂಜಿಲೆಂಡ್ ತಂಡ, ಭದ್ರತೆಯ ಕಾರಣ ನೀಡಿ ಶುಕ್ರವಾರ ಪಾಕಿಸ್ತಾನ ಪ್ರವಾಸದಿಂದ ಹಠಾತ್ತನೇ ಹಿಂದೆ ಸರಿದಿದೆ. ಆದರೆ ಅಂಥ ಭದ್ರತೆಯ ಭೀತಿ ಇರಲಿಲ್ಲ ಎಂದು ಆತಿಥೇಯ ದೇಶದ ಮಂಡಳಿ ಹೇಳಿಕೊಂಡಿದೆ.

ರಾವಲ್ಪಿಂಡಿಯಲ್ಲಿ ಶುಕ್ರವಾರ ಮೊದಲ ಏಕದಿನ ಪಂದ್ಯ ನಿಗದಿಯಾಗಿತ್ತು. ಆದರೆ ಸಮಯ ಕಳೆದರೂ ಎರಡೂ ತಂಡಗಳು ಹೋಟೆಲ್‌ನಿಂದ ಹೊರಬಂದಿರಲಿಲ್ಲ.

‘ನಾವು ಸ್ವೀಕರಿಸಿದ ಸಲಹೆಯ ಪ್ರಕಾರ ಈ ಪ್ರವಾಸ ಮುಂದುವರಿಸುವುದು ಸಾಧ್ಯವಿರಲಿಲ್ಲ’ ಎಂದು ನಂತರ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ನ್ಯೂಜಿಲೆಂಡ್ ಕ್ರಿಕೆಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡೇವಿಡ್ ವೈಟ್ ತಿಳಿಸಿದರು.

‘ಇದು ಪಾಕ್ ಕ್ರಿಕೆಟ್ ಮಂಡಳಿಗೆ ದೊಡ್ಡ ಹೊಡೆತ. ಅವರು ನಮಗೆ ಉತ್ತಮ ಆತಿಥ್ಯ ಒದಗಿಸಿದ್ದರು. ಆದರೆ ಆಟಗಾರರ ಸುರಕ್ಷತೆ ಎಲ್ಲದ್ದಕ್ಕಿಂತ ಮುಖ್ಯವಾದುದು. ಸದ್ಯ ನಮ್ಮ ಮುಂದಿರುವ ಜವಾಬ್ದಾರಿಯುತ ಆಯ್ಕೆ ಇದೊಂದೇ’ ಎಂದು ಈ ಹೇಳಿಕೆಯಲ್ಲಿ ತಿಳಿಸಲಾಗಿದೆ.

ನ್ಯೂಜಿಲೆಂಡ್ ಕ್ರಿಕೆಟ್ ಆಟಗಾರರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೀತ್ ಮಿಲ್ಸ್ ಕೂಡ ವೈಟ್ ಅವರ ಭಾವನೆಗಳನ್ನೇ ಪ್ರತಿಧ್ವನಿಸಿದ್ದಾರೆ.‘ಆಟಗಾರರು ಸುರಕ್ಷಿತವಾಗಿದ್ದಾರೆ. ಎಲ್ಲರೂ ತಮ್ಮ ಹಿತಾಸಕ್ತಿಯಿಂದ ಉಚಿತವೆನಿಸಿದ ನಿರ್ಧಾರ ತೆಗೆದುಕೊಂಡಿದ್ದಾರೆ’ ಎಂದು ಹೇಳಿದ್ದಾರೆ.

‘ಯಾವ ರೀತಿಯ ಭೀತಿಯಿತ್ತು ಎಂಬ ಬಗ್ಗೆ ನ್ಯೂಜಿಲೆಂಡ್ ಕ್ರಿಕೆಟ್ ಯಾವುದೇ ವಿವರ ನೀಡಿಲ್ಲ. ಪಾಕಿಸ್ತಾನದಿಂದ ನಿರ್ಗಮಿಸುವ ರೀತಿಯ ಬಗ್ಗೆಯೂ ಮಾಹಿತಿ ನೀಡಿಲ್ಲ.

ಇನ್ನೊಂದೆಡೆ, ‘ನ್ಯೂಜಿಲೆಂಡ್, ಈ ಸರಣಿಯನ್ನು ಮುಂದೂಡುವ ಬಗ್ಗೆ ಏಕಪಕ್ಷೀಯ ನಿರ್ಧಾರ ಕೈಗೊಂಡಿದೆ’ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಹೇಳಿದೆ.

‘ಪಾಕಿಸ್ತಾನ ಕ್ರಿಕೆಟ್ ಮಂಡಳಿ ಮತ್ತು ಪಾಕಿಸ್ತಾನ ಸರ್ಕಾರ ಎಲ್ಲ ಪ್ರವಾಸಿ ತಂಡಗಳಿಗೆ ಸುರಕ್ಷತಾ ವ್ಯವಸ್ಥೆ ಮಾಡುತ್ತದೆ. ನ್ಯೂಜಿಲೆಂಡ್ ಕ್ರಿಕೆಟ್‌ಗೂ ನಾವು ಈ ಭರವಸೆ ನೀಡಿದ್ದೆವು’ ಎಂದು ತಿಳಿಸಿದೆ.

‘ಪಾಕಿಸ್ತಾನ ಪ್ರಧಾನಿ ಅವರೇ ವೈಯಕ್ತಿಕವಾಗಿ ನ್ಯೂಜಿಲೆಂಡ್ ಪ್ರಧಾನಿ ಜೊತೆ ಮಾತನಾಡಿದ್ದರು. ಪಾಕಿಸ್ತಾನವು ವಿಶ್ವದಲ್ಲೇ ಅತ್ಯುತ್ತಮ ಗುಪ್ತಚರ ವ್ಯವಸ್ಥೆ ಹೊಂದಿದ್ದು, ಪ್ರವಾಸಿ ತಂಡಕ್ಕೆ ಯಾವುದೇ ರೀತಿಯ ಭದ್ರತಾ ಭಯ ಬೇಕಿಲ್ಲ ಎಂದು ಇಮ್ರಾನ್ ಖಾನ್ ತಿಳಿಸಿದ್ದರು’ ಎಂದು ಪಿಸಿಬಿ ಹೇಳಿಕೆ ತಿಳಿಸಿದೆ.

ಅಕ್ಟೋಬರ್ 3ರವರೆಗಿನ ಪ್ರವಾಸದಲ್ಲಿ 3 ಏಕದಿನ ಪಂದ್ಯಗಳು ಮತ್ತು 5 ಟಿ-20 ಪಂದ್ಯಗಳು ನಿಗದಿಯಾಗಿದ್ದವು.

2009ರಲ್ಲಿ ಶ್ರೀಲಂಕಾ ತಂಡ ಪಾಕ್ ಪ್ರವಾಸ ಕೈಗೊಂಡಿದ್ದಾಗ ಭಯೋತ್ಪಾದನಾ ದಾಳಿ ನಡೆದಿತ್ತು. ಬಸ್‌ನಲ್ಲಿದ್ದ ಆಟಗಾರರು ಅದೃಷ್ಟವಶಾತ್ ಪಾರಾಗಿದ್ದರು. ಅಂದಿನಿಂದ ವಿದೇಶಿ ತಂಡಗಳನ್ನು ಆಹ್ವಾನಿಸಿ ಕ್ರಿಕೆಟ್ ಬಾಂಧವ್ಯ ಸುಧಾರಿಸಲು ಪಾಕಿಸ್ತಾನ ತಂಡ ಪ್ರಯತ್ನಿಸುತ್ತಿದೆ.


ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ (ಎಡ) ಮತ್ತು ನ್ಯೂಜಿಲೆಂಡ್ ತಂಡದ ನಾಯಕ ಟಾಮ್ ಲಥಾಮ್– ಎಎಫ್‌ಪಿ ಚಿತ್ರ

> **ಸರಣಿ ಮುಂದೂಡಿದ್ದರಿಂದ ತುಂಬಾ ನಿರಾಸೆಯಾಗಿದೆ. ಈ ಸರಣಿಯು ಪಾಕಿಸ್ತಾನದ ಲಕ್ಷಾಂತರ ಕ್ರಿಕೆಟ್ ಅಭಿಮಾನಿಗಳಲ್ಲಿ ಮತ್ತೆ ಮಂದಹಾಸ ಮೂಡಿಸುತ್ತಿತ್ತು.**
> **ಬಾಬರ್ ಆಜಂ**
> ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕ

‘ಪಿಂಕ್‌ಬಾಲ್ ಟೆಸ್ಟ್: ಶಫಾಲಿ ಪಾತ್ರ ಮಹತ್ವದ್ದು’

ಮುಂಬೈ (ಪಿಟಿಐ): ಆಸ್ಟ್ರೇಲಿಯಾ ಮಹಿಳಾ ತಂಡದ ಎದುರು ನಡೆಯಲಿರುವ ಪಿಂಕ್ ಬಾಲ್ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತದ ಶಫಾಲಿ ವರ್ಮಾ ಅವರ ಆಟವು ಮಹತ್ವದ್ದಾಗಲಿದೆ. ಅವರಿಗೆ ತಂಡವನ್ನು ಗೆಲುವಿನತ್ತ ಮುನ್ನಡೆಸುವ ಸಾಮರ್ಥ್ಯವಿದೆ ಎಂದು ಮಾಜಿ ಆಲ್‌ರೌಂಡರ್ ಹೇಮಲತಾ ಕಲಾ ಅಭಿಪ್ರಾಯಪಟ್ಟಿದ್ದಾರೆ.

‘ಶಫಾಲಿ ಕೆಂಪು ಚೆಂಡಿನ ಎದುರು ಚೆನ್ನಾಗಿ ಆಡಿದ್ದಾರೆ. ಪವರ್ ಹಿಟ್ ಕೌಶಲ ಅಮೋಘವಾಗಿದೆ. ಹಗಲು-ರಾತ್ರಿ ಟೆಸ್ಟ್‌ನಲ್ಲಿಯೂ ಅವರು ಚೆನ್ನಾಗಿ ಆಡುವ ವಿಶ್ವಾಸವಿದೆ’ ಎಂದು ಸೋನಿ ಸಿಕ್ಸ್ ವಾಹಿನಿಯು ಆಯೋಜಿಸಿದ್ದ ವರ್ಚುವಲ್ ಸಂವಾದದಲ್ಲಿ ಅವರು ಹೇಳಿದರು.

ಭಾರತ ಮಹಿಳಾ ತಂಡದ ಆಯ್ಕೆ ಸಮಿತಿಯ ಮಾಜಿ ಮುಖ್ಯಸ್ಥೆ ಹೇಮಲತಾ, ‘ಶಫಾಲಿ ಅವರಲ್ಲದೇ ತಂಡದಲ್ಲಿ ಇನ್ನೂ ಕೆಲವು ಉತ್ತಮ ಬ್ಯಾಟರ್‌ಗಳಿದ್ದಾರೆ. ಪಿಂಕ್ ಬಾಲ್ ಟೆಸ್ಟ್ ಆಡುವುದರಿಂದ ಅವರ ಅನುಭವದ ಮಟ್ಟ ಮತ್ತು ಕೌಶಲಗಳು ಸುಧಾರಣೆಯಾಗಲಿವೆ’ ಎಂದರು.

ಬೆನ್ನುನೋವಿನಿಂದ ಖಿನ್ನತೆ: ಅಥ್ಲೆಟಿಕ್ಸ್‌ಗೆ ವಿದಾಯ ಹೇಳಲು ಸ್ವಪ್ನಾ ನಿರ್ಧಾರ

ಕೋಲ್ಕತ್ತ (ಪಿಟಿಐ): ಬೆನ್ನುನೋವಿನಿಂದಾಗಿ ಖಿನ್ನತೆಗೆ ಒಳಗಾಗಿರುವ ಭಾರತದ ಅಥ್ಲೀಟ್ ಸ್ವಪ್ನಾ ಬರ್ಮನ್ ಅವರು ಕ್ರೀಡೆಗೆ ನಿವೃತ್ತಿ ಘೋಷಿಸಲು ನಿರ್ಧರಿಸಿದ್ದಾರೆ. ಕೆಲವೇ ದಿನಗಳಲ್ಲಿ ಈ ಕುರಿತು ಅಧಿಕೃತ ತೀರ್ಮಾನ ಪ್ರಕಟಿಸುವುದಾಗಿ ಹೇಳಿದ್ದಾರೆ.

ರೈಲ್ವೆ ತಂಡವನ್ನು ಪ್ರತಿನಿಧಿಸುವ ಸ್ವಪ್ನಾ, ತೆಲಂಗಾಣದ ವಾರಂಗಲ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಹೈಜಂಪ್‌ನಲ್ಲಿ ಗುರುವಾರ ಚಿನ್ನದ ಪದಕ ಗೆದ್ದುಕೊಂಡಿದ್ದರು.

‘ನನಗೆ ನೋವು ಸಹಿಸಲಾಗುತ್ತಿಲ್ಲ. ತುಂಬಾ ಹತಾಶೆಗೆ ಒಳಗಾಗಿದ್ದೇನೆ. ಕ್ರೀಡಾಕೂಟಗಳಲ್ಲಿ ಇನ್ನು ಸ್ಪರ್ಧಿಸುವುದು ಸುಲಭವಲ್ಲ. ಸ್ವಲ್ಪ ಗೊಂದಲದಲ್ಲಿದ್ದರೂ ವಿದಾಯ ಹೇಳಲು ಸಿದ್ಧವಾಗಿದ್ದೇನೆ. ಕೋಲ್ಕತ್ತ ತಲುಪಿದ ಬಳಿಕ ಈ ಕುರಿತು ನಿರ್ಧಾರ ಪ್ರಕಟಿಸುವೆ’ ಎಂದು ವಾರಂಗಲ್‌ನಲ್ಲಿ ಅವರು ತಿಳಿಸಿದರು.

‘ನಾನು ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲು ಬಯಸಿರಲಿಲ್ಲ. ಆದರೆ ತಂಡದೊಂದಿಗಿನ ಬದ್ಧತೆಯಿಂದಾಗಿ ಸ್ಪರ್ಧಿಸಬೇಕಾಯಿತು’ ಎಂದು ಅವರು ಹೇಳಿದರು. ಅವರ ನೆಚ್ಚಿನ ವಿಭಾಗ ಹೆಪ್ಟಾಥ್ಲಾನ್‌ನಲ್ಲಿ ಕಣಕ್ಕಿಳಿಯಲಿಲ್ಲ.

‘ಟಿ20 ತಂಡದ ನಾಯಕತ್ವಕ್ಕೆ ರೋಹಿತ್ ಸೂಕ್ತ’

ನವದೆಹಲಿ (ರಾಯಿಟರ್ಸ್): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ತಮ್ಮ ನಾಯಕತ್ವದ ಗುಣಗಳನ್ನು ತೋರಿರುವ ರೋಹಿತ್ ಶರ್ಮಾ ಅವರು ಭಾರತದ ಟ್ವೆಂಟಿ-20 ಕ್ರಿಕೆಟ್ ತಂಡದ ನಾಯಕನಾಗಲು ಸೂಕ್ತ ವ್ಯಕ್ತಿ ಎಂದು ಮಾಜಿ ಕ್ರಿಕೆಟಿಗರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಕ್ಟೋಬರ್ 17ರಿಂದ ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಒಮನ್‌ನಲ್ಲಿ ನಿಗದಿಯಾಗಿರುವ ಟಿ20 ವಿಶ್ವಕಪ್ ಬಳಿಕ ತಂಡದ ಸಾರಥ್ಯ ತ್ಯಜಿಸಲು ಸದ್ಯ ನಾಯಕರಾಗಿರುವ ವಿರಾಟ್ ಕೊಹ್ಲಿ ನಿರ್ಧರಿಸಿದ್ದಾರೆ.


ಸುನಿಲ್ ಗಾವಸ್ಕರ್– ಎಎಫ್‌ಪಿ ಚಿತ್ರ

‘ರೋಹಿತ್ ಅವರು ಭಾರತದ ಟಿ20 ತಂಡದ ನಾಯಕನಾಗಲು ಅರ್ಹರು. ಏಕೆಂದರೆ ಅವರು ತಂಡವನ್ನು ಮುನ್ನಡೆಸುವ ಅವಕಾಶ ಸಿಕ್ಕಾಗಲೆಲ್ಲಾ ಅವರು ಉತ್ತಮ ಸಾಮರ್ಥ್ಯ ತೋರಿದ್ದಾರೆ’ ಎಂದು ದಿಲೀಪ್ ವೆಂಗ್‌ಸರ್ಕಾರ್ ಶುಕ್ರವಾರ ‘ಟೈಮ್ಸ್ ಆಫ್ ಇಂಡಿಯಾ’ ಪತ್ರಿಕೆಗೆ ತಿಳಿಸಿದರು.

‘2018ರಲ್ಲಿ ರೋಹಿತ್ ನಾಯಕತ್ವದಲ್ಲಿ ಭಾರತ ಏಷ್ಯಾಕಪ್ ಗೆದ್ದುಕೊಂಡಿತ್ತು. ಅಲ್ಲದೆ ಐಪಿಎಲ್‌ನಲ್ಲಿ ಮುಂಬೈ ತಂಡ ಅವರ ಸಾರಥ್ಯದಲ್ಲಿ ಐದು ಟ್ರೋಫಿಗಳನ್ನು ಜಯಿಸಿದೆ’ ಎಂದು ಅವರು ನುಡಿದರು.

1983ರ ಏಕದಿನ ವಿಶ್ವಕಪ್ ವಿಜೇತ ತಂಡದ ಆಟಗಾರ ಸಂದೀಪ್ ಪಾಟೀಲ್ ಕೂಡ ಇದೇ ರೀತಿಯ ಮಾತುಗಳನ್ನು ಧ್ವನಿಸಿದ್ದಾರೆ. ‘ರೋಹಿತ್ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ’ ಎಂದಿದ್ದಾರೆ.

‘ರೋಹಿತ್ 20-20 ಓವರ್‌ಗಳ ಕ್ರಿಕೆಟ್ ಮಾದರಿಗೆ ಅತ್ಯುತ್ತಮ ನಾಯಕ. ಐಪಿಎಲ್‌ನಲ್ಲಿ ಕಿಂಗ್ಸ್ ಪಂಜಾಬ್ ತಂಡವನ್ನು ಮುನ್ನಡೆಸುತ್ತಿರುವ ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಸೀಮಿತ ಓವರ್‌ಗಳ ಮಾದರಿ ಕ್ರಿಕೆಟ್‌ಗೆ ಭವಿಷ್ಯದ ನಾಯಕನನ್ನಾಗಿ ರೂಪಿಸಬೇಕು. ಅವರನ್ನು ಸದ್ಯ ಉಪನಾಯಕನನ್ನಾಗಿ ಮಾಡಬೇಕು’ ಎಂದು ಭಾರತ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಸ್ಪೋರ್ಟ್ಸ್ ಟಾಕ್’ ಎಂಬ ಕಾರ್ಯಕ್ರಮದಲ್ಲಿ ಗಾವಸ್ಕರ್ ಮಾತನಾಡುತ್ತಿದ್ದರು.


ಮಣಿಪುರ ಕ್ರಿಕೆಟ್ ತಂಡಕ್ಕೆ ದೊಡ್ಡಗಣೇಶ್ ಕೋಚ್

ಬೆಂಗಳೂರು: ಕರ್ನಾಟಕದ ಮಾಜಿ ಕ್ರಿಕೆಟಿಗ ದೊಡ್ಡಗಣೇಶ್ ಮಣಿಪುರ ರಾಜ್ಯ ಕ್ರಿಕೆಟ್ ತಂಡದ ಕೋಚ್ ಆಗಿ ನೇಮಕವಾಗಿದ್ದಾರೆ.

ಕರ್ನಾಟಕದ ಪ್ರಮುಖ ಮಧ್ಯಮ ವೇಗದ ಬೌಲರ್‌ಗಳಲ್ಲಿ ಒಬ್ಬರಾಗಿರುವ ದೊಡ್ಡಗಣೇಶ್, ಈ ಹಿಂದೆ ಗೋವಾ ತಂಡಕ್ಕೆ ಕೋಚ್ ಆಗಿದ್ದರು. ಮುಂಬರುವ ದೇಶಿ ಋತುವಿನಲ್ಲಿ ಮಣಿಪುರಕ್ಕೆ ಮಾರ್ಗದರ್ಶನ ನೀಡುವರು. ‘ಕ್ರಿಕೆಟ್ ಮುಖ್ಯವಾಹಿನಿಗೆ ಈಶಾನ್ಯ ರಾಜ್ಯವಾದ ಮಣಿಪುರ ಬಂದಿರುವುದು ತೀರಾ ಇತ್ತೀಚೆಗೆ. ಅಲ್ಲಿಯ ಮಕ್ಕಳಿಗೆ ಕ್ರಿಕೆಟ್ ಕಲಿಯುವ ಆಸಕ್ತಿ ಬಹಳಷ್ಟಿದೆ. ಅವರಿಗೆ ಮಾರ್ಗದರ್ಶನ ಮಾಡಲು ಸಿಕ್ಕಿರುವ ಅವಕಾಶದಿಂದ ಸಂತಸವಾಗಿದೆ’ ಎಂದು ಭಾರತ ತಂಡದ ಮಾಜಿ ಆಟಗಾರರೂ ಆಗಿರುವ ದೊಡ್ಡ ಗಣೇಶ್ ‘ಪ್ರಜಾವಾಣಿ’ಗೆ ತಿಳಿಸಿದರು. ಈ ಹಿಂದೆ ಮಣಿಪುರಕ್ಕೆ ಶಿವಸುಂದರ್ ದಾಸ್ ಕೋಚ್ ಆಗಿದ್ದರು. ಅವರು ಭಾರತ ಮಹಿಳಾ ತಂಡದ ಬ್ಯಾಟಿಂಗ್ ಕೋಚ್ ಆಗಿ ಈಚೆಗೆ ನೇಮಕವಾಗಿದ್ದರು. ಅದರಿಂದಾಗಿ ಆ ಸ್ಥಾನವು ತೆರವಾಗಿತ್ತು.


ದೊಡ್ಡಗಣೇಶ್

ಷೇರುಪೇಟೆ ವಹಿವಾಟು ▼ 125



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,629
ಇಂದಿನ ಅಂತ್ಯ	17,585
▼	44
ದಿನದ ಗರಿಷ್ಠ	17,792

ವಿನಿಮಯ ದರ

$ ಡಾಲರ್	73.48
£ ಪೌಂಡ್	101.29
€ ಯುರೊ	86.58
¥ ಯೆನ್ (100ಕ್ಕೆ)	66.97

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹462

ಭೂಮಿಗೆ ಮರಳಿದ ಚೀನಾ ಗಗನಯಾತ್ರಿಗಳು

ಬೀಜಿಂಗ್ (ಎಪಿ): ಬಾಹ್ಯಾಕಾಶ ನಿಲ್ದಾಣ ನಿರ್ಮಾಣ, ದುರಸ್ತಿ ಸೇರಿದಂತೆ ವಿವಿಧ ಕಾರ್ಯಗಳಿಗಾಗಿ ಮೂರು ತಿಂಗಳ ಹಿಂದೆ ಬಾಹ್ಯಾಕಾಶಕ್ಕೆ ತೆರಳಿದ್ದ ಚೀನಾದ ಮೂವರು ಗಗನಯಾತ್ರಿಗಳು ಶುಕ್ರವಾರ ಸುರಕ್ಷಿತವಾಗಿ ಭೂಮಿಗೆ ಮರಳಿದ್ದಾರೆ.

90 ದಿನಗಳ ಕಾಲ ಬಾಹ್ಯಾಕಾಶ ನಿಲ್ದಾಣದಲ್ಲಿ ನೆಲೆಸಿದ್ದ ನೀ ಹೈಶೆಂಗ್, ಲಿಯು ಬೊಮಿಂಗ್ ಮತ್ತು ಟ್ಯಾಂಗ್ ಹಾಂಗ್ಬೊ ಎಂಬುವವರು ಶೆನ್‌ಶಾವ್-12 ಗಗನ ನೌಕೆ ಮೂಲಕ ಶುಕ್ರವಾರ ಬೆಳಗಿನ ಜಾವ ಇಲ್ಲಿನ ಗೊಬಿ ಮರುಭೂಮಿಯಲ್ಲಿ ಬಂದಿಳಿದರು.

ಚೀನಾದ ಬಾಹ್ಯಾಕಾಶ ನಿಲ್ದಾಣದಿಂದ ಗುರುವಾರ ಬೆಳಿಗ್ಗೆ 8.56ಕ್ಕೆ (0056 ಜಿಎಂಟಿ)ಕ್ಕೆ ಭೂಮಿಯತ್ತ ಪ್ರಯಾಣ ಆರಂಭಿಸಿದ್ದರು.

‘ಪ್ಯಾರಾಚೂಟ್ ಮೂಲಕ ಶೆನ್‌ಶಾವ್-12 ಗಗನ ನೌಕೆ ಗೊಬಿ ಮರುಭೂಮಿಯಲ್ಲಿ ಇಳಿಯಿತು. ಕೆಲವು ನಿಮಿಷಗಳ ನಂತರ ತಂತ್ರಜ್ಞರು ನೌಕೆಯ ಹ್ಯಾಚ್ ಅನ್ನು ತೆರೆಯಲು ಆರಂಭಿಸಿದರು. ಜೂನ್ 17ರಂದು ಶೆನ್‌ಶಾವ್-12 ಗಗನ ನೌಕೆ ಮೂಲಕ ಮೂವರು ಗಗನ ಯಾತ್ರಿಗಳು ಬಾಹ್ಯಾಕಾಶ ನಿಲ್ದಾಣ ತಲುಪಿದ ಮೇಲೆ, ಎರಡು ಬಾರಿ 10 ಮೀಟರ್ ದೂರದಷ್ಟು ಬಾಹ್ಯಾಕಾಶ ನಡಿಗೆ ಕೈಗೊಂಡರು.

ಈ ವೇಳೆ ಚೀನಾದ ಅಧ್ಯಕ್ಷ ಷಿ-ಜಿನ್‌ಪಿಂಗ್ ಅವರು ಗಗನ ಯಾತ್ರಿಗಳಿಗೆ ವಿಡಿಯೊ ಕರೆ ಮಾಡಿದ್ದರು.



ಭೂಮಿಗೆ ಮರಳುವ ಮುನ್ನ ಬಾಹ್ಯಾಕಾಶದಲ್ಲಿ ಆಗಸ್ಟ್ 20ರಂದು ಚೀನಾದ ಮೂವರು ಗಗನ ಯಾತ್ರಿಗಳು ಬಾಹ್ಯಾಕಾಶ ನಡಿಗೆ ಮಾಡುತ್ತಿರುವ ದೃಶ್ಯ (ಸಂಗ್ರಹ ಚಿತ್ರ: ಎಪಿ)

ಕೆಐಒಸಿಎಲ್: ಉತ್ಪಾದನಾ ಚಟುವಟಿಕೆ ವಿಸ್ತರಣೆ ಯೋಜನೆ

ಮಂಗಳೂರು: ಕುದುರೆಮುಖ ಕಬ್ಬಿಣ ಮತ್ತು ಅದಿರು ಕಂಪನಿಯು (ಕೆಐಒಸಿಎಲ್) ಕಬ್ಬಿಣದ ಅದಿರನ್ನು ಕಚ್ಚಾವಸ್ತು ರೂಪದಲ್ಲಿ ಇತರ ಕಂಪನಿಗಳಿಂದ ಖರೀದಿಸಿ, ಅದರ ಉಂಡೆ (ಪೆಲೆಟ್) ಸಿದ್ಧಪಡಿಸಿ, ಪುನಃ ಪೂರೈಕೆ ಮಾಡುವ ಮೂಲಕ ಉತ್ಪಾದನಾ ಚಟುವಟಿಕೆ ವಿಸ್ತರಿಸಲು ಮುಂದಾಗಿದೆ ಎಂದು ಸಂಸ್ಥೆಯ ಸಿಎಂಡಿ ಟಿ. ಸಾಮಿನಾಥನ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಒಮಾನ್ ಮತ್ತು ಉತ್ತರ ಕೊರಿಯಾದ ಎರಡು ಕಂಪನಿಗಳ ಜೊತೆ ಈ ಸಂಬಂಧ ಮಾತುಕತೆ ನಡೆಯುತ್ತಿದ್ದು, ಮೂರು ತಿಂಗಳುಗಳಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದೆ. ಮಂಗಳೂರಿನಲ್ಲಿರುವ ತಯಾರಿಕಾ ಘಟಕದ ಶೇ 30ರಿಂದ 40ರಷ್ಟು ಸಾಮರ್ಥ್ಯದ ಮಿತಿಯಲ್ಲಿ ಈ ಕಾರ್ಯ ನಡೆಸಲಾಗುತ್ತದೆ’ ಎಂದರು. ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನಲ್ಲಿ ದೇವದಾರಿ ಕಬ್ಬಿಣದ ಅದಿರು ಗಣಿಗಾರಿಕೆ ನಡೆಸುವ ಪ್ರಸ್ತಾವಕ್ಕೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಒಂದನೇ ಹಂತದ ತಾತ್ವಿಕ ಅನುಮತಿ ದೊರೆತಿದೆ. ಈ ಗಣಿಯಿಂದ ವಾರ್ಷಿಕ 20 ಲಕ್ಷ ಟನ್ ಕಬ್ಬಿಣದ ಅದಿರು ಪಡೆಯಬಹುದಾಗಿದೆ. ಎರಡನೇ ಹಂತದ ಅನುಮತಿ ಮುಂದಿನ ಮಾರ್ಚ್ ವೇಳೆಗೆ ದೊರೆತರೆ, 2023ರ ಮಾರ್ಚ್ ವೇಳೆ ಗಣಿಗಾರಿಕೆ ಪ್ರಾರಂಭಿಸಬಹುದು ಎಂದರು.


ಟಿ. ಸಾಮಿನಾಥನ್

ಕಂಪ್ಯೂಟಿಂಗ್ ಅನ್ವೇಷಕ ಕ್ಲೈವ್ ನಿಧನ

ಲಂಡನ್ (ಎಪಿ): ಕಂಪ್ಯೂಟರ್‌ನ ಹೊಸತನದ ಅನ್ವೇಷಣೆ ಕುರಿತಂತೆ ಅತೀವ ಒಲವು ಹೊಂದಿದ್ದ ಬ್ರಿಟಿಷ್‌ನ ಅನ್ವೇಷಕ ಮತ್ತು ಉದ್ಯಮಿ ಕ್ಲೈವ್ ಸಿಂಕ್ಲೇರ್ ಗುರುವಾರ ನಿಧನರಾದರು. ಅವರಿಗೆ 81 ವರ್ಷವಾಗಿತ್ತು.

ಸುದೀರ್ಘ ಅವಧಿಯಿಂದ ಇವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಅವರ ಪುತ್ರಿ ಬೆಲಿಂದಾ ಸಿಂಕ್ಲೇರ್, ‘ಕ್ಲೈವ್ ಅವರು ಕಳೆದ ವಾರವೂ ಕಂಪ್ಯೂಟರ್‌ನ ಹೊಸ ಅನ್ವೇಷಣೆಯಲ್ಲಿ ತೊಡಗಿಕೊಂಡಿದ್ದರು’ ಎಂದುತಿಳಿಸಿದರು.

ಹೊಸತರ ಅನ್ವೇಷಣೆ ಎಂದಿಗೂ ಅವರಿಗೆ ಉತ್ಸಾಹ, ಸಾಹಸದ ಅನುಭವವಾಗಿತ್ತು ಎಂದರು. ಒಂದು ಪೀಳಿಗೆಯು ಕಂಪ್ಯೂಟರ್ ಮತ್ತು ಗೇಮಿಂಗ್ ಕುರಿತು ಒಲವು ಬೆಳೆಸಿಕೊಳ್ಳುವಲ್ಲಿ ಅತೀವ ಪ್ರಭಾವ ಬೀರಿದ್ದರು ಎಂದು ಹೇಳಲಾಗಿದೆ. 1980ರ ದಶಕದಲ್ಲಿ ಕೈಗೆಟುಕುವ ದರದ ಕಂಪ್ಯೂಟರ್‌ಗಳ ಸರಣಿಯನ್ನು ಮನೆಬಳಕೆಗೆ ಪರಿಚಯಿಸುವಲ್ಲಿ ಮುಖ್ಯಪಾತ್ರ ವಹಿಸಿದ್ದರು.


ಕ್ಲೈವ್ ಸಿಂಕ್ಲೇರ್

ಶ್ರೀಲಂಕಾ: ಲಾಕ್‌ಡೌನ್ ವಿಸ್ತರಣೆ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ದೇಶವ್ಯಾಪಿ ವಿಧಿಸಲಾಗಿದ್ದ ಲಾಕ್‌ಡೌನ್‌ನನ್ನು ಅಕ್ಟೋಬರ್ 1ರವರೆಗೆ ವಿಸ್ತರಿಸಿ ಶುಕ್ರವಾರ ಆದೇಶಿಸಲಾಗಿದೆ.ಅಧ್ಯಕ್ಷ ಗೋಟಬಯ ರಾಜಪಕ್ಸ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯು ಈ ನಿರ್ಧಾರ ತೆಗೆದುಕೊಂಡಿತು.

ಓಲಾ ಸ್ಕೂಟರ್: ಎರಡು ದಿನಗಳ ಮಾರಾಟದ ಮೊತ್ತ ₹ 1,100 ಕೋಟಿ!

ನವದೆಹಲಿ (ಪಿಟಿಐ): ಓಲಾ ಕಂಪನಿಯ ಎಸ್1 ವಿದ್ಯುತ್ ಚಾಲಿತ ಸ್ಕೂಟರ್‌ಗಳ ಮಾರಾಟವು ಎರಡು ದಿನಗಳಲ್ಲಿ ₹ 1,100 ಕೋಟಿ ಮೊತ್ತವನ್ನು ದಾಟಿದೆ ಎಂದು ಕಂಪನಿಯ ಸಹ ಸಂಸ್ಥಾಪಕ ಭವೀಶ್ ಅಗರ್ವಾಲ್ ಶುಕ್ರವಾರ ಹೇಳಿದ್ದಾರೆ.

ಈ ಸ್ಕೂಟರ್‌ಗಳನ್ನು ಖರೀದಿಸಲು ನವೆಂಬರ್ 1ರಿಂದ ಮತ್ತೆ ಅವಕಾಶ ಲಭ್ಯವಾಗಲಿದೆ ಎಂದು ಅವರು ತಿಳಿಸಿದ್ದಾರೆ. ಈ ಮಾದರಿಗಳ ಮಾರಾಟವನ್ನು ಕಂಪನಿಯು ಬುಧವಾರದಿಂದ ಆರಂಭಿಸಿತ್ತು. ಕಂಪನಿಯು ಮೊದಲ ದಿನ ₹ 600 ಕೋಟಿ ಮೌಲ್ಯದ ಸ್ಕೂಟರ್‌ಗಳನ್ನು ಮಾರಾಟ ಮಾಡಿತು.

‘ಎರಡು ದಿನಗಳಲ್ಲಿ ₹ 1,100 ಕೋಟಿಗೂ ಹೆಚ್ಚಿನ ಮೌಲ್ಯದ ಸ್ಕೂಟರ್‌ಗಳನ್ನು ಮಾರಾಟ ಮಾಡಲಾಗಿದೆ. ಇದು ಆಟೊಮೊಬೈಲ್ ಉದ್ಯಮದಲ್ಲಿ ಹಿಂದೆಂದೂ ಸಾಧ್ಯವಾಗಿರಲಿಲ್ಲ. ಅಷ್ಟೇ ಅಲ್ಲ, ದೇಶದ ಇ-ವಾಣಿಜ್ಯ ಉದ್ದಿಮೆಯಲ್ಲಿ ಒಂದು ದಿನದಲ್ಲಿ ಮೌಲ್ಯದ ಲೆಕ್ಕದಲ್ಲಿ ಉತ್ಪನ್ನವೊಂದು ಕಂಡಿರುವ ಅತಿದೊಡ್ಡ ಮಾರಾಟವೂ ಹೌದು’ ಎಂದು ಅಗರ್ವಾಲ್ ಹೇಳಿದ್ದಾರೆ.

ಸ್ಕೂಟರ್‌ಗಳನ್ನು ಗ್ರಾಹಕರಿಗೆ ತಲುಪಿಸುವ ಕೆಲಸವು ಅಕ್ಟೋಬರ್ 21ರಿಂದ ಆರಂಭವಾಗಲಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1585 (1555)
ಸೋಯಾ (ರಿಫೈನ್ಡ್)	₹1355(1360)
ಸೂರ್ಯಕಾಂತಿ (ರಿಫೈನ್ಡ್)	₹1380 (1390)
ಪಾಮೋಲಿನ್	₹1213 (1215)

ಮುಂಬೈ ಧಾರಣೆ

ಶೇಂಗಾ

17-9-2021

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1595 (1565)
ಒಂದು ವಾರದ ಡೆಲಿವರಿ	1590 (1560)
ಸೋಯಾ ಕಚ್ಚಾ	1302 (-)
ಪಾಮ್ ವಾರದ ಡೆಲಿವರಿ	1211(1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

47,250 (46200)

ಬೆಳ್ಳಿ ಕೆ.ಜಿ

63,700 (61,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 600-650
ನಡುಗೋಲು 700-750
ರಾಶಿ 800-850
ರಾಶಿ ಉತ್ತಮ 900-950
ಜರಡಿ 1000-1050
ಹೆರಕಿದ್ದು 1200-1300
ಹಸಿರು ಸಾಧಾರಣ800-850
ಹಸಿರು ಉತ್ತಮ 1000-1050
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು 390
ಅಡಿಕೆ
ಬಂಟ್ವಾಳ
ಕೋಕ 10000-22500
ಹೊಸತು 23500-49000
ಹಳತು 42500-51000

ಭದ್ರಾವತಿ
ರಾಶಿ 48066-55099
ಹೊನ್ನಾಳಿ
ರಾಶಿ 50901-50901
ಕುಮಟಾ
ಚಿಪ್ಪು 38099-41599
ಕೋಕ 23089-38089
ಫ್ಯಾಕ್ಟರಿ 16099-23261
ಹೊಸಚಾಲಿ 46019-47399
ಕಾರ್ಕಳ
ಹೊಸತು 40000-49000
ಶಿವಮೊಗ್ಗ
ಗೊರಬಲು 18009-42999
ಹೊಸತು 5009-51109
ರಾಶಿ 48869-54899
ಸರಕು 48000-77017
ಬೆಟ್ಟೆ 52059-54919
ಸಿದ್ದಾಪುರ
ಬಿಳಿಗೋಟು 37399-43699
ಚಾಲಿ 45908-48019
ಕೋಕ 30099-39608
ಕೆಂಪುಗೋಟು 33089-40229
ರಾಶಿ 48049-51599
ತಟ್ಟೆಬೆಟ್ಟೆ 36689-48099
ಶಿರಸಿ
ಬೆಟ್ಟೆ 28699-50298
ಬಿಳಿಗೋಟು 36599-43899
ಚಾಲಿ 43810-48088
ರಾಶಿ 44899-52399
ಯಲ್ಲಾಪುರ
ಬಿಳಿಗೋಟು 36899-42111
ಚಾಲಿ 43389-48090
ಕೋಕ 22612-35126
ಕೆಂಪುಗೋಟು 32699-37118
ರಾಶಿ 49619-55399
ತಟ್ಟಿಬೆಟ್ಟೆ 41100-48919
ಆಪಿ 60000-60000
ಮಂಗಳೂರು
ಕೋಕ 2700-30500
ಪುತ್ತೂರು
ಕೋಕ 10500-26000
ಹೊಸತು 34500-49000
ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ: 330-484
ದ್ವಿತಳಿ; 344-603

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13800	13,000	13,100	188.15ಸೆಂಟ್ಸ್
ಎಸಿ	6300	4,800	5250	
ಆರ್‌ಪಿ	6150	6,100	6250	ಲಂಡನ್
ಆರ್‌ಸಿ	3560	3,500	3650	2107ಡಾಲರ್ಸ್

ಪದವಿ ಪ್ರವೇಶ: ಅನ್ವಯಿಕ ಗಣಿತ ಪರಿಗಣಿಸಲು ಯುಜಿಸಿ ನಿರ್ದೇಶನ

ನವದೆಹಲಿ: ಪದವಿಯಲ್ಲಿ ಮಾನವಿಕ ಮತ್ತು ವಾಣಿಜ್ಯ ಕೋರ್ಸ್‌ಗಳಿಗೆ ಸೇರ ಬಯಸುವ 12ನೇ ತರಗತಿಯ ವಿದ್ಯಾರ್ಥಿಗಳ ಸರಾಸರಿ ಅಂಕಗಳನ್ನು ಪರಿಗಣಿಸುವಾಗ ಗಣಿತ ವಿಷಯಕ್ಕೆ ಸಮನಾಗಿ ಅನ್ವಯಿಕ ಗಣಿತ ವಿಷಯದ ಅಂಕಗಳನ್ನೂ (ಆಯ್ಕೆ ವಿಷಯ) ಪರಿಗಣಿಸುವಂತೆ ವಿಶ್ವವಿದ್ಯಾಲಯದ ಅನುದಾನ ಆಯೋಗ (ಯುಜಿಸಿ) ಎಲ್ಲ ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ನೀಡಿದೆ.

ಕೆಲ ವಿಶ್ವವಿದ್ಯಾಲಯಗಳು ಅರ್ಥಶಾಸ್ತ್ರ, ವಾಣಿಜ್ಯ ಮತ್ತು ಸಮಾಜ ವಿಜ್ಞಾನಗಳ ವಿಷಯಗಳ ಪದವಿ ಕೋರ್ಸ್‌ಗಳಿಗೆ ಪ್ರವೇಶ ಒದಗಿಸಲು, ವಿದ್ಯಾರ್ಥಿಗಳು ಗಣಿತವನ್ನು ಕಡ್ಡಾಯವಾಗಿ ಅಭ್ಯಾಸ ಮಾಡಿರಬೇಕು ಎಂದು ಸೂಚಿಸಿವೆ. ಈ ಹಿನ್ನೆಲೆಯಲ್ಲಿ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಸಲ್ಲಿಸಿದ ಮನವಿ ಮೇರೆಗೆ, ಯುಜಿಸಿ ಎಲ್ಲ ವಿ.ವಿಗಳಿಗೆ ಈ ನಿರ್ದೇಶನ ನೀಡಿದೆ

.‘ಸಿಬಿಎಸ್‌ಇ 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಅನ್ವಯಿಕ ಗಣಿತವನ್ನು ಶೈಕ್ಷಣಿಕ ಆಯ್ಕೆ ವಿಷಯವಾಗಿ ಪರಿಚಯಿಸಿದೆ. ಈ ವಿಷಯದಲ್ಲಿ ಥಿಯರಿಗೆ ಶೇ 80 ಮತ್ತು ಪ್ರಾಯೋಗಿಕ ಪರೀಕ್ಷೆಗೆ ಶೇ 20 ಅಂಕಗಳನ್ನು ನಿಗದಿಪಡಿಸಲಾಗಿದೆ’ ಎಂದು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್, ಎಲ್ಲ ವಿವಿಗಳ ಕುಲಪತಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಅರ್ಧ ಲಕ್ಷ ದಾಟಿದ ಚಾಲಿ ಅಡಿಕೆ ಧಾರಣೆ

ಮಂಗಳೂರು: ಮಂಗಳೂರು ಹೊರ ಮಾರುಕಟ್ಟೆಯಲ್ಲಿ ಗುರುವಾರ ಚಾಲಿ ಅಡಿಕೆ (ಹೊಸತು) ಕೆ.ಜಿ.ಯೊಂದಕ್ಕೆ ₹ 505 ಧಾರಣೆ (ಕ್ವಿಂಟಲ್‌ಗೆ ₹50,500) ದೊರೆತಿದೆ.

ಸುಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿಯೂ ಈ ದರಕ್ಕೆ ಚಾಲಿ ಅಡಿಕೆ ಖರೀದಿಯಾದರೆ, ಕ್ಯಾಂಪ್ಕೊ ಮಾರುಕಟ್ಟೆಯಲ್ಲಿ ಕೆ.ಜಿ. ಯೊಂದಕ್ಕೆ ₹450 ದರ ದೊರೆಯಿತು. ‘ಉತ್ತರ ಭಾರತದಲ್ಲಿ ಅಡಿಕೆಗೆ ಬೇಡಿಕೆ ಹೆಚ್ಚುತ್ತಿರುವುದು ದರ ಏರಿಕೆಗೆ ಕಾರಣವಾಗಿದೆ. ಬೆಳೆಗಾರರು ಇನ್ನಷ್ಟು ದರ ಏರುವ ನಿರೀಕ್ಷೆಯಲ್ಲಿ ಸಿದ್ಧ ಉತ್ಪನ್ನಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದಾರೆ’ ಎನ್ನುತ್ತಾರೆ ಮಾರುಕಟ್ಟೆ ವಿಶ್ಲೇಷಕರು.

ಬಳ್ಳಾರಿಯಲ್ಲಿ ರಾಷ್ಟ್ರೀಯ ಬಾಕ್ಸಿಂಗ್: ಗೌರವ್ ಬಿಧುರಿ ಪರಾಭವ

ಕ್ವಾರ್ಟರ್‌ಫೈನಲ್‌ಗೆ ಶಿವ ಥಾಪಾ

ಬಳ್ಳಾರಿ: ಐದು ಬಾರಿಯ ಏಷ್ಯನ್ ಪದಕ ವಿಜೇತ ಶಿವ ಥಾಪಾ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಆದರೆ ಗೌರವ್ ಬಿಧುರಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಇಲ್ಲಿಯ ಇನ್ಸ್ಪಾಯರ್ ಇನ್ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಶುಕ್ರವಾರ ಅಸ್ಸಾಂ ತಂಡವನ್ನು ಪ್ರತಿನಿಧಿಸುವ ಶಿವ, 63.5 ಕೆಜಿ ವಿಭಾಗದ ಮೊದಲ ಸುತ್ತಿನ ಬೌಟ್‌ನಲ್ಲಿ ಎಸ್‌ಪಿಎಸ್‌ಬಿಯ ಶುಭಂ ಮಮ್ತಾ ಅವರನ್ನು ಪರಾಭವಗೊಳಿಸಿದರು. ರಿಂಗ್‌ನಲ್ಲಿ ಸಮತೋಲನ ತಪ್ಪಿ ಬಿದ್ದ ಶುಭಂ ಅವರು ವೈದ್ಯರಿಂದ ಚಿಕಿತ್ಸೆ ಪಡೆದರು.

'ಶುಭಂ ಅವರಿಗೆ ನೋವಿದೆ. ಆದರೂ ಆರೋಗ್ಯವಾಗಿದ್ದಾರೆ. ನಾಳೆ ಮತ್ತೊಮ್ಮೆ ಅವರನ್ನು ಪರೀಕ್ಷಿಸಲಾಗುವುದು' ಎಂದು ಟೂರ್ನಿ ಆಯೋಜನೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.


ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಈ ಹಿಂದೆ ಕಂಚಿನ ಪದಕ ಗೆದ್ದಿದ್ದ ಗೌರವ್ ಬಿಧುರಿ, ಹರಿಯಾಣದ ಸಚಿನ್ ಎದುರು 1–4ರಿಂದ ಸೋಲು ಅನುಭವಿಸಿದರು. ಸಚಿನ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಗೌರವ್ ಪ್ರಶಸ್ತಿ ಜಯಿಸುವ ಪ್ರಬಲ ಬಾಕ್ಸರ್ ಎನಿಸಿಕೊಂಡಿದ್ದರು. ರೈಲ್ವೆ ತಂಡವನ್ನು ಅವರು ಪ್ರತಿನಿಧಿಸಿದ್ದರು.

ಹರಿಯಾಣದ ಇನ್ನೊಬ್ಬ ಬಾಕ್ಸರ್, ದಕ್ಷಿಣ ಏಷ್ಯನ್ ಗೇಮ್ಸ್ ಚಾಂಪಿಯನ್ ಅಂಕಿತ್ ಖತಾನ (75 ಕೆಜಿ ವಿಭಾಗ) ಎಂಟರಘಟ್ಟ ಪ್ರವೇಶಿಸಿದರು. ಹಿಮಾಚಲ ಪ್ರದೇಶದ ಧರ್ಮ ಪಾಲ್ ಎದುರು ಅವರು ಏಕಪಕ್ಷೀಯ ಜಯ ದಾಖಲಿಸಿದರು.

ತೆಲಂಗಾಣದ ಸವಿಯೊ ಡಾಮಿನಿಕ್ ಮೈಕೆಲ್ (54 ಕೆಜಿ), ಗೋವಾದ ಅಶೋಕ್ ಪಾಟೀಲ್ (67 ಕೆಜಿ), ಚಂಡೀಗಡದ ಕುಲದೀಪ್ ಕುಮಾರ್ (48 ಕೆಜಿ) ಮತ್ತು ಮಹಾರಾಷ್ಟ್ರದ ನಿಖಿಲ್ ದುಬೆ (75 ಕೆಜಿ) ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ಇನ್ನುಳಿದ ಬಾಕ್ಸರ್‌ಗಳು.

ಪ್ರೀಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಸವಿಯೊ ಅವರು ಜಾರ್ಖಂಡ್‌ನ ಕೃಷ್ಣ ಜೋರಾ ಎದುರು, ಅಶೋಕ್ ಅವರು ಹಿಮಾಚಲ ಪ್ರದೇಶದ ಮೋಹನ್ ಚಾಂಡೆರ್ ಎದುರು ಗೆಲುವು ಸಾಧಿಸಿದರು.

ಕುಲದೀಪ್ ಕುಮಾರ್ 4–0ಯಿಂದ ರಾಜಸ್ಥಾನದ ಸುಶೀಲ್ ಶರಣ್ ಅವರ ಸವಾಲು ಮೀರಿದರೆ, ನಿಖಿಲ್ ದುಬೆ ಅವರು ತೆಲಂಗಾಣದ ವೇಣು ಮಂಡಲ ಅವರನ್ನು ಆರ್‌ಎಸ್‌ಸಿ (ರೆಫರಿಯಿಂದ ಸ್ಪರ್ಧೆಗೆ ತಡೆ) ಆಧಾರದಲ್ಲಿ ಪರಾಭವಗೊಳಿಸಿದರು.



ಶಿವ ಥಾಪಾ

ಡುರಾಂಡ್ ಕಪ್: ಕ್ವಾರ್ಟರ್‌ನತ್ತ ಬಿಎಫ್‌ಸಿ ಚಿತ್ತ

ಕೋಲ್ಕತ್ತ: ಕ್ವಾರ್ಟರ್‌ಫೈನಲ್ ಮೇಲೆ ಕಣ್ಣಿಟ್ಟಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ), ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ಡೆಲ್ಲಿ ಎಫ್‌ಸಿ ತಂಡವನ್ನು ಎದುರಿಸಲಿದೆ.

ಸಿ ಗುಂಪಿನ ಈ ಪಂದ್ಯಕ್ಕೆ ಮೋಹನ್ ಬಾಗನ್ ಕ್ರೀಡಾಂಗಣ ಸಜ್ಜಾಗಿದೆ. ಮೊದಲ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ತಂಡವನ್ನು ಮಣಿಸಿದ್ದ ಬಿಎಫ್‌ಸಿ ಆತ್ಮವಿಶ್ವಾಸದಲ್ಲಿದೆ.

ಡೆಲ್ಲಿ ಎದುರು ಗೆದ್ದರೆ ಬಿಎಫ್‌ಸಿ ಎಂಟರಘಟ್ಟಕ್ಕೆ ಪ್ರವೇಶಿಸುವುದು ಖಚಿತವಾಗಲಿದೆ. ಆದರೆ ಇನ್ನೂ ಒಂದೂ ಜಯ ಸಾಧಿಸದ ಡೆಲ್ಲಿ ತಂಡಕ್ಕೆ ಇದು ಮಹತ್ವದ ಹಣಾಹಣಿಯಾಗಿದೆ.

'ಡೆಲ್ಲಿ ಎಫ್‌ಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ. ಆದರೆ ಗುಂಪಿನಲ್ಲಿ ಕಡಿಮೆ ತಂಡಗಳು ಇರುವುದರಿಂದ ಅದೃಷ್ಟ ಯಾವಾಗ ಬೇಕಾದರೂ ಕೈಹಿಡಿಯಬಹುದು. ಅಲ್ಲಿಯೂ ಉತ್ತಮ ಆಟಗಾರರಿದ್ದಾರೆ. ಎದುರಾಳಿಗಳನ್ನು ನಾವು ಗೌರವಿಸುತ್ತೇವೆ. ಸವಾಲಿಗೆ ಸಜ್ಜಾಗಿದ್ದು ನಮ್ಮ ಆಟಗಾರರು ಸಾಧ್ಯವಾದಷ್ಟು ಶ್ರೇಷ್ಠ ಆಟವಾಡಲಿದ್ದಾರೆ' ಎಂದು ಬಿಎಫ್‌ಸಿ ತಂಡದ ಕೋಚ್ ನೌಶಾದ್ ಮೂಸಾ ಹೇಳಿದ್ದಾರೆ.

ಕ್ವಾರ್ಟರ್‌ಫೈನಲ್‌ಗೆ ಆರ್ಮಿ ಗ್ರೀನ್: ಸುದೇವ ಡೆಲ್ಲಿ ಎಫ್‌ಸಿ ಎದುರು 1–0ಯಿಂದ ಜಯ ಗಳಿಸಿದ ಮಾಜಿ ಚಾಂಪಿಯನ್ ಆರ್ಮಿ ಗ್ರೀನ್ ತಂಡವು ಟೂರ್ನಿಯ ಎಂಟರಘಟ್ಟ ಪ್ರವೇಶಿಸಿತು. ವಿಜೇತ ತಂಡದ ಪರ ದೀಪಕ್ ಸಿಂಗ್ 51ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡವು 5–0 ಗೋಲುಗಳಿಂದ ಜೆಮ್‌ಶೆಡ್‌ಪುರ ಎಫ್‌ಸಿಯನ್ನು ಮಣಿಸಿತು. ಗೆದ್ದ ತಂಡದ ದೇವೇಂದ್ರ ಮುರಗಾಂವಕರ್ (20 ಮತ್ತು 44ನೇ ನಿಮಿಷ), ಮುಹಮ್ಮದ್ ನೆಮಿಲ್ (46 ಮತ್ತು 81ನೇ ನಿಮಿಷ) ಹಾಗೂ ಪ್ರಿನ್ಸಟನ್ ರೆಬೆಲ್ಲೊ (26ನೇ ನಿ.) ಗೋಲು ದಾಖಲಿಸಿದರು.

ಟೆನಿಸ್: ಸೆಹಜ್, ಸುಶ್ಮಿತಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಹಜ್ ಸಿಂಗ್ ಹಾಗೂ ಸುಶ್ಮಿತಾ ರವಿ ಅವರು ಎಐಟಿಎ ಸಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಕೆಎಸ್‌ಎಲ್‌ಟಿಎ ಆಶ್ರಯದಲ್ಲಿ ನಡೆದ ಟೂರ್ನಿಯ ಬಾಲಕರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಶುಕ್ರವಾರ ಸೆಹಜ್ ಅವರು ಲೀತಾಯಿಶ್ ಸವಾಲು ಮೀರಿದರು. ಅವರಿಗೆ 6-2, 6-3ರಿಂದ ಗೆಲುವು ಒಲಿಯಿತು. ಬಾಲಕಿಯರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸುಶ್ಮಿತಾ 6-3, 6-3ರಿಂದ ಕಾಶ್ವಿ ಸುನಿಲ್ ಎದುರು ಗೆದ್ದು ಬೀಗಿದರು.

ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಸೆಹಜ್ ಆರಂಭದಿಂದಲೇ ಮುನ್ನಡೆ ಸಾಧಿಸಿದರು. 3–0ಯಿಂದ ಮುನ್ನಡೆದ ಅವರು ಎಂಟನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಮುರಿದು ಮೊದಲ ಸೆಟ್ ಜಯಿಸಿದರು. ಅದೇ ಲಯದಲ್ಲಿ ಮುಂದುವರಿದು ಎರಡನೇ ಸೆಟ್‌ನೊಂದಿಗೆ ಜಯವನ್ನೂ ಒಲಿಸಿಕೊಂಡರು.

ಲೀತಾಯಿಶ್ ಹಾಗೂ ಕಾಶ್ವಿ ಅವರು ಸಿಂಗಲ್ಸ್ ವಿಭಾಗಗಳಲ್ಲಿ ಅನುಭವಿಸಿದ್ದ ನಿರಾಸೆಯನ್ನು ಡಬಲ್ಸ್‌ನಲ್ಲಿ ಜಯಿಸುವುದರ ಮೂಲಕ ಮರೆತರು.

ಬಾಲಕರ ಡಬಲ್ಸ್‌ನಲ್ಲಿ ಲೀತಾಯಿಶ್-ನಿಖಿಲ್ ಶ್ರೀನಿವಾಸ್ ಜೋಡಿಯು 7-5, 6-2ರಿಂದ ನಿಹಾರ್ ಹಾಗೂ ಶೌರ್ಯ ಬಿ. ಜೋಡಿಯನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡರು. ಬಾಲಕಿಯರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಕಾಶ್ವಿ–ಸಾನ್ವಿ ಮಿಶ್ರಾ ಅವರು 4-6, 6-3, 6-4ರಿಂದ ಪಾರ್ಥಸಾರಥಿ ಮುಂಡೆ–ಲಕ್ಷಿತಾ ಗೋಪಿನಾಥ್ ಅವರನ್ನು ಮಣಿಸಿದರು.


ಪ್ರಶಸ್ತಿಗಳೊಂದಿಗೆ ಸಂಭ್ರಮಿಸಿದ ಸುಶ್ಮಿತಾ ರವಿ (ಎಡ) ಮತ್ತು ಸೆಹಜ್ ಸಿಂಗ್

ಟೆನಿಸ್: ಸಾನಿಯಾ ಜೋಡಿಗೆ ಸೋಲು

ಬೆಂಗಳೂರು: ಭಾರತದ ಸಾನಿಯಾ ಮಿರ್ಜಾ ಹಾಗೂ ಚೀನಾದ ಶುಯಿ ಜಾಂಗ್ ಜೋಡಿಯು ಲಕ್ಸೆಂಬರ್ಗ್ ಓಪನ್ ಟೆನಿಸ್ ಟೂರ್ನಿಯಿಂದ ಹೊರಬಿದ್ದಿದ್ದಾರೆ.


ಸಾನಿಯಾ

ಗುರುವಾರ ಲಕ್ಸೆಂಬರ್ಗ್‌ನಲ್ಲಿ ನಡೆದ ಮಹಿಳಾ ಡಬಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದ ಈ ಜೋಡಿಯು 6–3, 3–6, 8–10ರಿಂದ ಬೆಲ್ಜಿಯಂನ ಗ್ರೀಟ್ ಮಿನ್ನೆನ್-ಅಲಿಸನ್ ವ್ಯಾನ್ ಉತ್ವಂಕ್ ಎದುರು ನಿರಾಸೆ ಅನುಭವಿಸಿತು. ಬೆಲ್ಜಿಯಂ ಆಟಗಾರ್ತಿಯರು ಶ್ರೇಯಾಂಕರಹಿತರಾಗಿದ್ದರು. ಒಂದು ತಾಸು 11 ನಿಮಿಷಗಳ ಕಾಲ ಈ ಪಂದ್ಯ ನಡೆಯಿತು.

ಮೊದಲ ಸೆಟ್ ಗೆದ್ದು ಭರವಸೆ ಮೂಡಿಸಿದ್ದ ಸಾನಿಯಾ–ಜಾಂಗ್‌ಗೆ ಅದೇ ಲಯ ಮುಂದುವರಿಸಲು ಸಾಧ್ಯವಾಗಲಿಲ್ಲ. 16ರ ಘಟ್ಟದ ಪಂದ್ಯದಲ್ಲಿ ಭಾರತ–ಚೀನಾ ಆಟಗಾರ್ತಿಯರು ಜರ್ಮನಿಯ ಸಹೋದರಿಯರಾದ ತಯಿಸಿಯಾ ಮೊರ್ದರ್ಗರ್ ಮತ್ತು ಯಾನಾ ಅವರನ್ನು ಸೋಲಿಸಿದ್ದರು.

ಬ್ಯಾಸ್ಕೆಟ್‌ಬಾಲ್: ದೇವಾಂಗ ಯೂನಿಯನ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವಾಂಗ ಯೂನಿಯನ್ ಮತ್ತು ಮೈಸೂರು ಬಿಸಿ ತಂಡಗಳು ಎಸ್. ರಂಗರಾಜನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಸಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯಗಳಲ್ಲಿ ದೇವಾಂಗ ಯೂನಿಯನ್ 73–32ರಿಂದ ಸ್ಪಾರ್ಟನ್ ಬಿಸಿ ನಂಜನಗೂಡು ಎದುರು ಗೆದ್ದಿತು. ಮೈಸೂರು ಬಿಸಿ ತಂಡವು 77–35ರಿಂದ ಮಿರಾಕಲ್ ಹುಬ್ಬಳ್ಳಿ ತಂಡವನ್ನು ಸೋಲಿಸಿತು.

ಇನ್ನುಳಿದ ಪಂದ್ಯಗಳಲ್ಲಿ ವಿವೇಕ್ ಎಸ್‌ಸಿ 85–37ರಿಂದ ವೈಸಿಎಸ್‌ಸಿ ಮೈಸೂರು ಎದುರು, ರಾಜ್‌ಕುಮಾರ್ ಬಿಸಿ 67–25ರಿಂದ ಸ್ಟಾರ್ ಚಾಲೆಂಜರ್ಸ್ ಮೈಸೂರು ಎದುರು, ಪಿಪಿಸಿ 42–26ರಿಂದ ಮರ್ಚಂಟ್ಸ್ ಎಸ್‌ಸಿ ದಾವಣಗೆರೆ ವಿರುದ್ಧ, ಹಲಸೂರು ಎಸ್‌ಯು ತಂಡವು 82–80ರಿಂದ ಮಲ್ಲಸಜ್ಜನ ಬಿಸಿ ಧಾರವಾಡ ವಿರುದ್ಧ, ಬಿಸಿ.ಬಿಸಿ ತಂಡವು 100–56ರಿಂದ ಪಿನಾಕಿನಿ ಗೌರಿಬಿದನೂರು ಎದುರು ಜಯ ಸಾಧಿಸಿದವು.

ಹೊಯ್ಸಳ ಬಿಸಿ. ಹಾಸನ 67–27ರಿಂದ ನ್ಯಾಷನಲ್ಸ್ ಬಿಸಿ ಮೈಸೂರು ಎದುರು, ಕೆ.ಎಸ್. ಹೆಗ್ಡೆ ನಿಟ್ಟೆ ತಂಡವು 46–30ರಿಂದ ಆಲ್ ಸ್ಟಾರ್ ಬಿಸಿ ಮೈಸೂರು ಎದುರು, ವಿಜಯನಗರ ಎಸ್‌ಸಿ ಹೊಸಪೇಟೆ 59–30ರಿಂದ ಒರಾಯನ್ಸ್ ಎಸ್‌ಸಿ ವಿರುದ್ಧ, ವಿಮಾನಪುರ ಎಸ್‌ಸಿ 73–20ರಿಂದ ವೈಸಿಬಿಸಿ ಬಳ್ಳಾರಿ ಎದುರು, ಗ್ರೀನ್ಸ್ ಬಿಸಿ ದಾವಣಗೆರೆ 68–47ರಿಂದ ಅಪ್ಪಯ್ಯ ಬಿಸಿ ವಿರುದ್ಧ, ಬಿಸಿವೈಎ 67–41ರಿಂದ ಸ್ಪಾರ್ಟನ್ ಬಿಸಿ ನಂಜನಗೂಡು ಎದುರು, ಬೆಂಗಳೂರು ಸ್ಪೋರ್ಟಿಂಗ್ 82–58ರಿಂದ ವೈಎಫ್‌ಬಿಸಿ ಕೋಲಾರ ಎದುರು, ಒಮೆಗಾ ಬಿಸಿ ಹಾಸನ 38–29ರಿಂದ ಎಂಸಿಎಚ್‌ಎಸ್ ವಿರುದ್ಧ ಜಯ ಗಳಿಸಿ ಮುನ್ನಡೆದವು.

ಉದಕಮಂಡಲ ರೇಸ್

ಎಮಿಸ್ಸಾರಿ ಗೆಲ್ಲುವ ನಿರೀಕ್ಷೆ

ರಾಯಲ್ ಕೋಲ್ಕತ್ತ ಟರ್ಫ್ ಕ್ಲಬ್ ಟ್ರೋಫಿಯ ಮೊದಲನೇ ಡಿವಿಷನ್ ಚೆನ್ನೈನಲ್ಲಿ ಏರ್ಪಡಿಸಿರುವ ಶನಿವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಎಮಿಸ್ಸಾರಿ ಗೆಲ್ಲುವ ನಿರೀಕ್ಷೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗ್ಲೋರಿಯಸ್ ಲೆಜೆಂಡ್ 3, ಮೆಜೆಸ್ಟಿಕ್ ವಿಂಡ್ 2, ಅಟ್ಟಿಕ 4
2ನೇ ರೇಸ್: ಗ್ಲೋರಿಯಸ್ ಸನ್‌ಲೈಟ್ 1, ಕಾವೌಸ್ಟಿ 7, ಫೇರ್‌ವೆಲ್ 5
3ನೇ ರೇಸ್: ಪೈನ್‌ವುಡ್ 2, ಅಥ್‌ಮೆಟಿಕಾ 3, ಪಾಲ್ಸಿ ವಾಲ್ಸಿ 7
4ನೇ ರೇಸ್: ಗ್ಲೋರಿಯಸ್ ಸಿಂಫೋನಿ 8, ರೀಗಲ್ ಕಿಡ್ 5, ವ್ಯಾಲೆಸ್ಕ 10
5ನೇ ರೇಸ್: ಮಾನ್ ಜನರಲ್ 3, ಸ್ಟಾರ್ ವೇವ್ಸ್ 5, ಆಕ್ಟೇವಿಯನ್ 4
6ನೇ ರೇಸ್: ಎಮಿಸ್ಸಾರಿ 7, ಗಾಡ್ಸ್ ಪ್ಲಾನ್ 4, ಆಸ್ಕರ್ಸ್ ಥಂಡರ್ 2
7ನೇ ರೇಸ್: ಥಾಮಸ್ ಹಾರ್ಡಿ 2, ಎಸ್ಟೆವಾ 6, ಮ್ಯಾಜಿಕಲ್ ವಿಶ್ 8
8ನೇ ರೇಸ್: ಡೆಸ್ಪಾಸಿಟೊ 4, ರಾಯಲ್ ರೂಲ್ಸ್ 1, ಟೆಕ್ಸಾಸ್ ರೋಸ್ 2.

ಉತ್ತಮ ಬೆಟ್: ಡೆಸ್ಪಾಸಿಟೊ

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	5,6,7,8	1,2,3	4,5,6	6,7,8

ಟೆನಿಸ್: ಪ್ರಜ್ಞೇಶ್‌ಗೆ ಸೋಲು

ಎಸ್ಪೊ, ಫಿನ್ಲೆಂಡ್ (ಪಿಟಿಐ): ಪ್ರಜ್ಞೇಶ್ ಗುಣೇಶ್ವರನ್ ಅವರು ತನಗಿಂತ ಕೆಳ ರ‍್ಯಾಂಕಿನ ಆಟಗಾರನ ಎದುರು ಮತ್ತೊಮ್ಮೆ ಕೈಚೆಲ್ಲಿದರು. ಇದರಿಂದಾಗಿ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಡೇವಿಸ್ ಕಪ್ ಟೆನಿಸ್ ವಿಶ್ವ ಗುಂಪು ಒಂದರ ಪಂದ್ಯದಲ್ಲಿ ಫಿನ್ಲೆಂಡ್ ಎದುರು 0–1ರಿಂದ ಹಿನ್ನಡೆ ಅನುಭವಿಸಿತು.

ಶುಕ್ರವಾರ ನಡೆದ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಪ್ರಜ್ಞೇಶ್ 3-6 6-7(1)ರಿಂದ ಒಟ್ಟೊ ವಿರ್ಟಾನೆನ್ ಎದುರು ಮುಗ್ಗರಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಒಟ್ಟೊ 419ನೇ ಸ್ಥಾನದಲ್ಲಿದ್ದರೆ, ಪ್ರಜ್ಞೇಶ್ 165ನೇ ಸ್ಥಾನದಲ್ಲಿದ್ದಾರೆ.

ಭಾರತ ಜಯದ ಆಸೆ ಜೀವಂತವಾಗುಳಿಯಲು ಮುಂದಿನ ಪಂದ್ಯದಲ್ಲಿ ರಾಮಕುಮಾರ್ ರಾಮನಾಥನ್ ಅವರು ಫಿನ್ಲೆಂಡ್‌ನ ಎನಿಲ್ ರುಸುವೊರಿ ಅವರನ್ನು ಸೋಲಿಸಬೇಕಿದೆ.

ಫುಟ್‌ಬಾಲ್: ಮಾಡರ್ನ್ ಗರ್ಲ್ಸ್ ತಂಡಕ್ಕೆ ಜಯ

ಬೆಂಗಳೂರು: ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡದವರು ಕೆಎಸ್‌ಎಫ್‌ಎ ಸ್ಪೋರ್ಟಿಂಗ್ ಪ್ಲಾನೆಟ್ 'ಎ' ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ 3–0ಯಿಂದ ಪಿಂಕ್ ಪ್ಯಾಂಥರ್ಸ್ ತಂಡವನ್ನು ಪರಾಭವಗೊಳಿಸಿದರು. ವಿಜೇತ ತಂಡದ ಪರ ಆರುಷಿ (30ನೇ ನಿಮಿಷ), ರಿವಾಕಾ (41ನೇ ನಿ.) ಮತ್ತು ಟೆರಿಯಾ (49ನೇ ನಿ.) ಕಾಲ್ಚಳಕ ತೋರಿದರು. ಮತ್ತೊಂದು ಪಂದ್ಯದಲ್ಲಿ ಪಯೋನಿಯರ್ ಎಫ್‌ಸಿ 1–0ಯಿಂದ ಸಾಯಿ ಸ್ಪೋರ್ಟ್ಸ್ ತಂಡವನ್ನು ಮಣಿಸಿತು. ಪಯೋನಿಯರ್ ಪರ ಸತ್ಯಾ (11ನೇ ನಿ.) ಗೋಲು ದಾಖಲಿಸಿದರು.

ಹಬ್ಬದ ದಿನಗಳಲ್ಲಿ ಆನ್‌ಲೈನ್ ಶಾಪಿಂಗ್‌ಗಿರಲಿ ಆದ್ಯತೆ



ರೇಷ್ಮಾ

'ಇನ್ನೇನು ಸಾಲು ಸಾಲು ಹಬ್ಬಗಳೇ ಬರುತ್ತವೆ. ಹಿಂದಿನ ಹಬ್ಬಗಳ ಸಂಭ್ರಮ ಈಗಿಲ್ಲವಾದರೂ ಆಚರಣೆ ಮಾಡದೇ ಇರಲು ಸಾಧ್ಯವಿಲ್ಲ. ಹಬ್ಬ ಎಂದ ಕೂಡಲೇ ಬಟ್ಟೆ ಬರೆ, ಪೂಜಾ ಸಾಮಗ್ರಿ ಎಂದು ಶಾಪಿಂಗ್ ಮಾಡುವುದು ಅನಿವಾರ್ಯ. ಆದರೆ ಈ ಕೊರೊನಾ ಭಯದ ನಡುವೆ ಹೊರಗಡೆ ಹೋಗಿ ಶಾಪಿಂಗ್ ಮಾಡುವುದೂ ಅಸಾಧ್ಯ, ಇದರೊಂದಿಗೆ ಆರ್ಥಿಕ ಪರಿಸ್ಥಿತಿ ಕೂಡ ಅಷ್ಟೊಂದು ಚೆನ್ನಾಗಿಲ್ಲದ ಕಾರಣ ದುಬಾರಿ ಖರ್ಚಿಗೂ ಕಡಿವಾಣ ಹಾಕಬೇಕಿದೆ. ಹಬ್ಬವನ್ನು ಆಚರಿಸಬೇಕು, ಖರ್ಚು ಕಡಿಮೆ ಮಾಡಬೇಕು ಎಂದರೆ ಆನ್‌ಲೈನ್ ಶಾಪಿಂಗ್ ಮೊರೆ ಹೋಗುವುದೇ ಬೆಸ್ಟ್ ಎನ್ನಿಸುತ್ತದೆ' ಎಂದು ಸಹೋದ್ಯೋಗಿ ರಂಜನಿ ಬಳಿ ಹೇಳುತ್ತಿದ್ದರು ಹುಬ್ಬಳ್ಳಿಯ ಶಿಕ್ಷಕಿ ಮಾಲಾ ಪಾಟೀಲ್.

ಮಾಲಾರ ಮಾತಿಗೆ ರಂಜನಿ ಕೂಡ ತಲೆದೂಗಿದ್ದರು. ಹಬ್ಬಗಳ ಸಮಯದಲ್ಲಿ ಶಾಪಿಂಗ್ ಅನಿವಾರ್ಯ. ಹಾಗಂತ ಈ ಕೊರೊನಾ ಕಾಲದಲ್ಲಿ ಮಾರ್ಕೆಟ್, ಮಳಿಗೆ ಎಂದು ಸುತ್ತಿ ಶಾಪಿಂಗ್ ಮಾಡಲು ಏನೋ ಅಂಜಿಕೆ. ಹಾಗಾಗಿ ಆನ್‌ಲೈನ್ ಶಾಪಿಂಗ್ ಬೆಸ್ಟ್ ಎನ್ನುವುದು ಹಲವರ ಅಭಿಮತ. ಇದರೊಂದಿಗೆ ಆನ್‌ಲೈನ್ ಶಾಪಿಂಗ್‌ನಿಂದ ಹಲವು ಉಪಯೋಗಗಳಿವೆ.



> ಹಬ್ಬ ಬಂದ ಕೂಡಲೇ ಅಪ್ಪ, ಅಮ್ಮನ ಬೆನ್ನು ಬಿದ್ದು ಹೊಸ ಬಟ್ಟೆ ಖರೀದಿಸುವುದು ರೂಢಿ. ಈಗಂತೂ ಕೋವಿಡ್ ಭಯ ಬೇರೆ. ಅಂಗಡಿಗೆ ಹೋಗಿ ಬಟ್ಟೆ ಖರೀದಿ ಮಾಡುವುದಕ್ಕಿಂತ ಕೂತಲ್ಲೇ ಮೊಬೈಲ್‌ನಲ್ಲಿ ಬುಕ್ ಮಾಡುವುದು ಸುಲಭ. ಜೊತೆಗೆ ಕಡಿಮೆ ಖರ್ಚು ಕೂಡ.

ಕಿರಿಕಿರಿ ಇಲ್ಲ

ಹಬ್ಬ ಬಂದಾಕ್ಷಣ ಪ್ರತಿ ಮಾರುಕಟ್ಟೆ, ಮಳಿಗೆಗಳು ಗಿಜಿಗುಡುವುದು ಸಾಮಾನ್ಯ. ಅದರೊಂದಿಗೆ ಮಾರುಕಟ್ಟೆಗಳಲ್ಲಿ ಪ್ರತಿ ವಸ್ತುಗಳ ದರವೂ ಏರಿಕೆಯಾಗಿರುತ್ತದೆ. ತುಂಬಿದ ಮಾರುಕಟ್ಟೆಯಲ್ಲಿ ನಮಗೆ ಬೇಕಾದ್ದನ್ನು ಆರಿಸುವುದು ಕಷ್ಟ. ಆ ಕಾರಣಕ್ಕೆ ಕೈಗೆ ಸಿಕ್ಕಿದ್ದನ್ನು ಅನಿವಾರ್ಯ ಎಂದುಕೊಂಡು ಖರೀದಿ ಮಾಡಬೇಕಾಗುತ್ತದೆ. ಆ ಕಾರಣಕ್ಕೆ ಮನೆಯಲ್ಲೇ ಕೈಯಲ್ಲಿರುವ ಮೊಬೈಲ್ ಹಿಡಿದು ನಿಮಗೆ ಬೇಕಾದ ವಸ್ತುವನ್ನು ಕೊಳ್ಳುವುದು ಸೂಕ್ತ.

ಸಮಯದ ಉಳಿತಾಯ

ಶಾಪಿಂಗ್ ಎಂದರೆ ಕನಿಷ್ಠ ಅರ್ಧ ದಿನವಾದರೂ ಬೇಕು. ಅದರೊಂದಿಗೆ ಮನೆಯವರೆಲ್ಲರ ಬಿಡುವಿನ ಸಮಯ ನೋಡಿಕೊಂಡು ಹೋಗಬೇಕು. ಆದರೆ ಆನ್‌ಲೈನ್ ಶಾಪಿಂಗ್ ಹಾಗಲ್ಲ. ನಮಗೆ ಬೇಕಾದ್ದನ್ನು ಬೇಕೆನ್ನಿಸಿದಾಗ ಕಾರ್ಟ್‌ನಲ್ಲಿ ಸೇರಿಸಿ ಇಟ್ಟರೆ ಆಯ್ತು. ಆಫರ್ ಇದ್ದಾಗ ಅಥವಾ ಸಮಯ ಸಿಕ್ಕಾಗ ಆರ್ಡರ್ ಮಾಡಬಹುದು. ಅಲ್ಲದೇ ಯಾವುದೋ ಒಂದು ವಸ್ತು ಸಿಗಲಿಲ್ಲ, ಇಷ್ಟದ ಬಣ್ಣದ ಡ್ರೆಸ್ ಇಲ್ಲ ಎಂದು ಮಳಿಗೆ ಮಳಿಗೆ ಸುತ್ತಾಡುತ್ತಾ ಸಮಯ ವ್ಯರ್ಥ ಮಾಡುವುದು ತಪ್ಪಿಸಬಹುದು.

ಆಫರ್‌ಗಳು

ಇತ್ತೀಚೆಗೆ ಶಾಪಿಂಗ್ ವೆಬ್‌ಸೈಟ್‌ನಲ್ಲಿ ಮನೆ ಹಾಗೂ ಮನೆಯ ಸದಸ್ಯರಿಗೆ ಬೇಕಾಗುವ ಪ್ರತಿಯೊಂದು ವಸ್ತುಗಳು ಲಭ್ಯವಿವೆ. ಇದರೊಂದಿಗೆ ಉತ್ತಮ ಆಫರ್‌ಗಳೂ ಇರುತ್ತವೆ. ಅದರಲ್ಲೂ ಹಬ್ಬದ ಸಮಯದಲ್ಲಿ ಪ್ರತಿ ವಸ್ತುವಿನ ಮೇಲೂ ಡಿಸ್ಕೌಂಟ್ ಆಫರ್‌ಗಳಿರುತ್ತವೆ. ಇದರಿಂದ ಮಳಿಗೆ ಅಥವಾ ಮಾರುಕಟ್ಟೆಯಲ್ಲಿ ಸಿಗುವ ವಸ್ತುಗಳಿಗಿಂತ ಕಡಿಮೆ ದರದಲ್ಲಿ ಆನ್‌ಲೈನ್‌ನಲ್ಲಿ ಶಾಪಿಂಗ್ ಮಾಡಬಹುದು. ಅಲ್ಲದೇ ಒಂದು ಕೊಂಡರೆ ಒಂದು ಉಚಿತ, ಎರಡು ಕೊಂಡರೆ ಒಂದು ಉಚಿತ ಇಂತಹ ಆಫರ್‌ಗಳು ಕೂಡ ಆನ್‌ಲೈನ್ ವೇದಿಕೆಯಲ್ಲಿ ಇರುತ್ತವೆ.

ಖಾಸಗೀತನ

ಮಳಿಗೆಗಳಲ್ಲಿ ಶಾಪಿಂಗ್ ಮಾಡುವಾಗ ನಾವೊಬ್ಬರೇ ಇರುವುದಿಲ್ಲ. ಶಾಪಿಂಗ್ ಮಳಿಗೆಗಳು ಎಂದರೆ ಸಾವಿರಾರು ಜನರಿರುತ್ತಾರೆ. ಎಲ್ಲರೂ ಆರಿಸುವ ನಡುವೆ ನಮಗೆ ಬೇಕಾಗಿದ್ದನ್ನು ನಾವು ಆರಿಸಬೇಕು. ಮಳಿಗೆಯಲ್ಲಿ ಖಾಸಗಿಯಾಗಿ ಖರೀದಿ ಮಾಡುವ ಸಾಧ್ಯತೆಯೂ ಕಡಿಮೆ. ಆನ್‌ಲೈನ್ ಶಾಪಿಂಗ್‌ನಲ್ಲಾದರೆ ನಮಗೆ ಬೇಕಾದ್ದನ್ನು ಆರಿಸಿ ಖಾಸಗಿಯಾಗಿ ಶಾಪಿಂಗ್ ಮಾಡಬಹುದು. ಆನ್‌ಲೈನ್ ಶಾಪಿಂಗ್ ಖಾಸಗೀತನಕ್ಕೆ ಒತ್ತು ಕೊಡುತ್ತದೆ. ❖

ಎಣೆಯಿಲ್ಲದ ಪಾರಂಪರಿಕ ವಸ್ತ್ರ ವೈಭವ



ಎಸ್ಸೆಚ್

ಭಾರತವೆಂದರೆ ಶ್ರೀಮಂತ ಸಂಸ್ಕೃತಿ ಮತ್ತು ಉತ್ಕೃಷ್ಟವಾದ ಪರಂಪರೆಯ ಬೀಡು. ಈ ನಿಟ್ಟಿನಲ್ಲಿ ಭಾರತೀಯ ಕೈಮಗ್ಗ ತನ್ನ ವೈವಿಧ್ಯತೆ, ಗುಣಮಟ್ಟ ಮತ್ತು ಸೌಂದರ್ಯದಿಂದ ಜಗತ್ತಿನಾದ್ಯಂತ ಅತ್ಯಂತ ಜನಪ್ರಿಯವಾಗಿದೆ. ವಿವಿಧ ರೀತಿಯ ಪ್ರಿಂಟ್, ಅಪರೂಪದ ವಸ್ತ್ರ ವೈವಿಧ್ಯ, ನುರಿತ ನೇಕಾರರ ನೇಯ್ಗೆಯಿಂದ ಈ ಕ್ಷೇತ್ರದಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಒಂದೊಂದು ಪ್ರದೇಶವೂ ತನ್ನದೇ ಆದ ವಿಶಿಷ್ಟ ಬಗೆಯ ಪ್ರಿಂಟ್, ರಂಗು ಹಾಗೂ ನೇಯ್ಗೆಯ ವಸ್ತ್ರದಿಂದ ಛಾಪು ಮೂಡಿಸಿದೆ. ಭಾರತದ ಈ ಜವಳಿ ಕೌಶಲವು ಗ್ರಾಮೀಣ ಬದುಕು, ಪ್ರಕೃತಿ ಮತ್ತು ಅದರಲ್ಲಿರುವ ಹೂವು, ಎಲೆ, ಪ್ರಾಣಿಗಳು, ಶಿಲ್ಪಕಲೆ ಮೊದಲಾದವುಗಳಿಂದ ಪ್ರೇರಣೆ ಪಡೆದು ಬೆಳೆದು ಬಂದಿದೆ. ಹಾಗೆಯೇ ಇದು ಕಾಲಕಾಲಕ್ಕೆ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತಲೇ ಕಲಾವಿದರು, ಕರಕುಶಲಕರ್ಮಿಗಳ ಕೈಗಳಲ್ಲಿ ಅರಳುತ್ತಲೇ ಸಾಗಿದೆ.

ಈ ಹಬ್ಬಗಳ ಸಾಲು ಆರಂಭವಾದ ಸಂದರ್ಭದಲ್ಲಿ, ಕಣ್ಮನ ಸೆಳೆಯುವ ಸೀರೆಗಳು, ಉಡುಪುಗಳ ಖರೀದಿಸುತ್ತ ಜನ ಸಂಭ್ರಮಿಸುವ ಹೊತ್ತಲ್ಲಿ ಭಾರತದ ಕೆಲವು ಜನಪ್ರಿಯ ವಸ್ತ್ರ ವೈಭವದ ಬಗ್ಗೆಯೂ ತಿಳಿದುಕೊಂಡರೆ ಸೂಕ್ತ.

ಗಾಮ್ತಿ ಪ್ರಿಂಟ್: ಗ್ರಾಮ ಶಬ್ದದಿಂದ ಹುಟ್ಟಿಕೊಂಡಿರುವ ಈ ಮಾದರಿ ಒಂದು ರೀತಿಯ ಬ್ಲಾಕ್ ಪ್ರಿಂಟ್ ಆಗಿದ್ದು, ರಾಜಸ್ತಾನ ಮತ್ತು ಗುಜರಾತ್ ಮೂಲದ್ದು. ದುಪಟ್ಟಾ, ಪೇಟ ಮೊದಲಾದವುಗಳಿಗೆ ಈ ಪ್ರಿಂಟ್ ಬಳಸಲಾಗುತ್ತಿತ್ತು. ಇದು ಕನ್ನಡಿ ಕೆಲಸವನ್ನೂ ಒಳಗೊಂಡಿದ್ದು, ಹೆಚ್ಚು ಎದ್ದು ಕಾಣುವ ಹಾಗೂ ಸಂಕೀರ್ಣವಾದ ಪ್ರಿಂಟ್‌ಗಳು ಇದರ ವಿಶೇಷ. ಘಾಗ್ರಾ, ಜಾಕೆಟ್, ಕುರ್ತಿ, ಸಲ್ವಾರ್, ಸೀರೆ, ಶಾಲು, ಕ್ಲಚ್, ಬ್ಯಾಗ್ ಮೊದಲಾದವುಗಳ ಮೇಲೆ ಈ ಪ್ರಿಂಟ್ ಜನಪ್ರಿಯವಾಗಿದೆ. ಹಾಗೆಯೇ ಮೇಲುಹಾಸು, ಕುಶನ್ ಕವರ್, ಕಿಟಕಿ ಪರದೆ, ರಗ್ ಮೇಲೂ ಮೂಡಿಸಲಾಗುತ್ತದೆ.

ಬಾಂಧನಿ: ಅತ್ಯಂತ ಜನಪ್ರಿಯವಾಗಿರುವ ಈ ಪ್ರಿಂಟ್‌ನ ಮೂಲವೂ ರಾಜಸ್ತಾನ ಮತ್ತು ಗುಜರಾತ್. ಬಾಂಧನಿ ಅಂದರೆ ಬಂಧ, ಕಟ್ಟುವುದು. ಇದು ತೀರಾ ಪ್ರಾಚೀನ ಕಲೆ ಎಂದೇ ಬಣ್ಣಿಸಲಾಗುತ್ತಿದೆ. ಬಟ್ಟೆಯನ್ನು ಅಲ್ಲಲ್ಲಿ ಸೇರಿಸಿ ಸಣ್ಣ ಗಂಟು ಮಾಡಿ ವಿನ್ಯಾಸ ಮಾಡಿ ನಂತರ ಬಣ್ಣ ಹಾಕಲಾಗುತ್ತದೆ. ಸಾಮಾನ್ಯವಾಗಿ ಗೆರೆ, ಡಾಟ್, ಚೌಕುಳಿ ಮೊದಲಾದ ವಿನ್ಯಾಸದಿಂದ ಮನ ಸೆಳೆಯುತ್ತದೆ.

ಪಟೋಲ: ಡಬಲ್ ಇಕಟ್ ಎಂದೂ ಖ್ಯಾತವಾಗಿರುವ ಇದನ್ನು ಸಿದ್ಧಪಡಿಸುವುದು ಗುಜರಾತ್‌ನಲ್ಲಿ. ಹೆಚ್ಚಾಗಿ ಹತ್ತಿ, ರೇಷ್ಮೆ ಅಥವಾ ಎರಡನ್ನೂ ಮಿಶ್ರಣ ಮಾಡಿರುವಂತಹ ವಸ್ತ್ರದ ಮೇಲೆ ಈ ವಿನ್ಯಾಸವಿರುತ್ತದೆ. ಇದು ಸಂಕೀರ್ಣವಾದ ಪದ್ಧತಿಯನ್ನು ಹೊಂದಿದ್ದು, ಪ್ರತಿಯೊಂದು ಎಳೆಯನ್ನು ಪ್ರತ್ಯೇಕವಾಗಿ ಬಣ್ಣದಲ್ಲಿ ಅದ್ದಿ ವಿನ್ಯಾಸಕ್ಕೆ ಅನುಗುಣವಾಗಿ ಹೆಣೆಯಲಾಗುತ್ತದೆ. ಸಾಮಾನ್ಯವಾಗಿ ಗಿಳಿ, ಹೂವು, ಆನೆ, ಹುಡುಗಿಯ ವಿನ್ಯಾಸವಿರುವ ಸೀರೆ ಹಾಗೂ ಉಡುಪು ಅತ್ಯಂತ ಆಕರ್ಷಕ. ಶಾಲುಗಳು ಹಾಗೂ ಇತರ ವಸ್ತುಗಳ ಮೇಲೂ ಈ ವಿನ್ಯಾಸವನ್ನು ಮೂಡಿಸಲಾಗುತ್ತದೆ.

ಮಧುಬನಿ: ಈ ಹಿಂದೆ ಗೋಡೆ, ಬಾಗಿಲಿನ ಮೇಲೆ ಈ ಕಲೆಯನ್ನು ಮೂಡಿಸಲಾಗುತ್ತಿತ್ತು. ಕುಂಚ, ಕೈಬೆರಳು, ಪೆನ್ ಮೂಲಕ ಈ ಕಲೆ ಅರಳುತ್ತಿತ್ತು. ಪ್ರಸಕ್ತ ಈ ಕಲೆ ಜಗತ್ತಿನಾದ್ಯಂತ ಜನಪ್ರಿಯವಾಗಿದ್ದು, ಸೀರೆ ಹಾಗೂ ಉಡುಪಿನ ಮೇಲೆ ಅಂದವಾಗಿ ಕಾಣುತ್ತದೆ. ಫ್ಯಾಷನ್ ಲೋಕದಲ್ಲಂತೂ ಇದು ಹೆಚ್ಚಿನ ಖ್ಯಾತಿ ಪಡೆದಿದ್ದು, ಮಧುಬನಿ ಕಲಾವಿದರ ಕಲ್ಪನೆಯ ಮೂಸೆಯಲ್ಲಿ ಆಕರ್ಷಕವಾಗಿ ಮೂಡುತ್ತಿದೆ. ಮಿಥಿಲಾ ಚಿತ್ರಕಲೆ ಎಂದೂ ಪ್ರಸಿದ್ಧವಾಗಿರುವ ಇದರಲ್ಲಿ ನೈಸರ್ಗಿಕ ಬಣ್ಣವನ್ನು ಬಳಸಲಾಗುತ್ತದೆ. ಕಣ್ಣಿಗೆ ಕಟ್ಟುವಂತಹ ಜ್ಯಾಮಿತೀಯ ವಿನ್ಯಾಸಗಳು ರಾಷ್ಟ್ರೀಯ ಪರಂಪರೆ ಪಟ್ಟಿಯಲ್ಲಿವೆ.

ಬಾಟಿಕ್: ಸುಮಾರು 2000 ವರ್ಷಗಳಷ್ಟು ಹಳೆಯದಾದ ಈ ಕಲೆ ಟೈ ಅಂಡ್ ಡೈ ತಂತ್ರಜ್ಞಾನವನ್ನು ಒಳಗೊಂಡಿದೆ. ಸಾಮಾನ್ಯವಾಗಿ ಹೂವಿನ ವಿನ್ಯಾಸವನ್ನು ನೈಸರ್ಗಿಕ, ಕೆಲವೊಮ್ಮೆ ದಟ್ಟ ರಂಗಿನಲ್ಲಿ ಮೂಡಿಸಲಾಗುತ್ತದೆ. ದುಪಟ್ಟಾ, ಕುರ್ತಿ, ಸೀರೆ, ಉಡುಪಿನ ಬಟ್ಟೆಯಲ್ಲಿ ಈ ಕಲೆಯನ್ನು ಬಳಸಲಾಗುತ್ತದೆ.

ಕಲಂಕರಿ: ಪರ್ಶಿಯಾ ಮೂಲದ ಕಲೆ ಪೆನ್ ಮೂಲಕ ಬಿಡಿಸುವ ವಿನ್ಯಾಸವೆಂದೇ ಜನಪ್ರಿಯ. ಹಿಂದೆ ನೈಸರ್ಗಿಕ ಬಣ್ಣವನ್ನು ಮಾತ್ರ ಬಳಸಲಾಗುತ್ತಿತ್ತು. ಈಗ ಅಮೂರ್ತ ಕಲೆ, ಪ್ರಾಣಿಗಳು ಹಾಗೂ ಹೂವುಗಳ ಚಿತ್ರವನ್ನು ಬಳಸಿ ಬಟ್ಟೆಗಳ ಮೇಲೆ ವಿನ್ಯಾಸ ಮೂಡಿಸಲಾಗುತ್ತದೆ. ಸದ್ಯಕ್ಕಂತೂ ಈ ಬಟ್ಟೆ ಜನಪ್ರಿಯವಾಗಿದ್ದು, ರೇಷ್ಮೆ ಬಟ್ಟೆಯ ಮೇಲೂ ಪ್ರಿಂಟ್ ಮೂಡಿಸಲಾಗುತ್ತದೆ.

ದಾಬು: ದಬಾನಾ ಅಂದರೆ ಒತ್ತು ಎಂಬ ಶಬ್ದದಿಂದ ಈ ಕಲೆಗೆ ಹೆಸರು ಬಂದಿದ್ದು, ಗುಜರಾತ್ ಇದರ ಮೂಲ. ಸುಣ್ಣ, ಗೋಧಿ ಹೊಟ್ಟು ಮತ್ತು ಅಂಟನ್ನು ಬಳಸಿ ಪ್ರಿಂಟ್ ಮಾಡಲಾಗುತ್ತದೆ. ಅಂದರೆ ಬಟ್ಟೆಗೆ ಈ ಮಿಶ್ರಣವನ್ನು ಹಚ್ಚಿ ಬ್ಲಾಕ್ ಪ್ರಿಂಟ್ ಮಾಡಲಾಗುತ್ತದೆ. ಘಾಗ್ರಾ ಚೋಲಿ, ದುಪಟ್ಟಾ, ಸೀರೆ, ಉಡುಪಿಗೆ ಈ ಪ್ರಿಂಟ್ ಬಳಸಿ ಜನಪ್ರಿಯ ಮಾಡಲಾಗಿದೆ. ❖

ಇಕಟ್

ಅತ್ಯಂತ ಪ್ರಾಚೀನವಾದ ಕಲೆಯಾಗಿದ್ದು, ನೇಯ್ಗೆಗಿಂತ ಮುನ್ನವೇ ಎಳೆಗಳಿಗೆ ಬಣ್ಣ ಹಾಕಿ ನಿಗದಿತ ವಿನ್ಯಾಸ ಮೂಡುವಂತೆ ಮಾಡಲಾಗುತ್ತದೆ. ಟೈ- ಡೈನಂತೆ ಹಾಸು ಅಥವಾ ಹೊಕ್ಕಿನಲ್ಲಿ ರಂಗನ್ನು ವಿರೋಧಿಸುವ ಪ್ರಕ್ರಿಯೆ ಈ ಕಲೆಯಲ್ಲಿ ಒಳಗೊಂಡಿದೆ. ವಿನ್ಯಾಸದಲ್ಲಿ ಹೆಚ್ಚು ಅಸ್ಪಷ್ಟತೆ ಮೂಡಿಸಿದಷ್ಟೂ ಈ ಪ್ರಿಂಟ್‌ನ ಬಟ್ಟೆ ಹೆಚ್ಚು ದುಬಾರಿ ಬೆಲೆಗೆ ಮಾರಾಟವಾಗುತ್ತದೆ.

> ಭಾರತೀಯ ಕೈಮಗ್ಗ ತನ್ನ ವೈವಿಧ್ಯತೆ, ಗುಣಮಟ್ಟ ಮತ್ತು ಸೌಂದರ್ಯದಿಂದ ಜಗತ್ತಿನಾದ್ಯಂತ ಅತ್ಯಂತ ಜನಪ್ರಿಯವಾಗಿದೆ. ವಿವಿಧ ರೀತಿಯ ಪ್ರಿಂಟ್, ಅಪರೂಪದ ವಸ್ತ್ರ ವೈವಿಧ್ಯ, ನುರಿತ ನೇಕಾರರ ನೇಯ್ಗೆಯಿಂದ ಈ ಕ್ಷೇತ್ರದಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ

ಉಲ್ಲಾಸಕ್ಕಿದೆ ಸಕಾರಣ..

ಎಷ್ಟೇ ಕಷ್ಟ ಇದ್ದರೂ ಕುಗ್ಗದೆ, ಅದರಿಂದ ಹೊರಬರುವ ದಾರಿಗಳ ಕುರಿತು ಯೋಚಿಸಬೇಕು. ಕಷ್ಟಗಳನ್ನು ಅದುಮಿಟ್ಟು 'ಫೀಲ್ ಗುಡ್' ಅನಿಸಬೇಕಾದರೆ ಕೆಲವೊಂದು ಸುಲಭ ಸೂತ್ರಗಳನ್ನು ಅನುಸರಿಸಬಹುದು. ಅಂಥ ಕೆಲವು ಸೂತ್ರಗಳು ಇಲ್ಲಿವೆ



ಅಮೃತ

ನಿಮ್ಮ ಸುತ್ತಮುತ್ತ ಇರುವವರನ್ನು ಸೂಕ್ಷ್ಮವಾಗಿ ಗಮನಿಸಿ. ಕೆಲವರಾದರೂ ಉಳಿದವರಿಗಿಂತ ಹೆಚ್ಚು ಖುಷಿಯಾಗಿರುವುದನ್ನು ಕಾಣಬಹುದು. ನೀವೂ ಯಾಕೆ ಅವರಂತೆ ಇರಬಾರದು ಎಂದು ಒಂದು ಕ್ಷಣವಾದರೂ ಯೋಚಿಸಿ. ನಿತ್ಯ ಸಂತಸದಿಂದ ಇರಬೇಕಾದರೆ ಏನು ಮಾಡಬಹುದು ಎಂಬುದೇ ಹಲವರಲ್ಲಿರುವ ದೊಡ್ಡ ಪ್ರಶ್ನೆ. ಈ ರೀತಿ ಸಂತಸದಿಂದ ಇರುವುದು ಅನುವಂಶೀಯವಾಗಿ ಬರುತ್ತದೆ ಎನ್ನುವ ಬಗ್ಗೆ ಅಧ್ಯಯನಗಳೂ ನಡೆದಿವೆ.

ಹಾಗಾದರೆ ಖುಷಿಯಾಗಿರಲು ಏನು ಮಾಡಬೇಕು? ಸಿಟ್ಟು, ದುಗುಡ ಎಲ್ಲವನ್ನೂ ಅದುಮಿಟ್ಟು, 'ಫೀಲ್ ಗುಡ್' ಅನಿಸಬೇಕಾದರೆ ಕೆಲವೊಂದು ಸುಲಭ ಸೂತ್ರಗಳನ್ನು ಅನುಸರಿಸಬಹುದು.

ನಿಗದಿತ ಗುರಿ ಇಟ್ಟುಕೊಳ್ಳಿ

ಯಾವುದಾದರೂ ಗುರಿ ಇಟ್ಟುಕೊಂಡು ಆ ನಿಟ್ಟಿನಲ್ಲಿ ಪ್ರಯತ್ನ ಪಡುತ್ತಿದ್ದರೆ ಅದು ದೀರ್ಘಾವಧಿ ಖುಷಿಗೆ ಕಾರಣವಂತೆ. ಈ ಗುರಿಯ ಹಿಂದಿನ ಉದ್ದೇಶ ಹೆಚ್ಚಿನ ಜನರಿಗೆ ನೆರವಾಗುವಂತಿದ್ದರೆ ಅದು ಇನ್ನೂ ಹೆಚ್ಚಿನ ಆನಂದ ಕೊಡುತ್ತದಂತೆ. ಉದಾಹರಣೆಗೆ ಕಚೇರಿಯಲ್ಲಿ ಒಂದು ಯೋಜನೆ ಒಪ್ಪಿಕೊಂಡು ಅದು ಎಲ್ಲ ಉದ್ಯೋಗಿಗಳಿಗೂ ಸಹಾಯವಾಗುವಂತಿದ್ದರೆ ಅದನ್ನು ಸಾಧಿಸಿದಾಗ ಜಾಸ್ತಿ ಸಂತಸವಾಗುತ್ತದಂತೆ. ತಮ್ಮ ಉದ್ಯೋಗದ ಬಗ್ಗೆ ಹೆಚ್ಚಿನ ತೃಪ್ತಿ ಹೊಂದುತ್ತಾರಂತೆ. ಈ ತೃಪ್ತಿ ಎನ್ನುವುದು ನಿಮ್ಮಲ್ಲಿ ಒಟ್ಟಾರೆ ಕ್ಷೇಮಕರ ಭಾವನೆ ಹುಟ್ಟಲು ಕಾರಣವಾಗುತ್ತದೆ.

ಆದರೆ ಗುರಿಯನ್ನು ಸ್ಪರ್ಧಾತ್ಮಕ ಹಾಗೂ ಸಹಕಾರಿ ಎಂಬುದಾಗಿ ವಿಭಾಗಿಸಿಕೊಳ್ಳಬೇಕು. ಬೇರೆಯವರ ಜೊತೆ ಸ್ಪರ್ಧೆಗಿಳಿದಾಗ ಅದನ್ನು ಆರೋಗ್ಯಕರವಾಗಿ ನೋಡಬೇಕೇ ಹೊರತು ಅವರ ಜೊತೆ ಹೋಲಿಸಿಕೊಳ್ಳಬಾರದು. ಸಹಕಾರವನ್ನು ಒಳಗೊಂಡ ಗುರಿಯೆಂದರೆನಿಮ್ಮಕುಟುಂಬದಸದಸ್ಯರು,ಸ್ನೇಹಿತರು, ನೆರೆಹೊರೆಯವರು, ಬಂಧುಗಳ ಸ್ಥಾನಮಾನವನ್ನು ಮೇಲಕ್ಕೆತ್ತುವುದು. ಇದರಲ್ಲಿ ಯಶಸ್ಸು ಸಿಕ್ಕರೆ ಅದು ಪ್ರತಿಯೊಬ್ಬರಿಗೂ ಲಾಭವಾದಂತೆ. ಇಂತಹ ಕಾರ್ಯದಲ್ಲಿ ತೊಡಗಿದವರಲ್ಲಿ ಯಾವಾಗಲೂ ಸಂತಸ ಮನೆ ಮಾಡುತ್ತದೆ ಎನ್ನುತ್ತದೆ ಅಧ್ಯಯನ. ತಮ್ಮ ಸಾಧನೆಯನ್ನು ಮಾತ್ರವಲ್ಲ, ತಮ್ಮ ಸುತ್ತಮುತ್ತಲು ಇರುವವರ ಸಾಧನೆಯನ್ನೂ ಆಚರಿಸಿ ಖುಷಿ ಪಡುವ ಸ್ವಭಾವ ಅಂಥವರದ್ದು.

ಯಾವುದೇ ಒಂದು ವಿಷಯ ಸಂಪೂರ್ಣವಾಗಿ ಒಳ್ಳೆಯದು ಅಥವಾ ಸಂಪೂರ್ಣವಾಗಿ ಕೆಟ್ಟದ್ದಾಗಿರುವುದು ಕಡಿಮೆ. ಕೆಲವೊಂದು ಸಕಾರಾತ್ಮಕ ಹಾಗೂ ಕೆಲವೊಂದು ನಕಾರಾತ್ಮಕ ವಿಷಯಗಳಿರುತ್ತವೆ. ಆದರೆ ಖುಷಿಯಿಂದಿರುವ ವ್ಯಕ್ತಿಗಳು ನಕಾರಾತ್ಮಕ ಅಂಶಗಳನ್ನು ಮರೆತು ಅಥವಾ ಹಿಂದಕ್ಕೆ ಬಿಟ್ಟು ಸಕಾರಾತ್ಮಕ ವಿಷಯಗಳತ್ತ ಗಮನ ನೀಡುತ್ತಾರಂತೆ. ಇದು ಹೆಚ್ಚು ಕಾಲ ನೆನಪಿನಲ್ಲಿ ಉಳಿದು, ಖುಷಿ ಕೊಡುತ್ತಿರುತ್ತದೆ.

ಬದುಕಿನಲ್ಲಿ ಕಹಿ ಘಟನೆಗಳು ಸಾಮಾನ್ಯ. ಅದರಲ್ಲೂ ಕೆಲವರು ನಿಮಗೆ ಕೆಟ್ಟದ್ದನ್ನು ಉಂಟು ಮಾಡಿರಬಹುದು. ನಮಗೆ ಆತ್ಮೀಯವಾಗಿರುವ ವ್ಯಕ್ತಿಗಳೇ ಕೆಲವೊಮ್ಮೆ ಸ್ವಾರ್ಥ ತೋರಿಸಬಹುದು. ಆಗ ಅವರನ್ನು ಮನ್ನಿಸಿದರೆ ಅಂತಹ ಕೆಟ್ಟ ಘಟನೆಯನ್ನೂ ಮರೆಯಬಹುದಂತೆ. ಹೀಗಾಗಿ ನಕಾರಾತ್ಮಕ ಅಂಶಗಳನ್ನು ಮರೆತು ಖುಷಿಯ ಕ್ಷಣಗಳಷ್ಟೇ ನೆನಪಿನಲ್ಲಿರುತ್ತವೆ. ದೈಹಿಕ ನೋವಿಗಿಂತ ಮಾನಸಿಕ ನೋವು ಹೆಚ್ಚು ಕಾಲ ಇರಬಹುದು. ಏಕೆಂದರೆ ಮನಸ್ಸಿನಲ್ಲಿ ಅಂತಹ ಘಟನೆಗಳು ನೆನಪಾದಾಗ ಸಿಟ್ಟು, ಅವಮಾನ ಅನಿಸುವುದು ಸಾಮಾನ್ಯ. ಆದರೂ ಮನಸ್ಸು ಮಾಡಿದರೆ ಇದನ್ನು ಮರೆಯಬಹುದು ಎನ್ನುತ್ತಾರೆ ತಜ್ಞರು. ಹಾಗೆಯೇ ಅಂತಹ ವ್ಯಕ್ತಿಗಳನ್ನು ಕ್ಷಮಿಸುವುದು ಎಂದರೆ ಅವರನ್ನು ನಂಬಬೇಕು ಎಂದರ್ಥವಲ್ಲ, ಅವರಿಂದ ದೂರ ಇರುವುದು ಒಳಿತು. ಇದರಿಂದ ಮನಸ್ಸಿನಲ್ಲಿ ಉಲ್ಲಾಸದ ಭಾವನೆಗಳು ಸದಾ ಹುಟ್ಟುವಂತೆ ನೋಡಿಕೊಳ್ಳಬಹುದು. ❖

ಮುದ್ದು ಮರಿಗೆ ಬೇಕು ಕಾಳಜಿ

ಮನಸ್ವಿ

ಮಳೆಗಾಲ ಪ್ರಾರಂಭವಾಗಿ ಕೆಲ ತಿಂಗಳುಗಳು ಕಳೆದರೂ ಮಳೆಯ ಪ್ರಮಾಣ ಕಡಿಮೆಯಾಗಿಲ್ಲ. ಮಳೆಗಾಲದಲ್ಲಿ ಮುದ್ದಾದ ನಾಯಿಮರಿಗಳನ್ನು ಸಾಕುವುದು ಸವಾಲೇ ಸರಿ. ಹಾಗಂತ ಸಾಕಿದ ಮೇಲೆ ಅವುಗಳ ಕಾಳಜಿ ಮಾಡದೇ ಇರಲು ಸಾಧ್ಯವಿಲ್ಲ. ನಮ್ಮ ಮನೆಯ ನಾಯಿಮರಿಯ ಕಾಳಜಿ ನಮ್ಮ ಕೈಯಲ್ಲೇ ಇದೆ. ಹಾಗಾದರೆ ಅವುಗಳ ರಕ್ಷಣೆ ಹಾಗೂ ಕಾಳಜಿ ಮಾಡುವುದು ಹೇಗೆ?

ಸ್ವಚ್ಛವಾಗಿಡಿ ಹಾಗೂ ಒಣಗಿಸಿ

ಮಳೆಯಲ್ಲಿ ನೆನೆಯುವುದು ಮನುಷ್ಯರಂತೆ ಪ್ರಾಣಿಗಳಿಗೂ ಇಷ್ಟವಾಗುತ್ತದೆ. ಎಲ್ಲೋ ತಿರುಗಾಟಕ್ಕೆ ಹೋದಾಗ, ವಾಕಿಂಗ್ ಹೋದಾಗ ನಿಮ್ಮ ಮುದ್ದಾದ ನಾಯಿಮರಿ ಒದ್ದೆಯಾಗಿರುತ್ತದೆ ಅಥವಾ ಗಲೀಜು ನೀರು ಅದರ ಮೈ ಸೋಕಿರುತ್ತದೆ. ಅಂತಹ ಸಂದರ್ಭದಲ್ಲಿ ಮನೆಗೆ ಬಂದ ಕೂಡಲೇ ಬಿಸಿನೀರಿನೊಂದಿಗೆ ಸೋಂಕು ನಿವಾರಕ ಶ್ಯಾಂಪು ಅಥವಾ ಸೋಪ್‌ನಿಂದ ಸ್ನಾನ ಮಾಡಿಸಬೇಕು. ಪಟ್ಟಣಗಳಲ್ಲಿ ಮಾಲಿನ್ಯದ ಅಂಶ ಹೆಚ್ಚಿರುವ ಕಾರಣದಿಂದ ಇದನ್ನು ಪಾಲನೆ ಮಾಡಲೇಬೇಕು. ಆ್ಯಸಿಡ್ ಮಳೆಯ ಕಾರಣದಿಂದ ಚರ್ಮ ಹಾಗೂ ತುಪ್ಪಳಗಳ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇದೆ.

ರೋಮದ ರಕ್ಷಣೆ ಮಾಡಿ

ನಾಯಿಮರಿಗಳ ತುಪ್ಪಳ ಅಥವಾ ರೋಮ ಬಹಳ ಸೂಕ್ಷ್ಮ. ಹಾಗಾಗಿ ಮಳೆಗಾಲದಲ್ಲಿ ಅವುಗಳ ಹೆಚ್ಚು ನೆನೆಯದಂತೆ ನೋಡಿಕೊಳ್ಳಿ. ಮಳೆಯಲ್ಲಿ ನಾಯಿಯನ್ನು ಹೊರಗಡೆ ಕರೆದೊಯ್ಯುವ ಮೊದಲು ರೋಮದ ಮೇಲೆ ತೆಳ್ಳಗೆ ವ್ಯಾಸಲಿನ್, ಬೆಣ್ಣೆ ಅಥವಾ ತೆಂಗಿನೆಣ್ಣೆ ಸವರಿ. ಒಮ್ಮೆ ಅವು ಹೊರಗಡೆ ಹೋಗಿ ಬಂದ ಮೇಲೆ ಉಗುರು ಬೆಚ್ಚನೆಯ ನೀರಿನಿಂದ ತೊಳೆದುಬಿಡಿ. ಆಗ ಮೈ ಮೇಲೆ ಅಂಟಿದ ಕೊಳೆ ಸ್ವಚ್ಛವಾಗುತ್ತದೆ. ಒಮ್ಮೆ ತೊಳೆದ ಮೇಲೆ ರೋಮವನ್ನು ಚೆನ್ನಾಗಿ ಒಣಗಿಸಿ. ಆಗಾಗ ಕೂದಲನ್ನು ಕತ್ತರಿಸುತ್ತಲೇ ಇರಿ. ಮಳೆಗಾಲದಲ್ಲಿ ಗಾಯವಾಗದಂತೆ ನೋಡಿಕೊಳ್ಳುವುದು ಅಷ್ಟೇ ಮುಖ್ಯ.



ಕಿವಿ ಹಾಗೂ ಉಗುರಿನ ಸ್ವಚ್ಛತೆಯ ಬಗ್ಗೆ ಗಮನ ಕೊಡಿ

ಚಿಗಟ, ತಿಗಣೆಯಂತಹ ಜೀವಿಗಳು ಕಿವಿ ಹಾಗೂ ಉಗುರಿನಲ್ಲಿ ಸೇರಿರುತ್ತವೆ. ಅದನ್ನು ಆಗಾಗ ಗಮನಿಸಿ ಸ್ವಚ್ಛ ಮಾಡುತ್ತಿರಬೇಕು. ಕೆಲವೊಮ್ಮೆ ಚಿಗಟಗಳು ಕಿವಿಯ ಒಳಗೆ ಹೋಗಿ ತೊಂದರೆ ಮಾಡಬಹುದು. ಹಾಗಾಗಿ ಕಿವಿಯ ಒಳಗೆ ಟಾರ್ಚ್ ಬೆಳಕು ಹಿಡಿದು ಪರಿಶೀಲನೆ ಮಾಡುತ್ತಿರಿ. ಹೊಟ್ಟೆಯ ಭಾಗ, ಕುತ್ತಿಗೆ ಮುಂತಾದ ಕಡೆ ಆಗಾಗ ಗಮನಿಸುತ್ತಿರಿ.

ಬಿಸಿನೀರು ಬಳಸಿ

ಮಳೆಗಾಲದಲ್ಲಿ ನಾಯಿಮರಿಗಳಿಗೆ ಶುದ್ಧ ಹಾಗೂ ಸ್ವಚ್ಛ ನೀರು ಕುಡಿಸಿ. ನೀರಿನಲ್ಲಿರುವ ಕ್ರಿಮಿಕೀಟಗಳು ನಾಯಿಗಳಿಗೆ ಆರೋಗ್ಯ ಸಮಸ್ಯೆ ತಂದೊಡ್ಡಬಹುದು. ಹಾಗಾಗಿ ಸಾಧ್ಯವಾದರೆ ಕಾಯಿಸಿ ತಣಿಸಿದ ನೀರನ್ನು ಕುಡಿಯಲು ಕೊಡಿ. ಇದರಿಂದ ಭೇದಿ ಅಥವಾ ಹೊಟ್ಟೆ ಹಾಳಾಗುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ಆಹಾರಕ್ಕೆ ಗಮನ ಕೊಡಿ

ಮಳೆಗಾಲದಲ್ಲಿ ನಾಯಿಗಳಿಗೆ ನೀಡುವ ಆಹಾರದ ಮೇಲೂ ಗಮನ ಕೊಡಿ. ಬಿಸಿಯಾದ ಆಹಾರವನ್ನೇ ಹೆಚ್ಚು ತಿನ್ನಿಸಿ. ಹಳಸಿದ ಆಹಾರ ಪದಾರ್ಥಗಳನ್ನು ನೀಡದೇ ಇರುವುದು ಉತ್ತಮ. ಅದರೊಂದಿಗೆ ನಾರಿನಾಂಶ ಹೆಚ್ಚಿರುವ ಹಣ್ಣು, ತರಕಾರಿಗಳನ್ನು ಕೊಡಿ. ಇದು ಜೀರ್ಣಕ್ರಿಯೆ ಉತ್ತಮವಾಗಲು ಸಹಕಾರಿ.

ಟವೆಲ್, ರೈನ್‌ಕೋಟ್

ಮಳೆಗಾಲದಲ್ಲಿ ನಾಯಿಮರಿಗಳನ್ನು ಹೊರಗಡೆ ಕರೆದುಕೊಂಡು ಹೋಗುವಾಗ ರೈನ್‌ಕೋಟ್ ತೊಡಿಸಲು ಮರೆಯದಿರಿ. ಅವುಗಳ ಮೈ ಒರೆಸಲು ದಪ್ಪನೆಯ ಹಾಗೂ ಮೃದುವಾಗಿರುವ ಟವೆಲ್ ಬಳಸಿ. ಮಳೆಗಾಲದಲ್ಲಿ ಚಳಿಯೂ ಇರುವ ಕಾರಣ ಕಿವಿಗೆ ಗಾಳಿಗೆ ಒಳ ಹೋಗದಂತೆ ಕಿವಿಗಳನ್ನು ಭದ್ರವಾಗಿ ಮುಚ್ಚಿ. ❖

ಮನೆಯ ಗಿಡಗಳ ಆರೈಕೆ ಹೇಗೆ?



ಸುಕೃತ ಎಸ್.

ನಗರಗಳಲ್ಲಿ ಅನಿವಾರ್ಯವಾಗಿ ಉದ್ಯೋಗದ ನಿಮಿತ್ತ ಬದುಕು ಕಟ್ಟಿಕೊಂಡಿರುವ ಹಲವರು, ನಗರದ ಕಲುಷಿತ ಗಾಳಿ, ಹದಗೆಟ್ಟ ವಾತಾವರಣಕ್ಕೆ ರೋಸಿ ಹೋಗಿದ್ದಾರೆ. ಅನಿವಾರ್ಯ ಇಲ್ಲದಿದ್ದರೆ ತಮ್ಮ ತಮ್ಮ ಊರುಗಳಲ್ಲಿ ಪ್ರಕೃತಿ ಮಧ್ಯದಲ್ಲಿ ಬದುಕುವುದನ್ನೇ ಎಲ್ಲರೂ ಇಷ್ಟಪಡುತ್ತಾರೆ. ಆದ್ದರಿಂದಾಗಿಯೇ ಇಂದಿನ ಯುವಪೀಳಿಗೆ ಮನೆಗಳ ಒಳಗೆ ಪುಟ್ಟ ಪುಟ್ಟ ಕುಂಡಗಳಲ್ಲಿ ಗಿಡ ಬೆಳೆಸಲು ಶುರು ಮಾಡಿದ್ದಾರೆ. ಇದು ಮನೆಯ ಒಳಾಂಗಣ ವಿನ್ಯಾಸದ ದೃಷ್ಟಿಯಿಂದಲೂ ಟ್ರೆಂಡಿ ಆಗಿದೆ.

ಆದರೆ, ಈಗ ಮನೆ ಒಳಗೇ ಗಿಡ ಬೆಳೆಸುವ ಕಾರ್ಯದಲ್ಲಿ ಹಲವರು ಕೆಲವು ತಪ್ಪುಗಳನ್ನು ಮಾಡುವುದುಂಟು. ಕೆಲವು ತಪ್ಪು ಕಲ್ಪನೆಗಳು, ತಪ್ಪು ರೂಢಿಗಳು ಗಿಡದ ಬೆಳವಣಿಗೆಯನ್ನು ಅಸಾಧ್ಯವಾಗಿಸಿವೆ; ಗಿಡಗಳು ಸಾಯುತ್ತಿವೆ. ಹಾಗಾದರೆ, ನಾವು ಮಾಡುವ ಸಾಮಾನ್ಯ ತಪ್ಪುಗಳು ಎಂಥವು. ಅದನ್ನು ಹೇಗೆ ಸರಿ ಮಾಡಿಕೊಳ್ಳಬೇಕು. ಬನ್ನಿ ನೋಡೋಣ.

ನೀರುಣಿಸುವುದು

ಇಲ್ಲಿ ಮೂರು ವಿಷಯಗಳಿವೆ. ಒಂದು ಗಿಡಕ್ಕೆ ಹೆಚ್ಚು ನೀರು ಹಾಕುವುದು, ಇನ್ನೊಂದು ತೀರಾ ಕಡಿಮೆ ನೀರು ಹಾಕುವುದು. ಮತ್ತೊಂದು ನೀರು ಹೇಗೆ ಹಾಕಬೇಕು ಎನ್ನುವುದು.

ಹೆಚ್ಚಿಗೆ ನೀರು ಹಾಕುವುದು ಎಂದರೆ, ಸುಲಭವಾಗಿ ಗಿಡಗಳನ್ನು ಕೊಂದು ಹಾಕಿದಂತೆ. ಹೆಚ್ಚಿಗೆ ನೀರು ಹಾಕಿದರೆ, ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಬೇರುಗಳಲ್ಲಿ ಫಂಗಸ್ ಕಾಣಿಸಿಕೊಳ್ಳುತ್ತದೆ. ಗಿಡಗಳಿಗೆ ನಾವು ತಿಳಿದಷ್ಟು ನೀರಿನ ಅವಶ್ಯಕತೆ ಇರುವುದಿಲ್ಲ. ಗಿಡಕ್ಕೆ ನೀರು ಹಾಕುವ ಮೊದಲು ಒಮ್ಮೆ ಮಣ್ಣನ್ನು ಮುಟ್ಟಿ ನೋಡಿ. ನೀರಿನ ಪಸೆ ಇದೆ ಅಂತಾದರೆ, ನೀರು ಹಾಕಬೇಡಿ.

ತೀರಾ ಕಡಿಮೆ ನೀರು ಹಾಕಿದರೆ ಗಿಡಗಳು ಒಣಗಿ ಹೋಗುತ್ತವೆ. ಕುಂಡದಲ್ಲಿ ಇರುವ ಮಣ್ಣು ಒದ್ದೆ ಆಗಬೇಕು, ಬೇರುಗಳಿಗೆ ನೀರು ಮುಟ್ಟಬೇಕು. ಇಲ್ಲವಾದಲ್ಲಿ ಗಿಡ ಬಾಡಿ ಹೋಗುತ್ತದೆ. ಜೊತೆಗೆ ಯಾವ ಜಾತಿಯ ಗಿಡ ಎನ್ನುವುದು ಮುಖ್ಯವಾಗುತ್ತದೆ. ಕೆಲವು ಜಾತಿಯ ಗಿಡಗಳಿಗೆ ಸ್ವಲ್ಪ ಹೆಚ್ಚಿಗೆಯೇ ನೀರು ಬೇಕಾಗುತ್ತದೆ, ಕೆಲವಕ್ಕೆ ಬೇಡ. ಆದ್ದರಿಂದ ಗಿಡ ಬೆಳೆಸುವ ಮೊದಲ ಈ ಎಲ್ಲದರ ಬಗ್ಗೆ ಸಣ್ಣ ಹೋಂವರ್ಕ್ ಮಾಡಿಕೊಂಡರೆ ಉತ್ತಮ.

ಪ್ರತಿಬಾರಿಯೂ ಕುಂಡದ ಒಂದೇ ಜಾಗಕ್ಕೇ ನೀರು ಹರಿಸುವುದು ಉತ್ತಮವಲ್ಲ. ಹೀಗೆ ಮಾಡಿದರೆ, ಬೇರಿನ ಎಲ್ಲಾ ಭಾಗಕ್ಕೂ ನೀರು ದಕ್ಕದೇ ಇರಬಹುದು. ಆದ್ದರಿಂದ ಗಿಡದ ಸುತ್ತಲೂ ನೀರು ಹಾಕುವುದನ್ನು ರೂಢಿಸಿಕೊಳ್ಳಬೇಕು.

ನುಣುಪು ಕಲ್ಲುಗಳು

ಗಿಡದ ಪೋಷಕರು ಮಾಡುವ ಸಾಮಾನ್ಯ ತಪ್ಪಿದು. ಗಿಡ ಉಸಿರಾಡುವುದಕ್ಕೆ, ಹೆಚ್ಚಿಗೆ ನೀರು ಹಾಕಿದಾಗ ಹರಿದು ಹೋಗಲು ಕುಂಡಗಳಲ್ಲಿ ಅಲ್ಲಲ್ಲಿ ಸಣ್ಣ ರಂಧ್ರಗಳಿರಬೇಕು. ಆದರೆ, ಕೆಲವರು ರಂಧ್ರಗಳಿಲ್ಲದ ಕುಂಡಗಳನ್ನು ಬಳಸುತ್ತಾರೆ. ಜೊತೆಗೆ, ಮಣ್ಣುಗಳ ಮೇಲೆ ನುಣುಪು ಕಲ್ಲುಗಳನ್ನು ಹಾಕಿ ಗಿಡ ನೆಡುತ್ತಾರೆ. ಈ ನುಣುಪು ಕಲ್ಲುಗಳು ನೀರನ್ನು ನಿಧಾನವಾಗಿ ಮಣ್ಣಿಗೆ ಬಿಟ್ಟುಕೊಡುತ್ತವೆ ಎಂದು ತಪ್ಪು ತಿಳಿಯಲಾಗಿದೆ. ಇಂಥ ಕಲ್ಲುಗಳನ್ನು ಬಳಸಬಾರದು.

ಬೆಳಕು

ಇಲ್ಲೂ ಎರಡು ವಿಧದ ಸಮಸ್ಯೆಗಳಿವೆ. ಒಂದು ಹೆಚ್ಚು ಬೆಳಕು ಬರುವಲ್ಲಿ ಕುಂಡ ಇಡುವುದು, ಇಲ್ಲವೇ ತೀರಾ ಕಡಿಮೆ ಬೆಳಕು ಬರುವಲ್ಲಿ ಇಡುವುದು. ಎರಡೂ ಸಹ ಗಿಡಗಳ ಆರೋಗ್ಯಕ್ಕೆ ಒಳ್ಳೆಯದಲ್ಲ. ಹದವಾಗಿ ಬೆಳಕು ಬಂದು ಗಿಡಗಳು ಆರೋಗ್ಯವಾಗಿ ಬೆಳೆಯಲು ಕೆಲವು ಉಪಾಯಗಳನ್ನು ಮಾಡಿಕೊಳ್ಳಬಹುದು.

ಮನೆಯಲ್ಲಿ ದೊಡ್ಡ ಕಿಟಕಿ ಇರುವ ಜಾಗದಲ್ಲಿ ಗಿಡಗಳ ಕುಂಡಗಳನ್ನು ಇಡಿ, ಬಿಸಿಲು ಏರುವ ಹೊತ್ತಿಗೆ ಕಿಟಕಿ ಪರದೆಯನ್ನು ಮುಚ್ಚಿ. ಆಗ ಗಿಡಗಳಿಗೆ ಬೆಳಕು ಸಿಗುತ್ತದೆ, ಹೆಚ್ಚಿಗೆ ಬೆಳಕೂ ಬೀಳುವುದಿಲ್ಲ. ಇದೂ ಕೂಡ ಗಿಡಗಳು ಜಾತಿಯ ಮೇಲೆ ಅವಲಂಬಿತವಾಗುತ್ತದೆ. ❖

ಕೆಲವು ಸಲಹೆಗಳು

- ಗಿಡ ಬೆಳೆಸುವಾಗ ಟ್ರೆಂಡಿ ಆಗಿ ಇರುವ ಗಿಡಗಳ ಜಾತಿಗಳನ್ನು ಆರಿಸಿಕೊಳ್ಳದೇ ನಿಮ್ಮ ಮನೆಯ ಹವಾಗುಣಕ್ಕೆ ಹೊಂದುವ ಗಿಡಗಳನ್ನು ಆರಿಸಿಕೊಳ್ಳಿ
- ಒಮ್ಮೆಲೆ ಹತ್ತು ಹಲವು ಗಿಡಗಳನ್ನು ಖರೀದಿಸಿ, ಯಾವುದೇ ಗಿಡದ ಬಗೆಗೆ ಹೆಚ್ಚಿಗೆ ಗಮನ ನೀಡಲು ಆಗದಂತೆ ಮಾಡಿಕೊಳ್ಳಬೇಡಿ
- ನೀರೊಂದಿದ್ದರೆ ಸಾಕು ಗಿಡಗಳು ಚೆನ್ನಾಗಿ ಬೆಳೆಯುತ್ತವೆ ಎಂದುಕೊಳ್ಳುವುದು ತಪ್ಪು. ಅವಕ್ಕೆ ಗೊಬ್ಬರಗಳ ವ್ಯವಸ್ಥೆಯನ್ನೂ ಮಾಡಬೇಕು
- ಕೆಲವು ಜಾತಿಯ ಗಿಡಗಳಿಗೆ ಕೆಲವು ಮಣ್ಣಿನ ಜಾತಿ ಸೂಕ್ತವಾಗಿರುತ್ತವೆ. ಗಿಡ ತರುವ ಮೊದಲು ಇದರ ಅಧ್ಯಯನ ಅಗತ್ಯ
- ಮನೆಯಲ್ಲಿ ಗಿಡದ ಕುಂಡಗಳನ್ನು ಇಡುವಾಗ ಅದರ ಬೆಳವಣಿಗೆ ದೃಷ್ಟಿಯಿಂದ ಜಾಗವನ್ನು ಆಯ್ಕೆ ಮಾಡಿ. ಮನೆಯ ಅಂದದ ದೃಷ್ಟಿಯಿಂದ ಅಲ್ಲ

'ಇಲ್ಲಿರಲಾರೆ...' ಬಾಲನಟ ದೃಶಾಗೆ ಪ್ರಶಸ್ತಿ

ಸಿನಿಮಾ



ದೃಶಾ

'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಚಿತ್ರವು ಸ್ಪೇನ್‌ನ ಮ್ಯಾಡ್ರಿಡ್ ನಗರದಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಶಸ್ತಿಗೆ ಭಾಜನವಾಗಿದೆ.

ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ ಉಡುಪಿಯ ಬಾಲನಟ ದೃಶಾ ಕೊಡಗು ಅವರಿಗೆ ಶ್ರೇಷ್ಠ ಬಾಲನಟ ಪ್ರಶಸ್ತಿ ದೊರಕಿದೆ. ಈ ಚಿತ್ರಕ್ಕೆ ಈ ಮೊದಲು ರೋಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಶ್ರೇಷ್ಠ ಚಿತ್ರವೆಂದು ವಿಮರ್ಶಕರ ಪ್ರಶಸ್ತಿ, ಜರ್ಮನಿಯ ಸ್ಟುಟ್‌ಗಾರ್ಟ್ ಚಿತ್ರೋತ್ಸವದಲ್ಲಿ ಶ್ರೇಷ್ಠ ನಿರ್ದೇಶನ ಪ್ರಶಸ್ತಿ ಗಳಿಸಿತ್ತು.

ದೃಶಾ ಖ್ಯಾತ ರಂಗ ನಿರ್ದೇಶಕ, ಚಿತ್ರ ನಿರ್ದೇಶಕ ಹಾಗೂ ಚಿತ್ರಕಲಾವಿದ ಬಾಸುಮ ಕೊಡಗು ಅವರ ಪುತ್ರ. ಕಟಪಾಡಿಯ ಎಸ್.ವಿ.ಎಸ್ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಓದುತ್ತಿದ್ದಾರೆ. ಅನೇಕ ಕಿರು ಚಿತ್ರ, ರಂಗ ನಾಟಕಗಳಲ್ಲಿ ಅಭಿನಯಿದ್ದಾರೆ.

ಗಿರೀಶ ಕಾಸರವಳ್ಳಿ ಈ ಚಿತ್ರದ ನಿರ್ದೇಶಕರು. ಎಸ್.ವಿ. ಶಿವಕುಮಾರ್ ಅವರು ತಮ್ಮ ಸಂಗಮ ಫಿಲಂಸ್ ಲಾಂಛನದಲ್ಲಿ ಈ ಚಿತ್ರ ತಯಾರಿಸಿದ್ದಾರೆ. ಕವಿ, ಸಾಹಿತಿ ಜನಪ್ರಿಯ ಚಿತ್ರಗೀತೆ ರಚನೆಕಾರರಾದ ಜಯಂತ ಕಾಯ್ಕಿಣಿಯವರ 'ಹಾಲಿನ ಮೀಸೆ' ಕಥೆಯನ್ನಾಧರಿಸಿದೆ.

ಇದು ಕಾಸರವಳ್ಳಿಯವರ 15ನೇ ಕಥಾ ಚಿತ್ರ. ನಿರ್ಮಾಪಕ ಎಸ್.ವಿ ಶಿವಕುಮಾರರ 3ನೇ ಚಿತ್ರವೂ ಹೌದು.

ಕನ್ನಡ ಚಿತ್ರಗಳಿಗೆ ಬಂತು 'ಮೂವಿ ಗ್ಯಾರೇಜ್'

MOVI GARAGE

ಮೂವಿ ಗ್ಯಾರೇಜ್ ಲೋಗೋ

ಕನ್ನಡ ಚಲನಚಿತ್ರ ಹಾಗೂ ಕಲಾ ಪ್ರಕಾರಗಳ ಪ್ರಸಾರಕ್ಕೆ ಒಟಿಟಿ ವೇದಿಕೆಯೊಂದು ಬಂದಿದೆ. 'ಮೂವಿ ಗ್ಯಾರೇಜ್' ಕನ್ನಡದ ಓವರ್ ದಿ ಟಾಪ್ ವೇದಿಕೆ.


ಸುಜಾತಾ ಕಾಮತ್ ಅವರ ಆರ್‌ಪಿಕೆ ಎಂಟರ್‌ಪ್ರೈಸಸ್‌ನ ಡಿಜಿಟಲ್ ವೇದಿಕೆ 'ಮೂವಿ ಗ್ಯಾರೇಜ್' ಅಪ್ಲಿಕೇಷನ್‌ನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನಿಲ್ ಪುರಾಣಿಕ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಜಯರಾಜ್, ಕಾರ್ಯದರ್ಶಿ ಎನ್.ಎಂ. ಸುರೇಶ್, ಹಿರಿಯ ನಿರ್ದೇಶಕರಾದ ದಿನೇಶ್ ಬಾಬು ಸಹಿತ ವಿವಿಧ ಗಣ್ಯರು ಬಿಡುಗಡೆ ಮಾಡಿದರು.

ಬೆಂಗಳೂರಿನ ಅಂತರರಾಷ್ಟ್ರೀಯ ಕಿರುಚಿತ್ರೋತ್ಸವವನ್ನು ಈ ಬಾರಿ 'ಮೂವಿ ಗ್ಯಾರೇಜ್' ಅಪ್ಲಿಕೇಷನ್‌ನಲ್ಲಿ ಮಾಡಲಾಗಿತ್ತು. ಹಿರಿಯ ನಟರಾದ ಶ್ರೀನಿವಾಸ್ ಪ್ರಭು ಒಬ್ಬರೇ ನಟಿಸಿರುವ 'ಬಿಂಬ ಆ ತೊಂಬತ್ತು ನಿಮಿಷಗಳು' ಎಂಬ ಚಿತ್ರವನ್ನು 'ಮೂವಿ ಗ್ಯಾರೇಜ್' ತನ್ನ ಮೊದಲ ಚಿತ್ರವೆಂದು ಘೋಷಿಸಿದೆ.

ನಿರ್ಮಾಪಕರ ಹಿತದೃಷ್ಟಿ, ಪಾರದರ್ಶಕ ವ್ಯಾಪಾರ, ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಚಿತ್ರಗಳ ಮಾರ್ಕೆಟಿಂಗ್, ಚಲನಚಿತ್ರೋತ್ಸವಗಳ ಚಿತ್ರಗಳ ಪ್ರಸಾರ, ಐಒಎಸ್ / ಆ್ಯಂಡ್ರಾಯ್ಡ್ - ಟಿವಿ, ಮೊಬೈಲ್‌ನಲ್ಲಿ ವೀಕ್ಷಿಸುವ ಸೌಲಭ್ಯ, ಸೃಜನಾತ್ಮ ಆಲೋಚನೆಗಳಿಗೆ ಬೆಲೆ - ಇವುಗಳು ಮೂವಿ ಗ್ಯಾರೇಜ್‌ನ ಮುಖ್ಯಾಂಶಗಳು ಎಂದು ಕಂಪನಿ ಹೇಳಿದೆ.

ಮಾನಿಷಾದ...

ನಗರದಲ್ಲಿ ಇಂದು





ಗಿರೀಶ್ ಕಾರ್ನಾಡರ 'ಮಾನಿಷಾದ' ವನ್ನು ಆಧರಿಸಿದ ಇದೇ ಹೆಸರಿನ ನಾಟಕ ಕರ್ಣ ಥಿಯೇಟರ್ ಮೂಲಕ ಇಂದು (ಸೆ. 18) ರಂಗಶಂಕರದಲ್ಲಿ ಪ್ರದರ್ಶನಗೊಳ್ಳಲಿದೆ.

ರಾಮಾಯಣದ ಬಾಲಕಾಂಡದಲ್ಲಿ ವಾಲ್ಮೀಖಿಯ 'ಮಾನಿಷಾದ ಶಾಪ'ದ ಕಾರಣಗಳು ಹಾಗೂ ಅದರ ಪರಿಣಾಮವನ್ನು ಇಟ್ಟುಕೊಂಡು ಕಾರ್ನಾಡರು ಹೇಳಿದ ಪರಿಯೇ ವಿಶಿಷ್ಟ. ಹಾಗೆಯೇ ಉತ್ತರಕಾಂಡದಲ್ಲಿ ಮಡಿವಾಳ ಸೀತೆಯ ಬಗ್ಗೆ ಶ್ರೀರಾಮನಚಂದ್ರನ ಎದುರು ಹೇಳಿದ ಅವಹೇಳನಕಾರಿ ಮಾತುಗಳು, ಆ ಘಟನೆಯನ್ನು ಇಟ್ಟುಕೊಂಡು ಕಾರ್ನಾಡರು ಅದನ್ನು ಪುನರ್‌ಸೃಷ್ಟಿಸಿದ ಬಗೆ ಅನನ್ಯ. ಮಡಿವಾಳ ನಂತರ ಸೀತೆಯ ಕ್ಷಮೆ ಕೋರಲು ಹೊರಡುತ್ತಾನೆ. ಮಾರ್ಗದಲ್ಲಿ ವಾಲ್ಮೀಖಿಯನ್ನು ಭೇಟಿ ಮಾಡುತ್ತಾನೆ. ರಾಮನ ಆಸ್ಥಾನದಲ್ಲಿ ನಡೆದ ಅಹಿತಕರ ಘಟನೆಗಿಂತ ಮೊದಲು ಹಾಗೂ ನಂತರದ ತನ್ನ ಬದುಕಿನ ಬಗ್ಗೆ ವಿವರಿಸುತ್ತಾನೆ. ಈ ಸಂದರ್ಭದಲ್ಲಿ ವಾಲ್ಮೀಖಿ ಕೂಡ ಮೋಕ್ಷದ ಬಗ್ಗೆ ಮಾತನಾಡುತ್ತಾನೆ. ಈ ಕುತೂಹಲಕಾರಿ ಕಥೆಯನ್ನು ರಂಗದ ಮೇಲೇ ನೋಡಿ ಆನಂದಿಸಬೇಕು.

ನಾಟಕದ ರೂಪಾಂತರ ಮತ್ತು ನಿರ್ದೇಶನ: ರೇವಂತ್ ಮಾಳಿಗೆ
ಸಮಯ: ಮಧ್ಯಾಹ್ನ 3.30.
ಸ್ಥಳ: ರಂಗ ಶಂಕರ, ಜೆ.ಪಿ. ನಗರ
ಟಿಕೆಟ್ ದರ: 150 ರೂಪಾಯಿ
ಸಂಪರ್ಕಕ್ಕೆ: 8951638571



ಕಾಫಿ ಹೀರುವ ಮುನ್ನ...

ಆರೋಗ್ಯ

ಆಲಾಪ

ಬಿಸಿ ಬಿಸಿ ಹಾಲಿಗೆ ಕಾಫಿ ಪುಡಿ ಹಾಕಿ, ಸ್ವಲ್ಪ ಸಕ್ಕರೆ (ಬೇಕಾದರೆ) ಹಾಕಿಕೊಂಡು ಕುಡಿತಾ ಇದ್ರೆ ಸ್ವರ್ಗ ಅಂತ ಹೇಳೋ ಮಂದಿ ನಮ್ಮ ನಡುವೆ ಹಲವರಿದ್ದಾರೆ. ಕಚೇರಿ ತಲೆಬಿಸಿ, ಒತ್ತಡ, ಭಯ ಹೀಗೆ ನಾನಾ ಭಾವನೆಗಳು ನಮ್ಮನ್ನು ಆವರಿಸಿದಾಗ ಅದರಿಂದ ಹೊರಬರಲು ಮೊದಲು ಹೊಳೆಯುವ ಪರಿಹಾರವೇ ಕಾಫಿ ಕುಡಿಯುವುದು. ಲಾಕ್‌ಡೌನ್ ಅವಧಿಯಿಂದೀಚೆಗೆ ಕಾಫಿ ಕುಡಿಯುವವರ ಸಂಖ್ಯೆ ಹೆಚ್ಚಾಗಿದೆ ಅಂತ ಕೆಲವು ಅಧ್ಯಯನಗಳು ಹೇಳಿವೆ. ಅದು ನಿಜವೂ ಹೌದು. ಕೆಲವೊಮ್ಮೆ ಏನೂ ಕೆಲಸ ಇಲ್ಲ ಇಲ್ಲದಾಗಲೂ ಕಾಫಿ ಕುಡಿಯುವವರಿದ್ದಾರೆ. ಒಟ್ಟಿನಲ್ಲಿ ಹವ್ಯಾಸವೋ, ಚಟವೋ ಕಾಫಿ ಮತ್ತು ಟೀ ನಮ್ಮನ್ನು ಆವರಿಸಿಕೊಂಡುಬಿಟ್ಟಿವೆ.

ಈಗಂತೂ ಬಿಡಿ, ಮಳೆಗಾಲ ಶುರುವಾಗಿದೆ. ಜೋರು ಮಳೆ, ಒಂದು ಕೈಯಲ್ಲಿ ಕಾಫಿ ಇನ್ನೊಂದು ಕೈಯಲ್ಲಿ ಏನಾದರು ಕುರುಕಲು ತಿಂಡಿ; ಮನೆಯ ಹೊರಗೆ ಬಂದು ಕುರ್ಚಿ ಹಾಕಿಕೊಂಡು ಮಳೆ ನೋಡುತ್ತಾ ಕಾಫಿ ಸವಿಯುವ ಆನಂದವೇ ಬೇರೆ! ನಮ್ಮ ಮೈ ಮನಸ್ಸನ್ನು ಇಷ್ಟೊಂದು ಆವರಿಸಿರುವ ಕಾಫಿ ನಮ್ಮ ಆರೋಗ್ಯಕ್ಕೆ ಒಳ್ಳೆಯದೇ ಅಥವಾ ಕೆಟ್ಟದ್ದೆ; ಎಲ್ಲರೂ ಕುಡಿಯಬಹುದೇ ಅಥವಾ ಕೆಲವರು ಕೆಲವು ಸಮಯದಲ್ಲಿ ಕಾಫಿಯನ್ನು ಬಿಡುವುದೇ ಒಳ್ಳೆಯದೇ.. ಕಾಫಿಪ್ರಿಯರು ಇಂಥದ್ದರ ಕಡೆ ಕೂಡ ಗಮನಹರಿಸಬೇಕಾಗಿದೆ. ಕಾಫಿಯಲ್ಲಿ ಕೆಫಿನ್ ಅಂಶ ಪ್ರಧಾನವಾಗಿದ್ದು ಇದರ ಸೇವನೆ ಕೆಲವು ಆರೋಗ್ಯದ ಸಮಸ್ಯೆಗಳನ್ನು ಉಲ್ಬಣಗೊಳಿಸುತ್ತದೆ. ಕೆಲವು ಅಧ್ಯಯನಗಳು ಕೆಲವರು ಕಾಫಿಯ ಅಭ್ಯಾಸವನ್ನು ಬಿಡುವುದು ಅಥವಾ ಕಡಿಮೆ ಕುಡಿಯುವುದು ಒಳ್ಳೆಯದು ಎಂದು ಹೇಳುತ್ತವೆ. ಹಾಗಾದರೆ ತಜ್ಞರ ಪ್ರಕಾರ ಯಾರು ಕಾಫಿ ಸೇವನೆ ತ್ಯಜಿಸುವುದು ಒಳ್ಳೆಯದು ಎಂದು ನೋಡೋಣ.

1. ಇರಿಟೇಬಲ್ ಬೋವೆಲ್ ಸಿಂಡ್ರೋಮ್ ಇರುವವರು

ಈ ಸಮಸ್ಯೆ ಇದ್ದವರು ಕಾಫಿಯನ್ನು ಸೇವಿಸುವುದರಿಂದ, ಹೊಟ್ಟೆ ತೊಳಸುವುದು ಜಾಸ್ತಿಯಾಗುತ್ತದೆ. ಪದೇ ಪದೇ ಬಹಿರ್ದೆಸೆಗೆ ಹೋಗುವ ಅನಿವಾರ್ಯತೆ ಉಂಟಾಗುತ್ತದೆ. ಹೀಗಾಗಿ ಈ ಸಮಸ್ಯೆ ಇದ್ದವರು ಕಾಫಿ ಸೇವನೆಯನ್ನು ಕಡಿಮೆ ಮಾಡುವುದು ಒಳ್ಳೆಯದು.



2. ಮೂತ್ರಕೋಶ ಹೆಚ್ಚು ಕ್ರಿಯಾಶೀಲವಾಗಿದ್ದರೆ..

ಪದೇ ಪದೇ ಮೂತ್ರ ವಿಸರ್ಜನೆ ಮಾಡುವವರು ಪದೇ ಪದೇ ಕಾಫಿ ಸೇವಿಸುವುದನ್ನು ನಿಲ್ಲಿಸುವುದು ಒಳ್ಳೆಯದು. ಕಾಫಿ ಸೇವಿಸುವುದರಿಂದ ಮೂತ್ರಕೋಶಗಳು ಹೆಚ್ಚು ಸಕ್ರಿಯವಾಗುತ್ತವೆ, ಪದೇ ಪದೇ ಮೂತ್ರವಿಸರ್ಜನೆಗೆ ಹೋಗಬೇಕಾಗುತ್ತದೆ. ಈ ಸಮಸ್ಯೆ ಇದ್ದವರು ದೂರದ ಪ್ರಯಾಣದ ವೇಳೆ ಕಾಫಿಯನ್ನು ಮುಟ್ಟದೇ ಇರುವುದೇ ಒಳ್ಳೆಯದು.

3. ಗರ್ಭಿಣಿಯರು

ಗರ್ಭಿಣಿಯರು ಸಂಪೂರ್ಣವಾಗಿ ಕಾಫಿಯನ್ನು ವರ್ಜಿಸಬೇಕೆಂದೇನೂ ಇಲ್ಲ. ಗರ್ಭಿಣಿಯರು ಪ್ರತಿದಿನ 200 ಎಂ.ಜಿ. ಪ್ರಮಾಣದಷ್ಟು ಕೆಫಿನ್ ಸೇವಿಸಬಹುದು ಎಂದು ವೈದ್ಯರು ಹೇಳುತ್ತಾರೆ. ಒಂದು ಕಪ್ ಕಾಫಿಯಲ್ಲಿ ಎಷ್ಟು ಮಿಲಿಗ್ರಾಂ ಕೆಫಿನ್ ಇದೆ ಎಂಬುದರ ಆಧಾರದ ಮೇಲೆ ಎಷ್ಟು ಕಾಫಿ ಸೇವಿಸಬಹುದು ಎಂಬುದನ್ನು ವೈದ್ಯರು ಸೂಚಿಸುತ್ತಾರೆ.


4. ಹೃದಯ ಸಂಬಂಧಿ ಕಾಯಿಲೆ ಇರುವವರು

ಕಾಫಿಯು ಹೃದಯಬಡಿತದ ವೇಗ ಮತ್ತು ರಕ್ತದ ಒತ್ತಡವನ್ನು ಹೆಚ್ಚಿಸುತ್ತದೆ. ಹೃದಯ ಸಂಬಂಧಿ ಕಾಯಿಲೆ ಇರುವವರು ಕಾಫಿಯನ್ನು ಸೇವಿಸಿದರೆ, ಹೃದಯದ ಮೇಲೆ ಒತ್ತಡ ಹೆಚ್ಚಾಗುವ ಅಪಾಯವಿರುತ್ತದೆ. ಹೀಗಾಗಿ ಅಂತಹವರು ಕಾಫಿಯನ್ನು ವರ್ಜಿಸುವುದು ಒಳಿತು.

5. ನಿದ್ದೆಯ ಸಮಸ್ಯೆ ಇರುವವರು

ಕಾಫಿ ಸೇವನೆಯು ನಮ್ಮನ್ನು ಹೆಚ್ಚು ಜಾಗೃತರಾಗಿ ಇರುವಂತೆ ಮಾಡುತ್ತದೆ. ನಿದ್ದೆಯ ಸಮಸ್ಯೆ ಇರುವವರು ಕಾಫಿ ಸೇವಿಸಿದರೆ ನಿದ್ದೆ ಮತ್ತಷ್ಟು ಕಡಿಮೆಯಾಗುತ್ತದೆ. ಹೀಗಾಗಿ ನಿದ್ದೆಗೆ ಹೋಗುವ ಮುನ್ನ ಕನಿಷ್ಠ ಎಂಟು ತಾಸಿನ ಅವಧಿಯಲ್ಲಿ ಕಾಫಿ ಸೇವಿಸದೇ ಇರುವುದು ಒಳ್ಳೆಯದು.

ದೇಹತೂಕ ಹೆಚ್ಚುತ್ತಲೇ ಇರಲು ಇದೂ ಕಾರಣ!



ಕೊರೋನಾ ಸೋಂಕು ಕಾಣಿಸಿಕೊಂಡ ಮೇಲೆ ನಮ್ಮ ಜೀವನಶೈಲಿಯಲ್ಲಿ ಹಲವು ರೀತಿಯ ಬದಲಾವಣೆಗಳಾಗಿವೆ. ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದೇವೆ, ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಮನೆಯಿಂದ ಹೊರ ಹೋಗುವುದು ಕಡಿಮೆ ಮಾಡಿದ್ದೇವೆ. ಇದರೊಂದಿಗೆ ಫಿಟ್‌ನೆಸ್ ಬಗ್ಗೆ ಗಮನ ಹರಿಸುವುದನ್ನೂ ಮರೆತಿದ್ದೇವೆ. ಆ ಕಾರಣಕ್ಕೆ ದೇಹತೂಕದಲ್ಲಿ ವ್ಯತ್ಯಾಸವಾಗಿದೆ.

‘ಕೋವಿಡ್ ಬಂದಾಗಿನಿಂದ ನಾನು ತುಂಬಾನೇ ದಪ್ಪವಾಗಿದ್ದೇನೆ. ಈಗ ತೂಕ ಇಳಿಸಲು ಹರಸಾಹಸ ಮಾಡುತ್ತಿದ್ದೇನೆ. ಆದರೂ ತೂಕ ಇಳಿಸಲು ಸಾಧ್ಯವಾಗುತ್ತಿಲ್ಲ. ಹಳೆಯ ಡ್ರೆಸ್‌ಗಳು ಒಂದೂ ಆಗುತ್ತಿಲ್ಲ. ಏನು ಮಾಡಬೇಕು ತೋಚುತ್ತಿಲ್ಲ’ ಎಂದು ಗೋಳು ತೋಡಿಕೊಳ್ಳುವವರೇ ಹಲವರು.

ಜಿಮ್‌ನಲ್ಲಿ ವರ್ಕೌಟ್, ಆಹಾರದಲ್ಲಿ ಡಯೆಟ್ ಪಾಲಿಸುತ್ತಿದ್ದರೂ ದೇಹತೂಕ ಕಡಿಮೆಯಾಗುತ್ತಿಲ್ಲ ಎಂದು ಬೇಸರಿಸುತ್ತಾರೆ. ಆದರೆ ಇದಕ್ಕೆ ಕೆಲವು ಪ್ರಮುಖ ಕಾರಣಗಳಿವೆ. ಈ ಕಾರಣಗಳು ದೇಹತೂಕ ಕಡಿಮೆ ಮಾಡಿಕೊಳ್ಳಲು ನಿಮ್ಮನ್ನು ಅಡ್ಡಿಪಡಿಸುತ್ತಿವೆ.

ವಾರಾಂತ್ಯದ ತಪ್ಪು

ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ ಬೇಗ ಎದ್ದು ಜಿಮ್, ವರ್ಕೌಟ್, ಯೋಗ ಮಾಡಿ ಸರಿಯಾದ ಆಹಾರಕ್ರಮ ಪಾಲಿಸುವ ನಾವು ವಾರಾಂತ್ಯದಲ್ಲಿ ಇದಕ್ಕೆಲ್ಲಾ ಬ್ರೇಕ್ ಹಾಕುತ್ತೇವೆ. ವಾರವಿಡೀ ಡಯೆಟ್ ಆಹಾರ ಸೇವಿಸಿದ ನಾಲಿಗೆ ರುಚಿ ಬಯಸುತ್ತದೆ ಎಂದು ವಾರಾಂತ್ಯದಲ್ಲಿ ಸಿಕ್ಕಿದ್ದನ್ನೆಲ್ಲಾ ತಿನ್ನುತ್ತೇವೆ. ಇದು ಸರಿಯಲ್ಲ. ಡಯೆಟ್ ಕ್ರಮವನ್ನು ವಾರಪೂರ್ತಿ ಸರಿಯಾದ ಕ್ರಮದಲ್ಲಿ ಪಾಲಿಸುವುದು ಸೂಕ್ತ. ಇದರೊಂದಿಗೆ ವಾರಾಂತ್ಯದಲ್ಲಿ ವರ್ಕೌಟ್ ಮಾಡದೇ ಇರುವುದು ಸರಿಯಲ್ಲ ಅಥವಾ ವಾರದ ದಿನಗಳಲ್ಲಿ ವರ್ಕೌಟ್ ಮಾಡದೇ ವಾರಾಂತ್ಯದಲ್ಲಿ ನಾಲ್ಕೈದು ಗಂಟೆಗಳ ಕಾಲ ವರ್ಕೌಟ್ ಮಾಡುವುದು ಸಲ್ಲ.

ತಯಾರಿ ಸರಿಯಾಗಿರಲಿ

ದೇಹತೂಕ ಇಳಿಸುವುದು ಸುಲಭವಲ್ಲ. ಹಾಗಾಗಿ ಡಯೆಟ್ ಅಥವಾ ಆಹಾರಕ್ರಮ ಪಾಲಿಸುವ ಮೊದಲು ತಯಾರಿ ಇರಬೇಕು. ತಿನ್ನುವ ಆಹಾರ ಹಾಗೂ ವರ್ಕೌಟ್ ಸೇರಿದಂತೆ ಇತರ ಜೀವನಶೈಲಿಗೆ ಸಂಬಂಧಿಸಿ ಮಾನಸಿಕ ಹಾಗೂ ದೈಹಿಕವಾಗಿ ಮೊದಲೇ ಸಿದ್ಧರಾಗಿರಬೇಕು. ಹೊರಗಡೆಯ ಆಹಾರಕ್ಕೆ ಕಡಿವಾಣ ಹಾಕಬೇಕು. ಆರೋಗ್ಯಕ್ಕೆ ಉತ್ತಮ ಎನ್ನಿಸುವ ಆಹಾರವಾದರೂ ಹೊರಗಡೆಯ ಆಹಾರ ಸೇವಿಸದೇ ಇರುವುದು ಉತ್ತಮ.

ತೂಕದ ಬಗ್ಗೆ ತಲೆ ಕೆಡಿಸಿಕೊಳ್ಳದಿರಿ

ದೇಹತೂಕ ಹೆಚ್ಚಾದ ಕೂಡಲೇ ಹಲವರು ಈ ಬಗ್ಗೆ ಅಗತ್ಯಕ್ಕಿಂತ ಹೆಚ್ಚಾಗಿಯೇ ತಲೆ ಕೆಡಿಸಿಕೊಳ್ಳುತ್ತಾರೆ. ತಾವು ಹಿಂದೆ ಧರಿಸುತ್ತಿದ್ದ ಬಟ್ಟೆಗಳು ಆಗುತ್ತಿಲ್ಲ, ಟೀ ಶರ್ಟ್ ಧರಿಸಿದರೆ ಹೊಟ್ಟೆ ಕಾಣಿಸುತ್ತದೆ, ಕುರ್ತಾ ಧರಿಸಲು ಆಗುವುದೇ ಇಲ್ಲ ಎಂದೇ ಹೆಚ್ಚಿಗೆ ತಲೆ ಕೆಡಿಸಿಕೊಳ್ಳುತ್ತಾರೆ. ಆ ಬದಲು ನಿಮ್ಮ ಗಮನವನ್ನು ಹೆಚ್ಚಿನ ವರ್ಕೌಟ್ ಮೇಲೆ ನೀಡಿದರೆ ಉತ್ತಮ. ಆಹಾರ ನಿಯಂತ್ರಣ ಹಾಗೂ ಜಿಮ್, ಯೋಗದ ಮೇಲೆ ಗಮನವಿರಬೇಕು.

ಅಗತ್ಯದಷ್ಟು ಮಾಡುತ್ತಿಲ್ಲ

ವಾಕಿಂಗ್, ರನ್ನಿಂಗ್, ಜಿಮ್‌ನಲ್ಲಿ ವರ್ಕೌಟ್, ಯೋಗ ಯಾವುದೇ ಇರಲಿ ನಮ್ಮ ದೇಹಕ್ಕೆ ಎಷ್ಟು ಅಗತ್ಯವೋ ಅಷ್ಟು ಮಾಡಲೇಬೇಕು. ಅದನ್ನು ಬಿಟ್ಟು ಮನಸ್ಸಿಗೆ ತೋಚಿದಷ್ಟು ಹೊತ್ತು ಮಾಡಿ ಬಿಡುವುದಲ್ಲ. ವಾಕಿಂಗ್ ಮಾಡುವುದಾದರೂ ಕನಿಷ್ಠ 5 ಕಿಲೋಮೀಟರ್ ನಡೆಯಬೇಕು. ಜಿಮ್‌ನಲ್ಲಿ ಕನಿಷ್ಠ ಒಂದು ಗಂಟೆ ಕಾಲ ವರ್ಕೌಟ್ ಮಾಡುವುದು ಉಚಿತ.

ಹಾರ್ಮೋನ್‌ನಲ್ಲಿನ ಅಸಮತೋಲನ

ಇತ್ತೀಚೆಗೆ ಜೀವನಶೈಲಿಯಲ್ಲಿನ ಬದಲಾವಣೆಯ ಕಾರಣದಿಂದ ಹಾರ್ಮೋನ್‌ನಲ್ಲಿ ವ್ಯತ್ಯಾಸವಾಗುವುದು ಸಾಮಾನ್ಯವಾಗಿದೆ. ಆ ಕಾರಣಕ್ಕೆ ಹಾರ್ಮೋನ್‌ನಲ್ಲಿ ಅಸಮತೋಲನವಿರುವವರು ಹೆಚ್ಚು ಹೆಚ್ಚು ವರ್ಕೌಟ್ ಮಾಡುವುದರಿಂದ ದೇಹ ತೂಕದಲ್ಲಿ ಅಷ್ಟೊಂದು ಬದಲಾವಣೆ ಕಾಣಲು ಸಾಧ್ಯವಿರುವುದಿಲ್ಲ. ಹಾಗಾಗಿ ನಿಮಗೆ ಯಾವ ಕಾರಣಕ್ಕೆ ದೇಹತೂಕದಲ್ಲಿ ಬದಲಾವಣೆಯಾಗುತ್ತದೆ ಎಂಬುದನ್ನು ನೋಡಿಕೊಂಡು ಅದಕ್ಕೆ ಹೊಂದುವ ವ್ಯಾಯಾಮ, ಯೋಗ ಮಾಡಿ.

ಚಳಿಗಾಲದ ಚರ್ಮ ಸಮಸ್ಯೆಗೆ ವಿಟಮಿನ್ ಸಿ

ಮುಂದೆ ಬರುವ ಚಳಿಗಾಲಕ್ಕೆ ನಾವು ತಯಾರಾಗಬೇಕಿದೆ. ಚಳಿಗಾಲ ಎಂದಾಕ್ಷಣ ಮೊದಲು ನಮ್ಮ ನೆನಪಿಗೆ ಬರುವುದು ಒಣಗಿದ ಚರ್ಮ. ಅದರ ಜೊತೆಗೆ ಬರುವ ತುರಿಕೆ, ಅದರಿಂದ ಪುಡಿಪುಡಿಯಾಗಿ ಉದುರುವ ಒಣಚರ್ಮ. ಈ ರೀತಿ ಆಗುವುದು ತುಸು ಮಟ್ಟಿಗೆ ಮುಜುಗರವೇ ಸರಿ. ಸೂರ್ಯ ಬಿಸಿಲಿಗೆ ತೆರೆದುಕೊಂಡಾಗ ಚರ್ಮ ಹಾಳಾಗುವುದು. ಒಂದೊಂದು ಕಾಲಕ್ಕೆ ಒಂದೊಂದು ರೀತಿಯ ಚರ್ಮದ ಸಮಸ್ಯೆ. ಇದಕ್ಕೆಲ್ಲಾ ಪರಿಹಾರ ‘ವಿಟಮಿನ್ ಸಿ’ ಎನ್ನುವುದು ತಜ್ಞರ ಅಭಿಪ್ರಾಯ.



ಸೌಂದರ್ಯ

ವಿಟಮಿನ್ ಸಿ ನಮ್ಮ ಚರ್ಮದ ಅಂದವನ್ನು, ಕಾಂತಿಯನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಚರ್ಮದ ಕೋಶಗಳ ಬಲವರ್ಧನೆಯಲ್ಲೂ ಇದರ ಪಾತ್ರ ಪ್ರಮುಖವಾದುದು. ಹವಾಗುಣದಿಂದ ಬರುವ ಚರ್ಮದ ಎಲ್ಲಾ ಸಮಸ್ಯೆಗಳಿಗೂ ವಿಟಮಿನ್ ಸಿ ಉತ್ತಮ ಮದ್ದಾಗಿದೆ.

ಹಾಗಾದರೆ, ವಿಟಮಿನ್ ಸಿ ನಮ್ಮ ಚರ್ಮದ ಆರೋಗ್ಯಕ್ಕೆ ಹೇಗೆ ಉತ್ತಮವಾಗಿದೆ, ಬನ್ನಿ ನೋಡೋಣ:

- ಹೊರ ವಾತಾವರಣದಿಂದ ಉಂಟಾಗುವ ಹಲವು ಚರ್ಮ ಸಂಬಂಧಿ ಸಮಸ್ಯೆಗಳಿಗೆ ಇದು ರಾಮಬಾಣ. ಚರ್ಮಕ್ಕೆ ನೇರವಾಗಿ ಬೀಳುವ ಅತಿ ನೇರಳೆಯಂಥ ಕಿರಣಗಳಿಂದ ವಿಟಮಿನ್ ಸಿ ನಮ್ಮ ಚರ್ಮವನ್ನು ಕಾಪಾಡುತ್ತದೆ. ಮೊದಲೇ ಹೇಳಿದ ಹಾಗೆ ವಿಟಮಿನ್ ಸಿ, ಚರ್ಮದ ಕೋಶಗಳ ಬಲವನ್ನು ಹೆಚ್ಚಿಸುವ ಕಾರಣದಿಂದ ಹೊರಗಿನ ಇಂಥ ಕಿರಣಗಳಿಂದ ಚರ್ಮವನ್ನು ಕಾಪಾಡುತ್ತದೆ.
- ಚರ್ಮ ಒಡೆಯುವ ಸಮಸ್ಯೆಗೆ ಮತ್ತು ಎಣ್ಣೆ ಚರ್ಮಕ್ಕೆ ವಿಟಮಿನ್ ಸಿ ಉತ್ತಮ ಔಷಧವಾಗಿದೆ. ಇದು, ಚರ್ಮದಲ್ಲಿನ ಜಿಡ್ಡಿನ ಅಂಶವನ್ನು ತೆಗೆದುಹಾಕುವುದರ ಜೊತೆಗೆ, ಚರ್ಮವನ್ನು ನುಣುಪುಗೊಳಿಸುತ್ತದೆ. ಚರ್ಮದಿಂದ ಉಂಟಾಗುವ ಉರಿಯನ್ನು ಸಹ ಈ ವಿಟಮಿನ್ ಸರಿಪಡಿಸುತ್ತದೆ.
- ಚರ್ಮದಲ್ಲಿನ ಕಲೆಗಳನ್ನು ತಡೆಯುವುದರಲ್ಲಿ ವಿಟಮಿನ್ ಸಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಲ್ಲಿರುವ ಟೈರೊಸಿನೇಸ್ ಎನ್ನುವ ಅಂಶವು ಈ ಕೆಲಸವನ್ನು ಮಾಡುತ್ತದೆ.
- ಮ್ಯಾಗ್ನೇಷಿಯಂ ಅಸ್ಕೊರೊಬೈಲ್ ಫಾಸ್ಪೇಟ್ ಎನ್ನುವ ಅಂಶ ವಿಟಮಿನ್ ಸಿ ನಲ್ಲಿ ಇರುವುದರಿಂದ, ಇದು ಚರ್ಮ ಒಣಗುವುದನ್ನು ತಡೆಗಟ್ಟುತ್ತದೆ. ಚರ್ಮವು ತೇವವನ್ನು ಹಿಡಿದಿಟ್ಟುಕೊಳ್ಳುವಂತೆ ಇದು ಮಾಡುತ್ತದೆ.
- ಕೊಲಿಜನ್ ಎನ್ನುವುದು ಒಂದು ರೀತಿಯ ಪ್ರೊಟೀನ್. ಇದು ಚರ್ಮದ ಆರೋಗ್ಯಕ್ಕೆ ತುಂಬಾ ಪೂರಕವಾದ ಪ್ರೊಟೀನ್ ಆಗಿದೆ. ವಿಟಮಿನ್ ಸಿ ಈ ಪ್ರೊಟೀನ್ ಅಂಶವನ್ನು ದೇಹದಲ್ಲಿ ಹೆಚ್ಚಿಸುತ್ತದೆ. ಇದು ಚರ್ಮದ ಎಲ್ಲಾ ರೀತಿಯ ಸಮಸ್ಯೆಯಿಂದ ಪರಿಹಾರ ಒದಗಿಸುತ್ತದೆ.

ಚಳಿಗಾಲದಲ್ಲಿ ವಿಟಮಿನ್ ಸಿ ಯುಕ್ತ ಹಣ್ಣು, ತರಕಾರಿಗಳನ್ನು ಹೆಚ್ಚು ಹೆಚ್ಚು ಸೇವಿಸುವುದು ಉತ್ತಮ ರೂಢಿ. ಕಿತ್ತಳೆ, ಪೇರಳೆ ಹಣ್ಣು, ಕಿವಿ ಹಣ್ಣು, ಪಪಾಯ, ಸ್ಟ್ರಾಬೆರಿ, ಕ್ಯಾಪ್ಸಿಕಮ್, ನಿಂಬೆಹಣ್ಣುಗಳನ್ನು ನಮ್ಮ ಆಹಾರದಲ್ಲಿ ಹೆಚ್ಚು ಹೆಚ್ಚು ಸೇವಿಸುವುದರಿಂದ ಚರ್ಮದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ವಿಟಮಿನ್ ಸಿ ಚರ್ಮದ ಸಮಸ್ಯೆಗಳಿಗೆ ಉತ್ತಮ ಮದ್ದು ಎನ್ನುವುದರಲ್ಲಿ ಅನುಮಾನವೇ ಬೇಡ. ಮೇಲೆ ತಿಳಿಸಿದ ಎಲ್ಲದರ ಬಗ್ಗೆ ಗಮನ ಹರಿಸಲು ಸಾಧ್ಯವಾಗಲಿಲ್ಲ ಎಂದಾದರೆ ಬಿಡಿ, ಸುಮ್ಮನೆ ಅಂಗಡಿಗೆ ಹೋಗಿ ವಿಟಮಿನ್ ಸಿ ಇರುವ ಸೀರಂ ಒಂದನ್ನು ಖರೀದಿ ಮಾಡಿ ದೇಹಕ್ಕೆ ಹಚ್ಚಿಕೊಳ್ಳಿ. ಬೇರೆ ಏನನ್ನೂ ಮಾಡುವ ಯೋಚನೆ ಇಲ್ಲ. ಇದು ಚರ್ಮದ ಸಂಪೂರ್ಣ ಆರೋಗ್ಯವನ್ನು ನೋಡಿಕೊಳ್ಳುತ್ತದೆ.

ಸಿನಿ ಹನಿ

‘ತ್ರಿಬಲ್ ರೈಡಿಂಗ್’ ಮುಗಿಸಿದ ಗಣಿ

‘ನನಗೆ ಹುಡ್‌ಗೀರು ಅಂದ್ರೆ ಇಷ್ಟ ಇಲ್ಲ. ಐ ಹೇಟ್ ಗರ್ಲ್ಸ್’...

ಹೀಗೊಂದು ಡೈಲಾಗ್ ನಟ ಗಣೇಶ್ ಅವರ ಬಾಯಿಂದ ಬಂದರೆ ಪ್ರೇಕ್ಷಕರಿಗೇ ಒಂದು ಕ್ಷಣ ಆಶ್ಚರ್ಯವಾಗಬಹುದು. ಇಂತಹ ವಿಭಿನ್ನವಾದ ಕಥಾಹಂದರ ಹೊಂದಿರುವ ಕಾಮಿಡಿ ಫ್ಯಾಮಿಲಿ ಎಂಟರ್‌ಟೈನರ್ ಚಿತ್ರ ‘ತ್ರಿಬಲ್ ರೈಡಿಂಗ್’. ಮಹೇಶ್ ಗೌಡ ನಿರ್ದೇಶನದ ಈ ಚಿತ್ರದ ಚಿತ್ರೀಕರಣ ಶುಕ್ರವಾರ ಪೂರ್ಣಗೊಂಡಿದ್ದು, ‘ಇದೊಂದು ಸಂಪೂರ್ಣ ಮನರಂಜನೆಯ’ ಚಿತ್ರ ಎಂದಿದ್ದಾರೆ ಗಣೇಶ್.

ಗಣೇಶ್ ಜನ್ಮದಿನದಂದು(ಜು.2) ಚಿತ್ರದ ಟೀಸರ್ ಬಿಡುಗಡೆಯಾಗಿತ್ತು. ಗಣೇಶ್ ಹಾಗೂ ಸಾಧುಕೋಕಿಲ ಜೋಡಿ ಟೀಸರ್‌ನಲ್ಲೇ ಹಾಸ್ಯದ ಕಚಗುಳಿಯನ್ನು ಇಟ್ಟಿತ್ತು. ಯೋಗರಾಜ್ ಭಟ್ ನಿರ್ದೇಶನದ ‘ಗಾಳಿಪಟ-2’, ಸುನಿ ನಿರ್ದೇಶನದ ‘ಸಖತ್’ ಸಿನಿಮಾದ ಚಿತ್ರೀಕರಣ ಪೂರ್ಣಗೊಳಿಸಿದ್ದ ಗಣೇಶ್ ‘ತ್ರಿಬಲ್ ರೈಡಿಂಗ್’ಗೆ ಹೊರಟಿದ್ದರು. ಈ ಚಿತ್ರದ ಮೂಲಕ ಕಿರುತೆರೆ ನಟಿ ಮೇಘ ಶೆಟ್ಟಿ ಸ್ಯಾಂಡಲ್‌ವುಡ್‌ಗೆ ಪ್ರವೇಶಿಸುತ್ತಿದ್ದು, ಅದಿತಿ ಪ್ರಭುದೇವ ಹಾಗೂ ರಚನಾ ಇಂದರ್ ಕೂಡಾ ಚಿತ್ರದಲ್ಲಿದ್ದಾರೆ.

